ಜನವರಿ 2020

₹ 15/-

# ಯುಗರಶ್ಮಿ

## ತ್ರೈಮಾಸಿಕ




- ಹಿಂದೂ – ಮುಸ್ಲಿಂ ಐಕ್ಯ
- ಶಾಶ್ವತ ಶಾಂತಿಯ ಅಂತರಿಕ್ಷದ ಗಳಿಕೆ
- ಯಥಾರ್ಥ ಸತ್ಯವಿಶ್ವಾಸಿಯ ಗುಣಲಕ್ಷಣಗಳು
- ದೇವಾಸ್ತಿತ್ವದ ಹತ್ತು ಸಾಕ್ಷ್ಯಗಳು
- ಇಸ್ಲಾಮ್ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ
- ಶೈಕ್ಷಣಿಕ ಮೇಲ್ಮೆ ಗಳಿಸುವ ಮೂಲಕ ಸೌಹಾರ್ದ ಸ್ಥಾಪನೆ
- ಇಸ್ಲಾಮ್ : ಮಹಿಳೆಯರ ಹಕ್ಕುಗಳ ನೈಜ ರಕ್ಷಕ
- ಹಝ್ರತ್ ಈಸಾ ಮಸೀಹರ[ಅ] ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು

"ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ."
(ಪವಿತ್ರ ಖುರ್‌ಆನ್ 4 : 59)

## ಯುಗರಶ್ಮಿ

**ವಿಷಯ ಸೂಚಿಕೆ** **ಪುಟ**


| ವಿಷಯ | ಪುಟ |
|---|---|
| ✤ ಹಿಂದೂ – ಮುಸ್ಲಿಂ ಐಕ್ಯ | 1 |
| ✤ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ✤ ಶಾಶ್ವತ ಶಾಂತಿಯ ಅಂತರಿಕ್ಷದ ಗಳಿಕೆ | 3 |
| ✤ ಯಥಾರ್ಥ ಸತ್ಯವಿಶ್ವಾಸಿಯ ಗುಣಲಕ್ಷಣಗಳು | 9 |
| ✤ ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು | 2 |
| ✤ ಇಸ್ಲಾಮ್ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ | 17 |
| ✤ ಶೈಕ್ಷಣಿಕ ಮೇಲ್ಮೆ ಗಳಿಸುವ ಮೂಲಕ ಸೌಹಾರ್ದ ಸ್ಥಾಪನೆ | 21 |
| ✤ ಇಸ್ಲಾಮ್ : ಮಹಿಳೆಯರ ಹಕ್ಕುಗಳ ನೈಜ ರಕ್ಷಕ | 24 |
| ✤ ಮೃತರಾದ ಜನರು ಪುನಃ ಜೀವಂತರಾಗಿ ಲೋಕಕ್ಕೆ ಮರಳಿ ಬರಲಾರರು | 29 |
| ✤ ಅಹ್ಮದಿಯಾ ವಾರ್ತೆಗಳು | 33 |
| * ಬೆಂಗಳೂರು ಪುಸ್ತಕ ಉತ್ಸವ * ನೆರೆ ಸಂತ್ರಸ್ತರಿಗೆ ಹ್ಯುಮಾನಿಟಿ ಫಸ್ಟ್ ನೆರವು<br>* ಈದ್ ಮಿಲಾದ್:ರೋಗಿಗಳಿಗೆ ಹಣ್ಣು ಹಂಪಲು ವಿತರಣೆ<br>* ಶಾಲೆಯಲ್ಲಿ ಗುಂಡಿನ ದಾಳಿ : 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮಸೀದಿಯಲ್ಲಿ ಆಶ್ರಯ ನೀಡಿದ ವಿದ್ಯಾರ್ಥಿನಿ<br>* ಕೂಡಾಳಿ ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಆಚರಣೆ<br>* ಪಯಂಗಾಡಿ ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಆಚರಣೆ – ಸಮಾರೋಪ ಸಮ್ಮೇಳನ * ಪ್ರತಿಭೆ | |
| ✤ ನಿಧನ ವಾರ್ತೆಗಳು : | 36 |
| * ಜನಾಬ್ ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬ್ * ಜನಾಬ್ ಎಂ.ಕೆ. ಇಂಬಿಚ್ಚಿಕೋಯಟ್ಟಿ ಸಾಹಿಬ್<br>* ಜನಾಬ್ ವಿ. ಅಬ್ದುರಹೀಮ್ ಸಾಹಿಬ್ * ಅಮತುಲ್ ಹಫೀಝು ಸಾಹಿಬ * ಶ್ರೀಮತಿ ಆಯಿಷಾಬಿ ಸಾಹಿಬ | |
| ✤ ಓದಿದ್ದು : | 38 |
| * ರಾಮ ಹುಟ್ಟಿದ್ದು ಭಾರತದಲ್ಲಿ ಅಲ್ಲ, ಥೈಲಾಂಡ್‌ನಲ್ಲಿ: ಬಹಿರಂಗ ಚರ್ಚೆಗೆ ಆಹ್ವಾನ<br>* ಧಾರ್ಮಿಕ ಅಲ್ಪ ಸಂಖ್ಯಾತರ ವಿರುದ್ಧ ತಾರತಮ್ಯ: ವಿಶ್ವಸಂಸ್ಥೆಯ ಆಯೋಗದ ವರದಿಯಲ್ಲಿ ಪಾಕ್‌ಗೆ ಖಂಡನೆ<br>* ಅತ್ಯಾಚಾರ ಆರೋಪ: ಸ್ವಾಮಿ ಚಿನ್ಮಯಾನಂದ ಸೆರೆ * ಪಾದ್ರಿಯಿಂದ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ<br>* 'ಕಲ್ಕಿ ಭಗವಾನ್' ಬಳಿ 409 ಕೋಟಿ ರೂ. ಪತ್ತೆ * ಜಕೀರ್‌ನನ್ನು ಆರ್ಥಿಕ ಅಪರಾಧಿ ಎಂದು ಘೋಷಿಸಿ<br>* ಸಾಧ್ವಿ ಮೇಲೆ ಅತ್ಯಾಚಾರ * ವ್ಯಾಟಿಕನ್‌ಗೆ ಸನ್ಯಾಸಿನಿ ಪತ್ರ * ಐಸಿಸ್ ಬೆನ್ನೆಲುಬು ಬಾಗ್ದಾದಿ ಹತ<br>* ದ್ವೇಷಕ್ಕೆ ಜಕೀರ್ ದೇಣಿಗೆ * 4ನೇ ಕ್ಲಾಸ್ ಪರೀಕ್ಷೆ ಬರೆದ 105ರ ಅಜ್ಜಿ!<br>* ಸೂರ್ಯನಿಗಿಂತ 70 ಪಟ್ಟು ದೈತ್ಯ ಕಪ್ಪು ರಂಧ್ರ ಪತ್ತೆ<br>* 50 ಪೈಸೆ ಸಾಲ ಬಾಕಿ : ಗ್ರಾಹಕನಿಗೆ ಎಸ್‌ಬಿಐ ನೋಟೀಸು ಜಾರಿ! | |
| ✤ ವಖ್ಫೆ ಜದೀದ್ ಬಗ್ಗೆ ಸುತ್ತೋಲೆ | 42 |
| ✤ ಮಾಜಿ ರಾಜ್ಯಪಾಲ ಟಿ.ಎನ್. ಚತುರ್ವೇದಿ ನಿಧನಕ್ಕೆ ಸಂತಾಪ | |
| ✤ ಅಹ್ಮದಿಯರಿಗೆ ಖಲೀಫರ ಸಂದೇಶ | 43 |


ಮುಖಪುಟ ಚಿತ್ರ : ಜರ್ಮನಿಯ ಫುಲ್ಡ ಎಂಬಲ್ಲಿ 20–10–2019ರಂದು ಅಹ್ಮದಿಯಾ ಖಲೀಫರಿಂದ ಉದ್ಘಾಟಿಸಲ್ಪಟ್ಟ "ಬೈತುಲ್ ಹಮೀದ್" ಮಸ್ಜಿದ್


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–

ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಸಂಪರ್ಕಿಸಿರಿ : 9900410789

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


ಜನವರಿ 2020

ಸಂಪಾದಕ : ಮುಹಮ್ಮದ್ ಯೂಸುಫ್

| | | | |
|---|---|---|---|
| ಆರಂಭ : 1975 | ಸಂಪುಟ : 36 | ಸುಲ್ಹ್ : 1399 ಹಿಜರೀ ಶಮ್ಸೀ | ಸಂಚಿಕೆ : 2 |


## ಹಿಂದೂ – ಮುಸ್ಲಿಂ ಐಕ್ಯ

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಯಾವುದೇ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದುಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಅಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಛೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟುಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯದವರು ಇನ್ನೊಂದು ಸಮುದಾಯದವರೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

ಮಿತ್ರರೇ, ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಘಟ್ಟದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ಅತ್ಯಾವಶ್ಯಕವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಬಿಟ್ಟು ಅನುಕಂಪಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವಿತ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ **(ಮೈತ್ರಿ ಸಂದೇಶ)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳು

♦ ಒಬ್ಬ ವ್ಯಕ್ತಿ ಖರ್ಚು ಮಾಡುವುದರ ಪೈಕಿ ಅತ್ಯುತ್ತಮವಾದ ದೀನಾರ್ ಕುಟುಂಬಕ್ಕೋಸ್ಕರ ಖರ್ಚು ಮಾಡುವುದು, ಅಲ್ಲಾಹನ ಮಾರ್ಗದಲ್ಲಿ ತನ್ನ ವಾಹನಕ್ಕಾಗಿ ಖರ್ಚು ಮಾಡುವುದು ಮತ್ತು ಅಲ್ಲಾಹನ ಮಾರ್ಗದಲ್ಲಿ ತನ್ನ ಒಡನಾಡಿಗಳಿಗೆ ಖರ್ಚುಮಾಡುವುದಾಗಿದೆ. **(ಮುಸ್ಲಿಂ)**

♦ ಅಲ್ಲಾಹನ ಪ್ರತಿಫಲ ಬಯಸಿ ತನ್ನ ಕುಟುಂಬಕ್ಕೋಸ್ಕರ ಖರ್ಚು ಮಾಡುವುದಾದರೆ ಅದಕ್ಕೂ ಸದಖ (ದಾನಧರ್ಮ)ದ ಪ್ರತಿಫಲ ಲಭಿಸುವುದು. **(ಬುಖಾರಿ, ಮುಸ್ಲಿಂ)**

♦ ಮಾತಾಪಿತರನ್ನು ದ್ರೋಹಿಸುವುದು, ಹಕ್ಕುಗಳನ್ನು ನಿರಾಕರಿಸುವುದು, ಅನರ್ಹವಾದುದನ್ನು ಕೇಳಿ ಪಡೆಯುವುದು, ಹೆಣ್ಣು ಮಕ್ಕಳನ್ನು ಜೀವಂತವಾಗಿ ಹೂಳುವುದು ಅಲ್ಲಾಹನು ನಿಮಗೆ ನಿಷಿದ್ಧಗೊಳಿಸಿದ್ದಾನೆ. ಊಹಾಪೋಹಗಳನ್ನು ಪ್ರಚಾರ ಮಾಡುವುದು, ಅನ್ಯರ ಸ್ಥಿತಿಗತಿಗಳನ್ನು ಅನಾವಶ್ಯಕವಾಗಿ ವಿಚಾರಿಸಿ ತಿಳಿಯುವುದು, ಸಂಪತ್ತನ್ನು ದುರ್ವ್ಯಯ ಮಾಡುವುದು ನಿರೋಧಿಸಲಾಗಿದೆ. **(ಬುಖಾರಿ ಮುಸ್ಲಿಂ)**

♦ ನಮಾಝ್ ಮಾಡುವ ಸ್ಥಳಗಳಲ್ಲಿ ಅಂಗಡಿಯಂತೆ ಶಬ್ದ ಕೋಲಾಹಲಗಳು ಉಂಟಾಗದಂತೆ ಜಾಗ್ರತೆ ವಹಿಸಬೇಕು. **(ಮುಸ್ಲಿಂ)**

♦ ರೋಗಿಯನ್ನು ಸಂದರ್ಶಿಸುವವನನ್ನು ಅಥವಾ ಅಲ್ಲಾಹನ ಸಂಪ್ರೀತಿಗೋಸ್ಕರ ತನ್ನ ಸ್ನೇಹಿತನನ್ನು ಸಂದರ್ಶಿಸುವವನನ್ನು ಕರೆದು ದೇವದೂತ ಹೇಳುವನು: ನೀನು ತೃಪ್ತನಾಗು; ನಿನ್ನ ನಡೆವಳಿಕೆ ತೃಪ್ತಿಕರವಾಗಿದೆ; ಸ್ವರ್ಗದಲ್ಲಿ ನಿನಗೊಂದು ಮನೆಯನ್ನು ನೀನು ಸಿದ್ಧಪಡಿಸಿರುವೆ. **(ತಿರ್ಮಿಧೀ)**

♦ ಒಬ್ಬನು ತನ್ನ ಸ್ನೇಹಿತನ ನಡೆವಳಿಕೆಯನ್ನು ಕೈಗೊಳ್ಳುತ್ತಾನೆ. ಆದುದರಿಂದ ನಿಮ್ಮಲ್ಲಿ ಪ್ರತಿಯೊಬ್ಬನು ಚಿಂತಿಸಿ ಸ್ನೇಹ ಬೆಳಸಬೇಕು. **(ಅಬೂದಾವೂದ್, ತಿರ್ಮಿಧೀ)**

♦ ಮನುಷ್ಯನು ತಾನು ಇಷ್ಟಪಡುವವರೊಂದಿಗೆ ಇರುತ್ತಾನೆ. **(ಬುಖಾರಿ, ಮುಸ್ಲಿಂ)**

♦ ನಾನು ಸ್ವರ್ಗಕ್ಕೆ ಇಣುಕಿ ನೋಡಿದಾಗ ಸ್ವರ್ಗವಾಸಿಗಳಾಗಿ ಅಧಿಕವೂ ದರಿದ್ರರನ್ನು ಕಾಣಲು ಸಾಧ್ಯವಾಯಿತು. ಹಾಗೆಯೇ ನರಕಕ್ಕೆ ಇಣುಕಿ ನೋಡಿದಾಗ ನರಕವಾಸಿಗಳಾಗಿ ಅಧಿಕವೂ ಸ್ತ್ರೀಯರನ್ನು ನನಗೆ ಕಾಣಲು ಸಾಧ್ಯವಾಯಿತು. **(ಬುಖಾರಿ, ಮುಸ್ಲಿಂ)**

♦ ನಿಮ್ಮ ಪೈಕಿ ಯಾರಾದರೂ ತನ್ನ ಹೆಗಲ ಮೇಲೆ ಸೌದೆಯ ಕಟ್ಟನ್ನು ಹೊತ್ತುಕೊಂಡು ಬರುವುದು ಅನ್ಯರೊಡನೆ ಯಾಚಿಸುವುದಕ್ಕಿಂತ ಉತ್ತಮ. ಅವನಿಗೆ ಸಿಗಲಿ; ಸಿಗದಿರಲಿ. **(ಬುಖಾರಿ, ಮುಸ್ಲಿಂ)**

♦ ಪ್ರವಾದಿ ಝಕರಿಯ್ಯಾ[ಅ] ಒಬ್ಬ ಬಡಗಿಯಾಗಿದ್ದರು. **(ಮುಸ್ಲಿಂ)**

♦ ತಾನು ದುಡಿದು ತಿನ್ನುವುದಕ್ಕಿಂತ ಉತ್ತಮವಾದ ಆಹಾರ ಯಾರಿಗೂ ತಿನ್ನಲು ಸಾಧ್ಯವಿಲ್ಲ. ಪ್ರವಾದಿ ದಾವೂದ್[ಅ] ಸ್ವತಃ ದುಡಿದು ತಿನ್ನುತ್ತಿದ್ದರು. **(ಬುಖಾರಿ)**

# ಶಾಶ್ವತ ಶಾಂತಿಯ ಅಂತರಿಕ್ಷದ ಗಳಿಕೆ



*ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ ಮತ್ತು ಐದನೆಯ ಖಲೀಫರು*

**ಈಗ ಲೋಕವು ಚರಿತ್ರೆಯ ಅಪಾಯಕಾರಿಯಾದೊಂದು ಸನ್ನಿವೇಶದಲ್ಲಿದ್ದು ಒಂದು ಜಾಗತಿಕ ಮಹಾಯುದ್ಧವು ಪ್ರಾರಂಭವಾಗುವುದು ಹೆಚ್ಚು ಹೆಚ್ಚಾಗಿ ಸಂಭಾವ್ಯವೆಂದು ತೋರುತ್ತಾ ಇದೆ. ಸೌತ್ ಚೈನಾಸೀ ಮೊದಲುಗೊಂಡು ನೋರ್ತ್ ಕೊರಿಯ ಮತ್ತು ಇರಾನ್ ತನಕ ಥಟ್ಟನೆ ಸಂಭವಿಸಿದ ಅನೇಕ ಸಂಘರ್ಷಗಳು ಪೂರ್ಣ ಮಟ್ಟದ ಯುದ್ಧ ಪ್ರಾರಂಭವಾಗುವ ಬೆದರಿಕೆಯೊಡ್ಡಿವೆ. ಸಾಮೂಹಿಕ ವಲಸೆಯ ಕಾರಣದಿಂದ ಪಾಶ್ಚಿಮಾತ್ಯ ದೇಶಗಳ ಸಮಾಜಗಳಲ್ಲಿ ಕ್ಷೋಭೆ ತಲೆದೋರಿದೆ. ಆರ್ಥಿಕ ಸಮರಗಳು ಹೊಸದಾಗಿ ಪ್ರಾರಂಭವಾಗಿದ್ದು ದೇಶಗಳು ಬಣಗಳಾಗಿ ವಿಭಜಿತವಾಗಿವೆ. ಅನೇಕ ದೇಶಗಳು ಈಗ ಅಣು ಬಾಂಬುಗಳನ್ನು ಗಳಿಸಿರುವುದರಿಂದ ಜಾಗತಿಕ ಯುದ್ಧದ ಘೋರ ಪರಿಣಾಮಗಳು ಊಹೆಗೂ ನಿಲುಕದವುಗಳಾಗುವುವು. ಇಂತಹ ಹಿನ್ನೆಲೆಯಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಇಂದಿನ ಪರಿಸ್ಥಿತಿಯಲ್ಲಿ ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡಲು ಸಾಧ್ಯವಾಗುವುದು ಹೇಗೆ ಎಂಬುದರ ಬಗ್ಗೆ ಮಹತ್ವಪೂರ್ಣ ಸಂದೇಶ ನೀಡಿದರು. 2019 ಜುಲೈ ದಿನಾಂಕ 6ರಂದು ಜರ್ಮನಿಯ ವಾರ್ಷಿಕ ಸಮ್ಮೇಳದ (ಜಲ್ಸ ಸಾಲಾನ) ಸಂದರ್ಭದಲ್ಲಿ ಅಹ್ಮದಿಯೇತರರಾದ ಒಂದು ಸಾವಿರಕ್ಕಿಂತಲೂ ಹೆಚ್ಚು ಅತಿಥಿಗಳನ್ನು ಸಂಬೋಧಿಸಿ ಮಾಡಿದ ಭಾಷಣದ ಪೂರ್ಣ ರೂಪ ಈ ಕೆಳಗೆ ನೀಡಲಾಗಿದೆ. ವಾಚಕರು ಈ ಮಹತ್ವಪೂರ್ಣ ಭಾಷಣದ ಅಂಶಗಳನ್ನು ಗಮನಿಸುವರೆಂದು ಆಶಿಸುತ್ತೇವೆ. ಇಂದಿನ ಜಾಗತಿಕ ಬಿಕ್ಕಟ್ಟನ್ನು ವಿಶ್ಲೇಷಿಸುವ ಈ ಭಾಷಣ ಶಾಶ್ವತ ಶಾಂತಿಗಿರುವ ಮಾರ್ಗಗಳ ರೂಪರೇಖೆಯನ್ನು ಒಳಗೊಂಡಿದೆ.**

ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹೀಗೆ ಹೇಳಿದರು:

ಎಲ್ಲ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನಮ್ಮ ವಾರ್ಷಿಕ ಸಮ್ಮೇಳನವಾದ ಜಲ್ಸ ಸಾಲಾನಕ್ಕೆ ಆಗಮಿಸಿದ ತಮಗೆಲ್ಲರಿಗೂ ಮೊತ್ತಮೊದಲು ಕೃತಜ್ಞತೆ ಸಲ್ಲಿಸುತ್ತೇನೆ. ಜಲ್ಸ ಸಾಲಾನ ಸಂಪೂರ್ಣವಾಗಿ ಧಾರ್ಮಿಕವಾದ ಸಮಾವೇಶವಾಗಿದ್ದು ಅಹ್ಮದೀ ಮುಸ್ಲಿಮರು ತಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿಯನ್ನು ವರ್ಧಿಸಲು ಹಾಗೂ ತಮ್ಮ ಧಾರ್ಮಿಕ ಜ್ಞಾನವನ್ನು ಉತ್ತಮಪಡಿಸಲು ಒಗ್ಗೂಡುವುದಕ್ಕಾಗಿ ಜರಗಿಸಲಾಗುತ್ತಿದೆ. ಜಲ್ಸ ಸಾಲಾನದ ಸಂದರ್ಭದಲ್ಲಿ ಒಂದು ಪ್ರತ್ಯೇಕ ಸಭೆಯನ್ನು ಅಹ್ಮದಿಯೇತರರಾದ ಅತಿಥಿಗಳಿಗೋಸ್ಕರ ಏರ್ಪಡಿಸಲಾಗುತ್ತಿದೆ ಮತ್ತು ಈ ಆವಶ್ಯಕ್ಕೋಸ್ಕರ ನಾವು ಇಲ್ಲಿ ಜಮಾಯಿಸಿದ್ದೇವೆ.

ನಿಮ್ಮ ಪೈಕಿ ಕೆಲವರು ನಮ್ಮ ಸಮಾರಂಭಗಳಿಗೆ ಇದರ ಮೊದಲು ಆಗಮಿಸಿರಬಹುದು ಮತ್ತು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಿಶ್ವಾಸಗಳ ಬಗ್ಗೆ ತಿಳಿದಿರಬಹುದು. ಆದರೆ ಬೇರೆ ಕೆಲವು ಅತಿಥಿಗಳು ಪ್ರಥಮ ಬಾರಿ ಇಲ್ಲಿಗೆ ಅಗಮಿಸಿದವರಾಗಿರಬಹುದು ಮತ್ತು ಅವರು ನಮ್ಮ ನಂಬಿಕೆಗಳ ಬಗ್ಗೆ ಮತ್ತು ನಡೆವಳಿಕೆಗಳ ಬಗ್ಗೆ ತಿಳಿಯಲುದ್ದೇಶಿಸಿರಬಹುದು. ಅಂತಹ ಅತಿಥಿಗಳಿಗೆ ಹೀಗೆ ಮನವರಿಕೆ ಆಗಿರಬಹುದು: ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಸ್ಲಾಮ್ ಧರ್ಮದ ಒಂದು ಪಂಗಡವಾಗಿದ್ದು ಮಾನವರ ಆಧ್ಯಾತ್ಮಿಕ ಸುಧಾರಣೆಗೆ ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್(ಸ) ಲೋಕದ ಅಂತಿಮ ಕಾಲಘಟ್ಟದ ಬಗ್ಗೆ ನುಡಿದ ಭವಿಷ್ಯವಾಣಿಗೆ ಅನುಸಾರವಾಗಿ ಅದನ್ನು ಸ್ಥಾಪಿಸಲಾಗಿದೆ.

ಲೌಕಿಕ ಸಂಘಟನೆಗಳಿಗೂ ಧಾರ್ಮಿಕ ಸಮುದಾಯಗಳಿಗೂ ಅನ್ವಯಿಸುವ ಒಂದು ವಿದ್ಯಮಾನವೇನೆಂದರೆ ಕಾಲವು ದಾಟಿಹೋದ ಹಾಗೆ ನಿರ್ದಿಷ್ಟ ಸಂಘಟನೆಗಳ ಅನುಯಾಯಿಗಳು ತಮ್ಮ ಮೂಲ ತತ್ವಗಳಿಂದ ದೂರಸರಿಯುತ್ತಾರೆ. ಆದುದರಿಂದ ಎಲ್ಲ ಗುಂಪುಗಳಲ್ಲಿ ಅಥವಾ ಸಮುದಾಯಗಳಲ್ಲಿ ಎಂತಹ ಪರಿಸ್ಥಿತಿ ತಲೆದೋರುತ್ತದೆ ಎಂದರೆ ಮೂಲ ತತ್ವಗಳ ಪುನಶ್ಚೇತನ ಆವಶ್ಯಕವಾಗುತ್ತದೆ. ಹೀಗೆ ಸಂಭವಿಸದಿದ್ದರೆ ಆ ಸಂಘಟನೆಗಳು ಕೊನೆಗೊಳ್ಳುವುವು ಅಥವಾ ಅವು ತಮ್ಮ ಮೂಲ ಸ್ಥಿತಿಯನ್ನು ಕಳೆದುಕೊಂಡು ಹೊಸ ರೂಪಧಾರಣೆ ಮಾಡುವುವು.

ನಾವು ಹೀಗೆ ನಂಬುತ್ತೇವೆ: ಧಾರ್ಮಿಕ ಸಮುದಾಯಕ್ಕೆ ಅಧಃಪತನ ತಲೆದೋರುವಾಗ ಮೂಲ ಧಾರ್ಮಿಕ ತತ್ವಗಳನ್ನು ಸಂರಕ್ಷಿಸಲು ಸರ್ವಶಕ್ತನಾದ ದೇವನು ತಾನು ಆಯ್ಕೆ ಮಾಡಿದ ಸಂದೇಶವಾಹಕನನ್ನು ಜನರಿಗೆ ಮೂಲ ತತ್ವಗಳ ಬಗ್ಗೆ ಮತ್ತು ನಡೆವಳಿಕೆಗಳ ಬಗ್ಗೆ ಮಾರ್ಗದರ್ಶನ ನೀಡಲು ಕಳುಹಿಸುತ್ತಾನೆ. ಇಸ್ಲಾಮ್ ಧರ್ಮಕ್ಕೆ ಸಂಬಂಧಿಸಿ ನಾವು ಹೀಗೆ ನಂಬುತ್ತೇವೆ: ಪವಿತ್ರ ಪೈಗಂಬರ್ ಮುಹಮ್ಮದ್(ಸ) ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಕಳುಹಿಸಿದ ಅಂತಿಮ ಶರೀಅತ್ (ಧಾರ್ಮಿಕ ನ್ಯಾಯ ಶಾಸ್ತ್ರ) ತಂದ ಪೈಗಂಬರ್ ಆಗಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸರ್ವಶಕ್ತನಾದ ಅಲ್ಲಾಹನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರನ್ನು ಇಸ್ಲಾಮಿನ ಪೈಗಂಬರರು(ಸ) ಕಲಿಸಿದ ಮತ್ತು ಕೃತ್ಯರೂಪಕ್ಕೆ ತಂದ ಇಸ್ಲಾಮನ್ನು ಪುನಶ್ಚೇತನಗೊಳಿಸಲು ಕಳುಹಿಸಿದನು.

ಆದುದರಿಂದ ನಾವು ನಮ್ಮ ಜಮಾಅತಿನ ಸ್ಥಾಪಕರನ್ನು ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಎಂದು ನಂಬುತ್ತೇವೆ. ಅವರ ಪರಮ

ಉದ್ದೇಶ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಪುನಶ್ಚೇತನಗೊಳಿಸಿ ಮಾನವರನ್ನು ಸರ್ವಶಕ್ತನಾದ ದೇವನ ಕಡೆಗೆ ಮರಳಿ ತರುವುದಾಗಿದೆ.

ನಮ್ಮ ಸಂಘಟನೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ ನಂತರ ನಾನು ಲೋಕದ ಪ್ರಚಲಿತ ಸ್ಥಿತಿಯ ಬಗ್ಗೆ ವಿವರಿಸಲು ಇಚ್ಛಿಸುತ್ತೇನೆ.

ಸ್ವಾತಂತ್ರ್ಯ, ಸ್ವಾಯತ್ತತೆ ಮತ್ತು ಸುಖದಿಂದ ಜೀವಿಸಲು ಪ್ರತಿಯೊಬ್ಬ ಮನುಷ್ಯನು ಸಹಜವಾಗಿ ಇಚ್ಛಿಸುತ್ತಾನೆ. ಎಲ್ಲ ವಿಧ ಸಂಘರ್ಷಗಳಿಂದ ಮುಕ್ತವಾದ ಶಾಂತಿ, ನೆಮ್ಮದಿ ಭರಿತ ಜೀವಿತವನ್ನು ಪ್ರತಿಯೊಬ್ಬನು ಆಶಿಸುತ್ತಾನೆ. ಶಾಂತಿ ಮತ್ತು ಭದ್ರತೆ ಇರುವಲ್ಲಿ ಜೀವಿಸಲು ಪ್ರತಿಯೊಬ್ಬನು ಬಯಸುತ್ತಾನೆ. ತನ್ನ ಗ್ರಾಮ, ಪಟ್ಟಣ ಅಥವಾ ನಗರ ಸೌಹಾರ್ದಮಯವಾಗಿ ಸುರಕ್ಷಿತವಾಗಿರುವುದನ್ನು ಪ್ರತಿಯೊಬ್ಬನು ಇಚ್ಛಿಸುತ್ತಾನೆ. ತನ್ನ ದೇಶ ಶಾಂತಿಭರಿತವಾಗಿ ಅಭಿವೃದ್ಧಿ ಗಳಿಸಲಿ ಮತ್ತು ಜೀವಿತವನ್ನು ಸುಖಕರವಾಗಿ ಮಾಡುವ ಅನುಕೂಲತೆಗಳನ್ನು ಗಳಿಸಲಿ ಎಂದು ಪ್ರತಿಯೊಬ್ಬನು ಬಯಸುತ್ತಾನೆ. ಕೊನೆಯದಾಗಿ, ಜನರು ಲೋಕವಿಡೀ ಶಾಂತಿಭರಿತವಾಗಿರಲಿ ಎಂದು ಹೃತ್ಪೂರ್ವಕವಾಗಿ ಆಶಿಸುತ್ತಾರೆ.

ಆದರೆ ಮಾನವರು ಸಹಜವಾಗಿ ಹೊಂದಿರುವ ಈ ಅಭಿಲಾಷೆಗಳಿಗೆ ವಿರುದ್ಧವಾಗಿ ಒಡಕು, ಅಸ್ತವ್ಯಸ್ತತೆ ಮತ್ತು ಸಂಘರ್ಷ ಲೋಕದ ಪ್ರತಿಯೊಂದು ಭಾಗದಲ್ಲಿ ವ್ಯಾಪಿಸಿವೆ. ಉದಾಹರಣೆಗೆ, ಕೆಲವು ದೇಶಗಳು ಯುದ್ಧಗಳ ಪರಿಣಾಮವಾಗಿ ಛಿದ್ರಿಸಲ್ಪಟ್ಟಿವೆ. ಬಂಡಾಯಗಾರರ ಗುಂಪುಗಳು ಪರಸ್ಪರ ಹೋರಾಡುತ್ತಿವೆ. ಅಥವಾ ಸರಕಾರದ ವಿರುದ್ಧ ಹೋರಾಡುತ್ತಿವೆ. ಕೆಲವು ದೇಶಗಳಲ್ಲಿ ಪ್ರಾಂತ್ಯಗಳ ಅಥವಾ ಪ್ರದೇಶಗಳ ಮಧ್ಯೆ ತೀವ್ರ ಸ್ಪರ್ಧೆಗಳು ಮತ್ತು ಹೋರಾಟಗಳು ಅಲ್ಲಿನ ಸಮಾಜಗಳ ಶಾಂತಿಯನ್ನು ಕೆಡಿಸಿವೆ. ಇದಲ್ಲದೆ ವಲಸೆಗಾರರು ಬಹಳ ಹೆಚ್ಚಾಗಿ ಆಗಮಿಸಿದ ದೇಶಗಳಲ್ಲಿ ಅಲ್ಲಿನ ಮೂಲ ನಿವಾಸಿಗಳ ಮತ್ತು ವಲಸೆಗಾರರ ಮಧ್ಯೆ ಸಂಘರ್ಷಗಳು ಮತ್ತು ಹಗೆತನ ಬೆಳಕಿಗೆ ಬಂದಿವೆ.

ಬಿರುಕು ಬಿಟ್ಟ ಸಮಾಜಗಳಲ್ಲಿ ಪರಸ್ಪರ ವಿರುದ್ಧ ಬಣಗಳು ರೂಪಿಸಲ್ಪಟ್ಟಿವೆ. ಅವುಗಳ ಮಧ್ಯೆ ಸಂಘರ್ಷ ಬಡಿದೆಬ್ಬಿಸಲ್ಪಡಲು ಯಾವಾಗಲೂ ಸಾಧ್ಯವಿದೆ. ಅಂತರ್‌ರಾಷ್ಟ್ರೀಯ ವಲಯದಲ್ಲಿ ವಿವಿಧ ದೇಶಗಳು ಪರಸ್ಪರ ಸ್ಪರ್ಧಿಸುತ್ತಿದ್ದು ಶಕ್ತಿ ಮತ್ತು ಹತೋಟಿ ಗಳಿಸಲು ಪೈಪೋಟಿ ನಡೆಸುತ್ತಿವೆ. ಆರ್ಥಿಕ ಅಥವಾ ಭೌಗೋಳಿಕ ಶಕ್ತಿ ಗಳಿಸಲು ವಿಭಿನ್ನ ನಂಬಿಕೆಗಳ ಮತ್ತು ಆದರ್ಶಗಳ ಜನರನ್ನು ಬಲಾತ್ಕಾರದಿಂದ ತಮ್ಮ ಧೋರಣೆಗೆ ಬಗ್ಗುವಂತೆ ಮಾಡಲು ಅನ್ಯಾಯಭರಿತ ಯುದ್ಧಗಳು ನಡೆಸಲ್ಪಡುತ್ತಿವೆ. ಉದಾಹರಣೆಗೆ, ಆರ್ಥಿಕ ಮತ್ತು ವಾಣಿಜ್ಯ ಸಮರಗಳು ಪ್ರಾರಂಭಗೊಂಡಿವೆ – ತಮ್ಮ ಮೇಧಾವಿತ್ವವನ್ನು ಸ್ಥಾಪಿಸಲು ಮತ್ತು ಪ್ರತಿಸ್ಪರ್ಧಿ ದೇಶಗಳ ಪ್ರಗತಿಯನ್ನು ತಡೆಯಲು.

ಇದಲ್ಲದೆ ಲೋಕವು ರೂಢಿಯ ಯುದ್ಧಗಳ ರಕ್ತಪಾತಗಳ ಹಾವಳಿಗೆ ತುತ್ತಾಗಿದೆ. ಸಾಮೂಹಿಕ ನಾಶವನ್ನುಂಟುಮಾಡುವ ವಿನಾಶಕರ ಆಯುಧಗಳನ್ನು ಬಳಸಿ ಜನಾಂಗಗಳನ್ನು ಅದುಮಿ ಹಾಕಿ ಅವರ ಮುಂದಿನ ಪೀಳಿಗೆಗಳ ಏಳಿಗೆಯನ್ನು ತಡೆಗಟ್ಟಲಾಗುತ್ತಿದೆ. ಸಂಪತ್ತಿನ ಬಗ್ಗೆ ಮತ್ತು ಶಕ್ತಿಯ ಬಗ್ಗೆ ನಮಗಿರುವ ಹಂಬಲ, ನಮ್ಮ ಯುವ ಜನರ ಭವಿಷ್ಯತ್ಕಾಲದ ಪ್ರಗತಿಯನ್ನು ನಿಷ್ಕರುಣೆಯಿಂದ ಎಂದೂ ಕೊನೆಗೊಳ್ಳದ ಅನ್ಯಾಯದ ಮೂಲಕ ಬರ್ಬರತೆಯಿಂದ ತಡೆಗಟ್ಟುತ್ತಿದೆ. ಗಾಬರಿಗೊಳಿಸುವ ಆದರೆ ಸಾಧ್ಯತೆ ಇರುವ ಭಯವೇನೆಂದರೆ ನಾವು ಇಂದು ಕಾಣುವ ಅವಸ್ಥೆ ಯಾವುದೇ ಕ್ಷಣದಲ್ಲಿ ವಾಸ್ತವಿಕ ಜಾಗತಿಕ ವಿಪತ್ತಿಗೆ ಕಾರಣವಾಗಬಹುದು ಮತ್ತು ಅದರ ಘೋರ ಪರಿಣಾಮಗಳು ಊಹಾತೀತವಾಗಿವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಲೋಕದ ಯಾವುದೇ ಪ್ರದೇಶವನ್ನು ಸುಭದ್ರವೆಂದೂ ಸಂಘರ್ಷ ವಿರಹಿತವೆಂದೂ ಗುರುತಿಸಲು ಕಷ್ಟಕರವಾಗಿದೆ. ಪದೇ ಪದೇ ಕೆಲವು ಶಕ್ತಿಶಾಲಿ ದೇಶಗಳು ತಮ್ಮ ಶಕ್ತಿ ಮತ್ತು ಸಂಪತ್ತನ್ನು ಬಳಸಿ ಬಲಹೀನ ದೇಶಗಳನ್ನು ತಮ್ಮ ಧೋರಣೆಯನ್ನು ಅನುಸರಿಸುವಂತೆ ಬಲಾತ್ಕಾರ ಮಾಡುತ್ತವೆ. ಕೆಲವು ಕಡಿಮೆ ಶಕ್ತಿಶಾಲಿ ದೇಶಗಳು, ತಮ್ಮ ಶಕ್ತಿಶಾಲಿ ಸ್ನೇಹಿತ ದೇಶಗಳ ಬೆಂಬಲ ಪಡೆದು ತಮ್ಮ ನೆರೆ ಹೊರೆಯ ದೇಶಗಳ ವಿರುದ್ಧ ಅನ್ಯಾಯದಿಂದ ವರ್ತಿಸಿ ತಮ್ಮ ಪ್ರಾದೇಶಿಕ ಮೇಧಾವಿತ್ವವನ್ನು ಪ್ರದರ್ಶಿಸುತ್ತವೆ.

ಇದಲ್ಲದೆ, ಭಯೋತ್ಪಾದಕ ಗುಂಪುಗಳು ತಮ್ಮ ಹಿಂಸಾಚಾರ ಮತ್ತು ರಕ್ತಪಾತಗಳನ್ನು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ಮುಂದುವರಿಸುತ್ತಿವೆ. ಕೆಲವು ಧಾರ್ಮಿಕ ನಾಮಧಾರಿ ಸಂಘಟನೆಗಳು ಧರ್ಮವನ್ನು ವಂಚನೆಗೆ ಬಳಸಿ ತಮ್ಮ ತೀವ್ರವಾದವನ್ನು ಸಮರ್ಥಿಸುತ್ತವೆ. ಆದರೆ ಅವರ ವಾಸ್ತವಿಕ ಉದ್ದೇಶಲಕ್ಷ್ಯ ಸಂಪತ್ತು ಮತ್ತು ಅಧಿಕಾರ ಗಳಿಸುವುದಾಗಿದೆ.

ತೀವ್ರ ಬಲಪಂಥೀಯರು ಯುರೋಪ್ ಮತ್ತು ಲೋಕದ ಇತರ ಭಾಗಗಳ ಶಾಂತಿ ಮತ್ತು ನೆಮ್ಮದಿಗೆ ಬೆದರಿಕೆ ಒಡ್ಡುತ್ತಿದ್ದಾರೆ. ತೀವ್ರ ಬಲಪಂಥೀಯರು ರಾಷ್ಟ್ರೀಯತೆಯ ಹೆಸರಲ್ಲಿ ಆಧುನಿಕ ಕಾಲದ ಬಹು ಸಾಂಸ್ಕೃತಿಕ ಮತ್ತು ಬಹುತ್ವಭರಿತ ಸಮಾಜ ವ್ಯವಸ್ಥೆಯನ್ನು ಕೊನೆಗೊಳಿಸಿ ತಮ್ಮ ವರ್ಗೀಯ ಮತ್ತು ಪ್ರತಿಕೂಲ ವ್ಯವಸ್ಥೆಯ ತತ್ವಗಳನ್ನು ಸಮಾಜದ ಮೇಲೆ ಹೇರಲು ಬಯಸುತ್ತಿದ್ದಾರೆ. ತಮ್ಮ ರಾಷ್ಟ್ರೀಯ ಅನನ್ಯತೆಯನ್ನೂ ಪರಿಶುದ್ಧತೆಯನ್ನೂ ಕಾಪಾಡುವ ನೆವನದಿಂದ ಈ ಅಸಹಿಷ್ಣುವಾದಿಗಳು ವಲಸೆಗಾರರ ವಿರುದ್ಧ ಕಾರ್ಯನಿರತರಾಗಿರುತ್ತಾರೆ. ವಲಸೆಗಾರರಲ್ಲಿ ಬಹುತೇಕ ಜನರು ಅನೇಕ ದಶಕಗಳಿಂದ ತಾವು ಆಶ್ರಯ ಪಡೆದ ದೇಶಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಮಾದರಿ ನಾಗರಿಕರಾಗಿ ಆ ದೇಶಗಳ ಪ್ರಗತಿಗೆ ಸಹಾಯಕರಾಗಿದ್ದಾರೆ.

ಇದಲ್ಲದೆ, ನೀತಿ ಮತ್ತು ನಿಷ್ಪಕ್ಷಪಾತ ತತ್ವಗಳನ್ನು ಕಡೆಗಣಿಸಿ ಕೆಲವು ದೇಶಗಳು ಮತ್ತು ಗುಂಪುಗಳು ಲೋಕದ ಆರ್ಥಿಕ ಮಾರುಕಟ್ಟೆಗಳನ್ನು ಮತ್ತು ವಾಣಿಜ್ಯೋದ್ಯಮಗಳನ್ನು ತಮ್ಮ ಹತೋಟಿಗೆ ತರಲು ತಮ್ಮ ಸ್ವಾರ್ಥ ಹಿತಾಸಕ್ತಿಗೋಸ್ಕರ ಪ್ರಯತ್ನಿಸುತ್ತಿದ್ದಾರೆ ಮತ್ತು ಅನ್ಯರಿಗೆ ಅನ್ಯಾಯವಾಗುವಂತೆ ವರ್ತಿಸುತ್ತಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ನಾನು ಇದರ ಮೊದಲು ಹೇಳಿದ ಹಾಗೆ ಲೋಕದಾದ್ಯಂತ ಸಂಘರ್ಷದ ಸ್ಥಿತಿ ಇದೆ ಮತ್ತು ಸಮಾಜದ ಪ್ರತಿಯೊಂದು ಹಂತದಲ್ಲಿ ಕಾಣಿಸುತ್ತಿದೆ. ಶಾಂತಿ ಮೇಲ್ಗೈ ಪಡೆಯಬೇಕೆಂದು ನಾವು ಆಶಿಸುತ್ತಿದ್ದರೂ ತದ್ವಿರುದ್ಧವಾದ ಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ.

ಲೋಕದ ಸ್ಥಿತಿ ಹದಗೆಡುತ್ತಾ ಇರುವ ಬಗ್ಗೆ ಅನೇಕ ವರ್ಷಗಳಿಂದ ನನ್ನ ಕಾಳಜಿಯನ್ನು ಪ್ರಕಟಿಸುತ್ತಾ ಇದ್ದೇನೆ. ಈಗ ಬೇರೆ ಜನರು

ಸಹ ಲೋಕದ ಶಾಂತಿ ರಹಿತ ಮತ್ತು ಭದ್ರತೆ ರಹಿತ ಸ್ಥಿತಿಯ ಬಗ್ಗೆ ತಮ್ಮ ಭಯವನ್ನು ಪ್ರಕಟಿಸುತ್ತಾ ಇದ್ದಾರೆ. ಆದುದರಿಂದ ನಾನು ಈ ಕೆಲವು ಭೌಗೋಳಿಕ ಮತ್ತು ರಾಜಕೀಯ ಪರಿಣಿತರ, ರಾಜಕಾರಣಿಗಳ, ವಿಶ್ಲೇಷಕರ ಹೇಳಿಕೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ತಮ್ಮ ಭಯಾಶಂಕೆಗಳನ್ನು ಬಹಿರಂಗವಾಗಿ ಸೂಚಿಸಿ, ಲೋಕ ಶಾಂತಿ ಮತ್ತು ಭದ್ರತೆ ಕಾಪಾಡಲು ಸಂಯಮನದಿಂದ ವರ್ತಿಸಲು ಮತ್ತು ತುರ್ತು ಸುಧಾರಣೆಗೆ ಕರೆ ನೀಡಿದ್ದಾರೆ.

ಉದಾಹರಣೆಗೆ, ದಿ ನ್ಯೂಯೋರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಫ್ರಾನ್ಸಿನ ರಾಯಭಾರಿಯಾಗಿ ನಿರ್ಗಮಿಸುತ್ತಿದ್ದ ಫ್ರಾಂಕೋಯಿಸ್ ಡೆಲಾಟ್ರೆ (Francois Delattre) ಬರೆಯುತ್ತಾರೆ:

“ಸಂಯುಕ್ತ ರಾಷ್ಟ್ರ ಸಂಘದ ಸೆಕ್ಯುರಿಟಿ ಕೌನ್ಸಿಲ್ (ಭದ್ರತಾ ಮಂಡಳಿ)ನಲ್ಲಿ ಕಳೆದ ಐದಕ್ಕಿಂತ ಹೆಚ್ಚು ವರ್ಷಗಳ ಅನುಭವ ನನ್ನನ್ನು ಈ ಕಟು ಸತ್ಯವನ್ನು ಮನಗಾಣುವಂತೆ ಮಾಡಿದೆ. ಲೋಕವು ಹೆಚ್ಚು ಅಪಾಯಕರವಾಗಿ ಬೆಳವಣಿಗೆ ಪಡೆಯುತ್ತಾ ಇದೆ ಮತ್ತು ಅದರ ಮುಂದಿನ ಸ್ಥಿತಿಯ ಬಗ್ಗೆ ಹೇಳುವುದು ಅಸಾಧ್ಯವಾಗಿದೆ. ತಂತ್ರಜ್ಞಾನದ ಕ್ರಾಂತಿ ಮತ್ತು ಚೈನದ ಉತ್ಥಾನದ ಮೂಲಕ ಶಕ್ತಿ ಕೇಂದ್ರಗಳು ನಮ್ಮ ಮುಂದೆಯೇ ಪಲ್ಲಟಗೊಳ್ಳುತ್ತಿರುವುದಾಗಿ ಕಾಣುತ್ತಿರುವಾಗ ಪ್ರಮುಖ ಶಕ್ತಿಶಾಲಿ ದೇಶಗಳ ಮಧ್ಯೆ ಸ್ಪರ್ಧೆಯು ಪುನರಾರಂಭಿಸಿದುದನ್ನೂ ಕಾಣುತ್ತಿದ್ದೇವೆ. ಒಂದು ಹೊಸ ಜಾಗತಿಕ ಅಸ್ತವ್ಯಸ್ತತೆಯಲ್ಲಿ ನಾವಿದ್ದೇವೆ.”

ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳು ಹೀಗೆ ವಾದಿಸುತ್ತವೆ: ನಾವು ಯಥಾಸ್ಥಿತಿ ಕಾಪಾಡಲು ಅಥವಾ ಲೋಕದಲ್ಲಿ ಹೊಸ ಮತ್ತು ಸುಧಾರಣೆಗೊಂಡ ವ್ಯವಸ್ಥೆಯನ್ನು ಸ್ಥಾಪಿಸಲು ಹಿತಕರವಾಗಿ ವರ್ತಿಸುತ್ತಿದ್ದೇವೆ. ಆದರೆ ಒಬ್ಬ ಪಾಶ್ಚಿಮಾತ್ಯ ರಾಜತಾಂತ್ರಿಕ ಅಂತರ್ರಾಷ್ಟ್ರೀಯ ಸಂಬಂಧ ಮತ್ತು ರಾಜಕೀಯದ ಅಂತರಂಗದ ಚಟುವಟಿಕೆಗಳನ್ನು ಅರಿತುಕೊಂಡು ಬಹಿರಂಗವಾಗಿ ತದ್ವಿರುದ್ಧವಾಗಿ ಹೇಳಿಕೆ ನೀಡುತ್ತಿದ್ದಾರೆ – ಅವರು ಮಾಡುವುದೆಲ್ಲವೂ ‘ಒಂದು ಹೊಸ ಜಾಗತಿಕ ಅಸ್ತವ್ಯಸ್ಥತೆ’ ಸ್ಥಾಪಿಸಲಿಕ್ಕೋಸ್ಕರವಾಗಿದೆ ಎಂದು.

ಫ್ರಾನ್ಸ್ ರಾಯಭಾರಿ ಹೀಗೆ ಸಹ ಹೇಳಿದ್ದಾರೆ: “ಪ್ರತಿಯೊಂದು ಅಂತರ್ರಾಷ್ಟ್ರೀಯ ಬಿಕ್ಕಟ್ಟು ನಿಯಂತ್ರಣಾತೀತವಾಗುವ ಸಂಭಾವ್ಯತೆ ಹೊಂದಿದೆ. ಅದು ನಾವು ಸಿರಿಯಾದಲ್ಲಿ ಕಂಡೆವು. ಇರಾನ್, ಉತ್ತರ ಕೊರಿಯಾ ಮತ್ತು ಸೌತ್ ಚೈನಾ ಸೀ ದೇಶಗಳಲ್ಲಿ ಇದು ಸಂಭವಿಸದಂತೆ ತಡೆಗಟ್ಟುವ ಆವಶ್ಯಕತೆ ಇದೆ.”

ಸಿರಿಯಾ ಮತ್ತು ಇರಾನ್ ಮುಸ್ಲಿಮ್ ದೇಶಗಳಾಗಿವೆ. ಉತ್ತರ ಕೊರಿಯಾ ಮತ್ತು ಸೌತ್ ಚೈನಾ ಸೀ (ದಕ್ಷಿಣ ಚೀನ ಸಮುದ್ರ) ದೇಶಗಳಿಗೆ ಸಂಬಂಧಿಸಿದ ವಿವಾದಗಳಿಗೆ ಇಸ್ಲಾಮ್‌ನೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಆದುದರಿಂದ ಲೋಕದ ಅಸ್ತವ್ಯಸ್ತತೆಗೆ ಮುಸ್ಲಿಮರು ಮತ್ತು ಮುಸ್ಲಿಮ್ ದೇಶಗಳು ಮಾತ್ರ ಕಾರಣಕರ್ತರೆಂದು ಪದೇ ಪದೇ ವೀಕ್ಷಿಸಲ್ಪಡುವ ಹಾಗೆ ಹೇಳಲು ಸಾಧ್ಯವಿಲ್ಲ.

ಮೇಲೆ ಉಲ್ಲೇಖಿಸಿದ ಲೇಖನದಲ್ಲಿ ಫ್ರೆಂಚ್ ರಾಯಭಾರಿ, ಲೋಕದಲ್ಲಿ ಶಾಂತಿ ಸ್ಥಾಪಿಸಲು ಯುರೋಪು ವಹಿಸಬಹುದಾದ ಮಹತ್ವಪೂರ್ಣ ಪಾತ್ರದ ಬಗ್ಗೆ ವಿವರಿಸಿ ಹೀಗೆ ಬರೆದಿದ್ದಾರೆ: “ಚಾರಿತ್ರಿಕವಾಗಿ ಯುರೋಪಿಗೆ ಪ್ರಮುಖ ಸಕ್ರಿಯ ಕೇಂದ್ರವಾಗಲು ಮತ್ತು ಲೋಕದ ವಿಭಿನ್ನತೆಗಳ ಮೇಲೆ ಪ್ರಭಾವ ಬೀರುವ ಹೊಣೆಗಾರಿಕೆ ಮತ್ತು ಸಾಮರ್ಥ್ಯವಿದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಯುರೋಪು ಒಂದು ಕೊಂಡಿ, ಒಂದು ಸಂಪರ್ಕ ವಸ್ತುವಾಗಿ ಲೋಕದ ಸ್ಥಿತಿಯನ್ನು ಸಂತುಲಿತಾವಸ್ಥೆಗೆ ತರುವ ಶಕ್ತಿಯಾಗುವ ಹೊಣೆಗಾರಿಕೆಯನ್ನು ಹೊಂದಿದೆ.”

ಸ್ವಲ್ಪ ಕಾಲದ ಹಿಂದೆ ನಾನೊಬ್ಬ ಜರ್ಮನ್ ರಾಜಕಾರಣಿಯನ್ನು ಭೇಟಿಯಾಗಿದ್ದೆ. ವಲಸೆಗಾರರು ಮತ್ತು ಸ್ಥಳೀಯ ಜರ್ಮನ್ ನಿವಾಸಿಗಳ ಮಧ್ಯೆ ಸೇತುವೆಗಳನ್ನು ನಿರ್ಮಿಸಲು ಸರಕಾರ ನೇಮಿಸಿದ ಒಂದು ಸಂಸ್ಥೆಯಲ್ಲಿ ಅವರು ಕಾರ್ಯನಿರತರಾಗಿದ್ದರು. ನಾನು ಅವರೊಂದಿಗೆ ಹೇಳಿದೆ: ವಲಸೆಗಾರರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಜರ್ಮನಿ ಸ್ವತಃ ಅಥವಾ ಬೇರೆ ಯಾವುದಾದರೂ ಒಂದು ದೇಶ ಮಾತ್ರ ಪರಿಹರಿಸಲು ಸಾಧ್ಯವಿಲ್ಲ. ಎಲ್ಲ ಯುರೋಪಿಯನ್ ದೇಶಗಳು ಒಟ್ಟಿಗೆ ಸೇರಿ ಐಕ್ಯದಿಂದ ಕಾರ್ಯನಿರತರಾಗುವುದು ದೀರ್ಘಕಾಲೀನ ಶಾಂತಿಸ್ಥಾಪನೆಗೆ ಆವಶ್ಯಕವಾಗಿದೆ.

ಪ್ರೊಫೆಸರ್ ನೂರಿಯಲ್ ರೂಬಿನಿ (Professor Nouriel Roubini) ಅಮೇರಿಕದಲ್ಲಿ ಕ್ಲಿಂಟನ್ ಅಧ್ಯಕ್ಷರಾಗಿದ್ದಾಗ ಅಂತರ್ರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ಹಿರಿಯ ಅರ್ಥಶಾಸ್ತ್ರಜ್ಞನಾಗಿ ವೈಟ್‌ಹೌಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಬರೆಯುತ್ತಾರೆ: “ಚೈನ – ಅಮೇರಿಕಗಳ ಮಧ್ಯೆ ನಡೆಯುವ ಶೀತಲ ಯುದ್ಧದ ಜಾಗತಿಕ ಪರಿಣಾಮ ಅಮೇರಿಕ ಮತ್ತು ಸೋವಿಯತ್ ಯೂನಿಯನ್ ಮಧ್ಯೆ ನಡೆದ ಶೀತಲ ಯುದ್ಧದ ಪರಿಣಾಮಗಳಿಗಿಂತ ಹೆಚ್ಚು ತೀವ್ರವಾಗುವುದು.”

ಪ್ರೊಫೆಸರ್ ರೂಬಿನಿ ಪುನಃ ಹೇಳುತ್ತಾರೆ: “ಪೂರ್ಣ ಪ್ರಮಾಣದ ಶೀತಲ ಯುದ್ಧದಿಂದ ಜಾಗತೀಕರಣಕ್ಕೆ ಹಾನಿಯುಂಟಾಗುವುದು ಅಥವಾ ಕನಿಷ್ಠ ಪಕ್ಷ ಜಾಗತಿಕ ಆರ್ಥಿಕ ವ್ಯವಸ್ಥೆ ಎಂದು ಪರಸ್ಪರ ಸಮನ್ವಯವಿಲ್ಲದ ಎರಡು ಆರ್ಥಿಕ ಬಣಗಳಾಗಿ ಪರಿಣಮಿಸುವುದು. ಈ ಎರಡು ಆರ್ಥಿಕ ಬಣಗಳ ಕಾರಣದಿಂದ ಸಾಮಗ್ರಿಗಳ ವ್ಯಾಪಾರ, ಸೇವಾ ವ್ಯವಸ್ಥೆ, ಭಂಡವಾಳ, ಕಾರ್ಮಿಕರು, ತಂತ್ರಜ್ಞಾನ ಮತ್ತು ಮಾಹಿತಿ ತೀವ್ರವಾಗಿ ನಿಯಂತ್ರಿಸಲ್ಪಡುವುವು.”

ಲೋಕದ ಮಹಾಶಕ್ತಿ ರಾಷ್ಟ್ರಗಳ ಮಧ್ಯೆ ನಡೆಯುತ್ತಿರುವ ವಾಣಿಜ್ಯ ಸಮರದ ಹಾನಿಕಾರಕ ಪರಿಣಾಮಗಳ ಬಗ್ಗೆ ಲೇಖಕರು ಬೆಳಕು ಹರಿಸಿದ್ದಾರೆ. ಇತ್ತೀಚೆಗೆ ಚೀನ ಮತ್ತು ಅಮೇರಿಕದ ಮಧ್ಯೆ ಒಂದು ವಾಣಿಜ್ಯ ಒಪ್ಪಂದವಾಗಿದೆಯಾದರೂ ಅದು ಎಷ್ಟು ಫಲಕಾರಿಯಾಗುವುದು ಎಂದು ನೋಡಬೇಕಾಗಿದೆ.

ಅಂತಹ ವಾಣಿಜ್ಯ ಸಮರಗಳು ಹುಚ್ಚು ಧೈರ್ಯದವುಗಳು ಮತ್ತು ವಿಚಾರಹೀನವಾದವುಗಳಾಗಿದ್ದರೂ ನನ್ನ ಅತ್ಯಂತ ದೊಡ್ಡ ಭಯ ಅಣುಅಸ್ತ್ರ ಬಳಸಲ್ಪಡುವ ಯುದ್ಧ ಪ್ರಾರಂಭವಾಗುವ ಸಾಧ್ಯತೆ ಬಗ್ಗೆಯಾಗಿದೆ. ಅಂತಹ ಯುದ್ಧದ ದುಷ್ಪರಿಣಾಮಗಳು ಊಹಾತೀತವಾಗಿವೆ ಮತ್ತು ಖಂಡಿತವಾಗಿ ಅನೇಕ ಪೀಳಿಗೆಗಳಿಗೆ ವ್ಯಾಪಿಸುವಂತಹದೂ ಆಗಿವೆ. ಈಗ ಅನ್ಯರು ಸಹ ಹೆಚ್ಚು ಹೆಚ್ಚಾಗಿ ಈ ವಿಪತ್ತಿನ ಬಗ್ಗೆ ಒತ್ತಿ ಪ್ರಸ್ತಾಪಿಸುತ್ತಿದ್ದಾರೆ. ಬ್ಲೂಮ್ ಬರ್ಗ್ (Bloomberg) ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಪ್ರೊಫೆಸರ್

ಟೈಲರ್ ಕೋವೆನ್ (Professor Tyler Cowen - ಜೋರ್ಜ್ ಮೇಸನ್ ಯುನಿವರ್ಸಿಟಿಯ ಇಕೋನೋಮಿಕ್ಸ್ ಪ್ರೊಫೆಸರ್) ಬರೆಯುತ್ತಾರೆ:

"ಇಂದಿನ ಲೋಕದ ಗಮನಾರ್ಹವಾದ ಅತ್ಯಂತ ಮುಖ್ಯ ವಿಷಯಗಳಲ್ಲಿ ಒಂದು ಇದಾಗಿದೆ: ಇಂದಿನ ಯುವ ಜನರು ಅಣು ಆಯುಧ ಬಳಸುವ ಯುದ್ಧದ ಬಗ್ಗೆ ವ್ಯಾಕುಲಗೊಂಡವರಾಗಿ ಕಾಣಿಸುವುದಿಲ್ಲ. ಅವರು ವಾತಾವರಣದ ಬದಲಾವಣೆ ಬಗ್ಗೆ ಹೆಚ್ಚು ಚಿಂತಿಸುತ್ತಿದ್ದಾರೆ. ಅವರಿಗೆ ಅಣು ಆಯುಧ ಬಳಸುವ ಯುದ್ಧ ಗತಕಾಲದ ಬೆದರಿಕೆ ಎಂದು ತೋರುತ್ತದೆ....... ಆದರೆ ಇದಕ್ಕೆದುರಾಗಿ ನಾನು ಯೋಚಿಸುವುದೇನೆಂದರೆ ಅಣುಬಾಂಬ್ ಬಳಸುವ ಯುದ್ಧದ ಸಾಧ್ಯತೆ ಲೋಕದ ಪ್ರಥಮ ಸಮಸ್ಯೆಯಾಗಿದೆ. ಅಂತಹ ವಿಪತ್ತು ಒಂದು ನಿರ್ದಿಷ್ಟ ದಿನ ಬಂದೆರಗುವುದರ ಸಾಧ್ಯತೆ ಇಲ್ಲವಾದರೂ."

ಲೇಖಕರು ಹೀಗೆ ಸಹ ಹೇಳಿದ್ದಾರೆ: "ಕೆಲವು ಚಿಕ್ಕ ದೇಶಗಳು ಅಣು ಆಯುಧಗಳನ್ನು ಗಳಿಸಿವೆ. ಬೇರೆ ಕೆಲವು ದೇಶಗಳು ಅವುಗಳನ್ನು ಗಳಿಸಲು ಪ್ರಯತ್ನಿಸುತ್ತಿವೆ. ಆದುದರಿಂದ ಅಣು ಆಯುಧ ಬಳಸಲ್ಪಡುವ ಯುದ್ಧದ ಬೆದರಿಕೆ ವರ್ಧಿಸುತ್ತಾ ಇದೆ." ಅವರು ಗಂಭೀರವಾಗಿ ಹೇಳುತ್ತಾರೆ: "ಕೇವಲ ಒಂದು ದೇಶ ಅಥವಾ ಒಂದು ಗುಂಪು ಅಣು ಆಯುಧದ ಒಂದು ಕ್ಷಿಪಣಿ ಬಳಸಿದರೂ ಲೋಕವು ಶಾಶ್ವತವಾಗಿ ಬದಲಾಯಿಸಲ್ಪಡುವುದು." ಡ್ಯೂಟ್ಸ್ ವೆಲ್ಲೆ (Deutsche Welle) ಇತ್ತೀಚೆಗೆ ಪ್ರಕಟಿಸಿದ ಒಂದು ಸರ್ವೇಕ್ಷಣೆಯಲ್ಲಿ ಜರ್ಮನ್ ಜನರು ಹವಾಮಾನ ಬದಲಾವಣೆ ಬಗ್ಗೆ ಹೆಚ್ಚು ಚಿಂತಿತರಾಗಿದ್ದಾರೆ ಎಂದು ಬರೆಯಲಾಗಿದೆ.

ಆದರೆ ನಾನು ಮೇಲೆ ಪ್ರಸ್ತಾಪಿಸಲಾದ ವಿದ್ವಾಂಸರ ಅಭಿಪ್ರಾಯವನ್ನು ಅಂಗೀಕರಿಸುತ್ತೇನೆ. ಯುದ್ಧ ಮತ್ತು ವಿಶಿಷ್ಟವಾಗಿ ಅಣುಬಾಂಬ್ ಬಳಸುವ ಯುದ್ಧ ಇಂದಿನ ಕಾಲದ ಅತ್ಯಂತ ಗಮನಾರ್ಹವಾದ ವಿಷಯವಾಗಿದೆ.

ಈ ವರ್ಷದ ಅರಂಭದಲ್ಲಿ ಜರ್ಮನಿಯ ಮಾಜಿ ವಿದೇಶಕಾರ್ಯ ಮಂತ್ರಿ ಸಿಗ್ಮರ್ ಗ್ಯಾಬ್ರಿಯೇಲ್ (Sigmar Gabriel) ಅಣು ಆಯುಧಗಳು ಹೆಚ್ಚಾಗಿರುವ ಬಗ್ಗೆ ತಮ್ಮ ಆತಂಕ ಸೂಚಿಸಿದ್ದರು. ಅವರು ಹೀಗೆ ಹೇಳಿದರು: ಯುನೈಟೆಡ್ ಸ್ಟೇಟ್ಸ್, ರಶ್ಯ ಮತ್ತು ಚೈನ ಹೊಸದಾದೊಂದು ಅಣು ಆಯುಧಗಳ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾರೆ. ಯುನೈಟೆಡ್ ಸ್ಟೇಟ್ಸ್ ಮತ್ತು ರಶ್ಯ ಯುರೋಪಿನಲ್ಲಿ ಅಣು ಕ್ಷಿಪಣಿಗಳನ್ನು ಸ್ಥಾಪಿಸಬಹುದು. ಅಂತಹ ಸನ್ನಿವೇಶದಲ್ಲಿ ಯುರೋಪಿಯನ್ ದೇಶಗಳು ಅಣು ಮೇಧಾವಿತ್ವದ ಹೊರಾಟದಲ್ಲಿ ವಿಧ್ವಂಸಕ ಜೊತೆಗಾರರಾಗಿ ಗಣಿಸಲ್ಪಡುವುವು.

ಇದಲ್ಲದೆ ಯುನೈಟೆಡ್ ಸ್ಟೇಟ್ಸ್ ಮತ್ತು ಇರಾನ್ ಮಧ್ಯೆ ಬಿಗುವಿನ ಸ್ಥಿತಿ ವರ್ಧಿಸುತ್ತಾ ಇದೆ. ಅವರ ಮಧ್ಯೆ ಯುದ್ಧ ಸಾಧ್ಯತೆ ಬಗ್ಗೆ ಬಹಳ ಅನುಮಾನಿಸಲಾಗುತ್ತಿದೆ. ಆದರೆ ಅಂತಹ ಯುದ್ಧ ಧಾರ್ಮಿಕ ಯುದ್ಧವೆಂದು ಗಂಭೀರವಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲ. ಅದು ದುಸ್ಸಾಹಸದ ಮತ್ತು ಅನಾವಶ್ಯಕ ಹಗೆತನದ ಮುಖ್ಯ ಉದಾಹರಣೆಯಾಗಿದ್ದು ಮಿಲಿಯಗಟ್ಟಲೆ ಜನರ ಜೀವವನ್ನು ಅಪಾಯಕ್ಕೆ ಒಡ್ಡುವುದಾಗಿದೆ. ರಾಜಕೀಯ ವಿಶ್ಲೇಷಕರು ಹೀಗೆ ಹೇಳಿದ್ದಾರೆ: ಯುನೈಟೆಡ್ ಸ್ಟೇಟ್ಸ್ ಮತ್ತು ಇರಾನ್ ಮಧ್ಯೆ ಯುದ್ಧ ಸ್ಫೋಟಗೊಂಡರೆ ಅದರ ದುಷ್ಪರಿಣಾಮಗಳು ಆ ಎರಡು ದೇಶಗಳಿಗೆ ಸೀಮಿತವಾಗಿರಲಾರವು; ದುಷ್ಪರಿಣಾಮಗಳು ಹೆಚ್ಚು ವ್ಯಾಪಕವಾಗುವುವು. ಜರ್ಮನ್ ಮತ್ತು ಇತರ ಯುರೋಪಿಯನ್ ದೇಶಗಳು ಖಂಡಿತವಾಗಿಯೂ ಅಂತಹ ಯುದ್ಧದ ವಿನಾಶಕಾರಿ ಪರಿಣಾಮಗಳಿಗೆ ಗುರಿಯಾಗುವುವು. ಆದುದರಿಂದ ಜರ್ಮನ್ ಸರಕಾರ ಮತ್ತು ಇತರ ಯುರೋಪಿಯನ್ ದೇಶಗಳು ಸಂಯಮ ಪಾಲಿಸುವ ಬಗ್ಗೆ ಮತ್ತು ಬಿಗುವು ನಿವಾರಿಸುವ ಬಗ್ಗೆ ಆ ದೇಶಗಳಿಗೆ ಒತ್ತಿ ಹೇಳಲು ಪ್ರಮುಖ ಪಾತ್ರವಹಿಸಬೇಕು.

ಜಾಗತಿಕ ಆರ್ಥಿಕ ಬಿಕ್ಕಟ್ಟು ಸಂಭವಿಸಿ ಒಂದು ದಶಕ ದಾಟಿಹೋದರೂ ಯುರೋಪಿಯನ್ ದೇಶಗಳು ತಮ್ಮ ಆರ್ಥಿಕ ವ್ಯವಸ್ಥೆ ಭದ್ರವಾಗಿದೆ ಎಂದೂ ಭಂಡವಾಳಶಾಹಿ ವ್ಯವಸ್ಥೆ ಏಳಿಗೆ ಹೊಂದುತ್ತಿದೆ ಎಂದೂ ಭಾವಿಸಬಾರದು. ಪಾಶ್ಚಿಮಾತ್ಯ ತಜ್ಞರು ಮತ್ತು ಅರ್ಥಶಾಸ್ತ್ರಜ್ಞರು ಸಹ ತಮ್ಮ ಆರ್ಥಿಕ ವ್ಯವಸ್ಥೆಯ ನ್ಯೂನತೆಗಳನ್ನು ಅಂಗೀಕರಿಸುತ್ತಿದ್ದಾರೆ. ಉದಾಹರಣೆಗೆ, ಇಕೋನೋಮಿಯ (Economia) ಪತ್ರಿಕೆಯಲ್ಲಿ ಪ್ರಸಿದ್ಧ ಅರ್ಥ ಶಾಸ್ತ್ರಜ್ಞ ಪಾವುಲ್ ಕೇಯರ್ನ್ಸ್ (Paul Kearns) ಬರೆಯುತ್ತಾರೆ:

"ನಾವೆಲ್ಲರೂ ಭಂಡವಾಳ ಶಾಹಿತ್ವದಿಂದ ಲಾಭ ಪಡೆದಿದ್ದೇವೆ. ಆದರೆ ಅದನ್ನು ಪುನರುದ್ಧರಿಸಬೇಕಾಗಿದೆ. ಅದರ ನ್ಯೂನತೆಗಳನ್ನು ನಿವಾರಿಸಲು ಅದು ಕೇವಲ ಲಾಭದ ಬಗ್ಗೆ ಮಾತ್ರ ಆಸಕ್ತಿ ಹೊಂದದೆ ಸಾಮಾಜಿಕ ಮೌಲ್ಯಗಳ ಬಗ್ಗೆ ಸಹ ಸ್ಪಷ್ಟವಾದ ಆಸಕ್ತಿ ಹೊಂದಬೇಕು."

ಆದುದರಿಂದ ಭಂಡವಾಳಶಾಹಿ ಪದ್ಧತಿ ಮೆಲ್ಲ ಮೆಲ್ಲಗೆ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿದೆ. ಅದರಲ್ಲಿ ಅಪಾಯಗಳೂ ಅನ್ಯಾಯಗಳೂ ಇವೆ ಎಂದು ಜನರು ಮನವರಿಕೆ ಮಾಡುತ್ತಿದ್ದಾರೆ. ಅದುದರಿಂದ ಯುರೋಪಿಯನ್ ದೇಶಗಳೂ ಇತರ ಪ್ರಮುಖ ಶಕ್ತಿಶಾಲಿ ದೇಶಗಳೂ ದುರಹಂಕಾರದಿಂದ ಭಾವಿಸಬಾರದು – ತಮ್ಮ ಆರ್ಥಿಕ ಪದ್ಧತಿ ಯಾವಾಗಲೂ ಅಗ್ರ ಸ್ಥಾನದಲ್ಲಿರುವುದೆಂದು. ಅವರು ಲೋಕದ ಅರ್ಥಿಕ ವ್ಯವಸ್ಥೆಯಲ್ಲಿ ಔಚಿತ್ಯತೆ ಮತ್ತು ಸಮಾನತೆಯನ್ನು ಮೂಲಾಧಾರವಾಗಿ ಮಾಡಬೇಕು. ಯುರೋಪಿಗೆ ಸಂಬಂಧಿಸಿರುವ ಇನ್ನೊಂದು ಪ್ರಶ್ನೆ ಬ್ರೆಕ್ಸಿಟ್ (Brexit) ಮತ್ತು ಅದರ ಸಂಕೀರ್ಣತೆಗಳು ಉಂಟುಮಾಡುವ ಅಸ್ಥಿರತೆಗಳಾಗಿವೆ.

ಬ್ರೆಕ್ಸಿಟ್ ಸಂದಿಗ್ಧತೆಯ ಕಾರಣ ಯುರೋಪಿಯನ್ ದೇಶಗಳಲ್ಲಿ ಸಂಭವಿಸಬಹುದಾದ ಹಾನಿಕಾರಕ ಪರಿಣಾಮಗಳ ಬಗ್ಗೆ ಡ್ಯೂಟ್ಸೇ ವಿಲ್ಲೇ (Deutsche Welle) ಒಂದು ಅಧ್ಯಯನವನ್ನು ಪ್ರಕಟಿಸಿತು. ಅದರಲ್ಲಿ ಹೀಗೆ ಹೇಳಲಾಗಿದೆ: ಜರ್ಮನಿಗೆ ಹೆಚ್ಚು ಹಾನಿ ಸಂಭವಿಸುವುದು. ವಾಹನ ಮತ್ತು ತಂತ್ರಜ್ಞಾನದ ಕೈಗಾರಿಕೆಗಳಲ್ಲಿ ಮಾತ್ರ ಒಂದು ಲಕ್ಷ ಉದ್ಯೋಗಗಳು ನಷ್ಟವಾಗುವುವು.

ಲೋಕದ ಅನೇಕ ಸ್ಥಳಗಳಲ್ಲಿ ಮತ್ತು ಜರ್ಮನಿಯಲ್ಲಿ ಅಶಾಂತಿ ಹಬ್ಬುವಂತೆ ಮಾಡುವ ವಿಷಯ ವಲಸೆಗಾರರ ಸಮಸ್ಯೆಯಾಗಿದೆ. ಇದು ಕಲಹ ಕಾರಣವಾದ ವಿಷಯವಾಗಿದ್ದರೂ ವಾಸ್ತವಿಕ ವಿಷಯವೇನೆಂದರೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಇದು ಕಡೆಗಣಿಸಲಾಗದ ಅವಶ್ಯಕವಾಗಿದೆ.

ಉದಾಹರಣೆಗೆ, ಬರ್‌ಟೆಲ್ಸ್‌ವ್ಯಾನ್ ಫೌಂಡೇಶನ್ (Bertelsmann foundation) ಮಾಡಿದ ಒಂದು ಅಧ್ಯಯನದಲ್ಲಿ

ಹೀಗೆ ಮನವರಿಕೆ ಮಾಡಿತು: ಜರ್ಮನಿಗೆ ಪ್ರತಿವರ್ಷ 2,60,000 ವಲಸೆಗಾರ ಕಾರ್ಮಿಕರ ಆವಶ್ಯಕತೆ ಇದೆ – ಆವಶ್ಯಕವಾದ ಕೆಲಸಗಾರರ ಕೊರತೆಯನ್ನು ನೀಗಿಸಲು.

ಈ ವರದಿಯಲ್ಲಿ ಹೀಗೆ ಸಹ ಹೇಳಲಾಗಿದೆ: 2060 ಆಗುವಾಗ ವೃದ್ಧ ಜನರ ವರ್ಧನೆಯ ಕಾರಣ ಜರ್ಮನಿಯ ಕಾರ್ಮಿಕರ ಸಂಖ್ಯೆಯಲ್ಲಿ ಮೂರರಲ್ಲೊಂದು ಕುಂಠಿತವಾಗಲಿದೆ. ಎಂದರೆ 16 ಮಿಲಿಯದಷ್ಟು. ವಲಸೆಗಾರರಿಲ್ಲದಿದ್ದರೆ ಹೀಗೆ ಸಂಭವಿಸುವುದು. ಆದುದರಿಂದ ಒಂದು ದೇಶದ ಎಲ್ಲ ಸಮಸ್ಯೆಗಳಿಗೆ ವಲಸೆಗಾರರು ಮಾತ್ರ ಕಾರಣ ಎಂದು ಹೇಳುವುದು ಅನ್ಯಾಯಕರವಾಗಿದೆ. ವಾಸ್ತವಿಕವೇನೆಂದರೆ, ಅನೇಕ ಸಂಪದ್ ಭರಿತ ಪಾಶ್ಚಿಮಾತ್ಯ ದೇಶಗಳು ವಲಸೆಗಾರರಿಲ್ಲದಿದ್ದರೆ ತೀವ್ರ ಅಪಾಯಕರ ಸ್ಥಿತಿಯಲ್ಲಿರುವುವು.

ವಾಸ್ತವಿಕ ವಿಷಯವೇನೆಂದರೆ, ಎಲ್ಲ ದೇಶಗಳು ಒಂದು ಇನ್ನೊಂದನ್ನು ಅವಲಂಬಿಸಿರುತ್ತವೆ. ಇವು ಪರಸ್ಪರ ಸಂಬಂಧ ಸ್ಥಾಪಿಸಿ ಜಾಗತೀಕರಣಗೊಂಡ ಲೋಕದಲ್ಲಿ ವಾಸಿಸುತ್ತಿದ್ದೇವೆ. ತಡೆಗಟ್ಟುಗಳನ್ನು ನಿರ್ಮಿಸುವುದಕ್ಕೆ ಮತ್ತು ಪ್ರತ್ಯೇಕಿಸುವುದಕ್ಕೆ ಬದಲಾಗಿ ದೇಶಗಳು ಮತ್ತು ವಿವಿಧ ಹಿನ್ನೆಲೆ ಹೊಂದಿದ ಜನರು ಪರಸ್ಪರ ಸಹಕರಿಸಿ ಎಲ್ಲರ ಹಿತಕ್ಕಾಗಿ ಪರಿಶ್ರಮಿಸುವುದು ಆವಶ್ಯಕವಾಗಿದೆ. ಇದಕ್ಕೋಸ್ಕರ ದೇಶಗಳು ಸೌಹಾರ್ದದಿಂದ ವರ್ತಿಸಲು ಆವಶ್ಯಕವಾದ ಯೋಜನೆಗಳನ್ನು ಸರಕಾರಗಳು ರೂಪಿಸಬೇಕು. ದೇಶಗಳೊಳಗೆ ವಲಸೆಗಾರರು ಭಾವೈಕ್ಯ ಹೊಂದಿ ಜೀವಿಸುವಂತೆ ಸಹಾಯ ನೀಡಬೇಕು.

ಅನೇಕ ದಶಕಗಳಿಂದ ಮಧ್ಯಪೂರ್ವದ ಸ್ಥಿತಿ ಚಂಚಲವೂ ಉದ್ರೇಕಕಾರಿಯೂ ಆಗಿದೆ. ಇಸ್ರಾಯೇಲ್ ಮತ್ತು ಪೆಲಸ್ತೀನ್ ಮಧ್ಯೆ ಚರ್ಚೆ ನಡೆಸಿ ಒಪ್ಪಂದ ರೂಪಿಸಲು ಅನೇಕ ಶಾಂತಿ ಯೋಜನೆಗಳು ಯಾವುದೇ ಯಶಸ್ಸು ಕಾಣದೆ ವಿಫಲವಾಗಿವೆ. ಯುನೈಟೆಡ್ ಸ್ಟೇಟ್ಸ್ ಮತ್ತು ಅದರ ಮಿತ್ರ ದೇಶಗಳು ಹೊಸದಾಗಿ ರೂಪಿಸಿದ ಒಂದು ಶಾಂತಿ ಯೋಜನೆ ಬಗ್ಗೆ ಊಹಾಪೋಹಗಳು ಜಾರಿಯಲ್ಲಿವೆ. ಅದನ್ನು ಅಧಿಕೃತವಾಗಿ ಪ್ರಕಟಿಸುವ ಮೊದಲೇ ರಾಜಕಾರಣಿಗಳು ಮತ್ತು ತಜ್ಞರು ಅದು ಅನ್ಯಾಯಭರಿತವಾಗಿದೆ ಎಂದೂ ಅದರಿಂದ ಒಳ್ಳೆಯ ಫಲ ಉಂಟಾಗದೆಂದೂ ಹೇಳುತ್ತಿದ್ದಾರೆ. ಯುನೈಟೆಡ್ ಸ್ಟೇಟ್ಸ್‌ಗೆ ಫ್ರಾನ್ಸಿನ ರಾಯಭಾರಿಯಾಗಿದ್ದ ಜೆರಾರ್ಡ್ ಅರವ್‌ರ್ (Gerard Araur) ತಾನು ನಿವೃತ್ತನಾಗಿ ಹೋಗುವ ಮೊದಲು ಹೇಳಿದರು: "ಈ ಯೋಜನೆ ವಿಫಲವಾಗುವುದು ವಿಧಿಸಲ್ಪಟ್ಟಿದೆ."

ಆದುದರಿಂದ ಜಾಗತಿಕ ಶಾಂತಿಯನ್ನು ಅನೇಕ ಘಟಕಗಳು ದುರ್ಬಲಪಡಿಸುತ್ತಿವೆ. ಉದಾಹರಣೆಗೆ, ರಾಜಕೀಯ ನಾಯಕರು ಮತ್ತು ಸರಕಾರಗಳು ಏಕ ಪಕ್ಷೀಯ ಧೋರಣೆಗಳ ಮೂಲಕ ತಮ್ಮ ಸ್ವಾರ್ಥ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ನ್ಯಾಯ ಮತ್ತು ಸಮತೆಯ ಮೇಲೆ ಅಗ್ರಸ್ಥಾನ ನೀಡುತ್ತಿದ್ದಾರೆ. ಅಂತಹ ಅನ್ಯಾಯಗಳು ಶಾಂತಿ ಮತ್ತು ಸಮೃದ್ಧಿಗೆ ಒಯ್ಯಲಾರವು.

ನಾನು ನಿಮ್ಮ ಮುಂದೆ ಇರಿಸಿದ ವಿವಿಧ ಅಧ್ಯಯನಗಳ ವರದಿಗಳಿಂದ ಮತ್ತು ಲೇಖನಗಳಿಂದ ತಿಳಿಯುವುದೇನೆಂದರೆ, ಲೋಕದ ಶಾಂತಿ ರಹಿತ ಮತ್ತು ಭದ್ರತೆ ರಹಿತ ಸ್ಥಿತಿಗೆ ಇಸ್ಲಾಮ್ ಅಥವಾ ಬೇರೆ ಯಾವುದೇ ಧರ್ಮ ಹೊಣೆಯಾಗಿದೆ ಎಂದು ಆಕ್ಷೇಪಿಸಲು ಸಾಧ್ಯವಿಲ್ಲ. ಅಸಂಖ್ಯಾತ ಆರ್ಥಿಕ, ಭೌಗೋಲಿಕ ಮತ್ತು ಸಾಮಾಜಿಕ ಸಮಸ್ಯೆಗಳು ಲೋಕದ ಶಾಂತಿಯನ್ನು ದುರ್ಬಲಗೊಳಿಸುತ್ತಿವೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ನಾನು ಹೃತ್ಪೂರ್ವಕವಾಗಿ ನಂಬುತ್ತೇನೆ – ನಮ್ಮ ಈ ಕಾಲಘಟ್ಟದ ಬೃಹತ್ತಾದ ಪಂಥಾಹ್ವಾನಗಳನ್ನು ಕೊನೆಗೊಳಿಸಲು ಒಂದೇ ಒಂದು ಮಾರ್ಗವಿದೆ.

**ನಮ್ಮನ್ನು ಈ ಯುದ್ಧ ಮತ್ತು ಸಂಘರ್ಷ ಭರಿತ ಲೋಕದಿಂದ ವಿಮೋಚನೆ ಗೊಳಿಸುವ ಒಂದೇ ಒಂದು ಮಾರ್ಗವಿದೆ. ಅದು ಸರ್ವಶಕ್ತನಾದ ದೇವನ ಮಾರ್ಗವಾಗಿದೆ.**

ಶಾಂತಿಯು ಶಕ್ತಿ ಮತ್ತು ಸಂಪತ್ತಿನಲ್ಲಿ ಇರುವುದಿಲ್ಲ. ಶಾಂತಿ ಇರುವುದು ಸರ್ವಶಕ್ತನಾದ ದೇವನ ತೊಟ್ಟಿಲಲ್ಲಿ ಆಗಿದೆ.

ಆದುದರಿಂದ ಸರ್ವಶಕ್ತನಾದ ದೇವನನ್ನು ಗುರುತಿಸುವುದು ಈ ಕಾಲದ ಆವಶ್ಯಕತೆಯಾಗಿದೆ. ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠವಾಗಿ ಸೃಷ್ಟಿಸಲ್ಪಟ್ಟ ಮನುಷ್ಯನು ಶಾಂತಿಯಿಂದ ಜೀವಿಸಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಬೇಕೆಂದು ಸೃಷ್ಟಿಕರ್ತನಾದ ದೇವನು ಇಚ್ಛಿಸುತ್ತಾನೆ.

ಪವಿತ್ರ ಖುರ್‌ಆನ್ ಇಸ್ಲಾಮ್ ಧರ್ಮದ ಪವಿತ್ರ ಗ್ರಂಥವಾಗಿದೆ ಮತ್ತು ಇಸ್ಲಾಮೀ ನಿಯಮಗಳ ಮೂಲ ಅಡಕವಾದ ಗ್ರಂಥವಾಗಿದೆ. ಅದನ್ನು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಪೈಗಂಬರ್ ಮುಹಮ್ಮದ್‌ರಿಗೆ(ಸ) ಅವತೀರ್ಣಗೊಳಿಸಿರುವನೆಂದು ನಾವು ನಂಬುತ್ತೇವೆ. ಅದು ಅಂತಿಮ ಧಾರ್ಮಿಕ ನಿಯಮ ಸಂಹಿತೆ ಎಂದೂ ಅಂತಿಮ ವಿಚಾರಣೆ ದಿನದ ತನಕ ಜಾರಿಯಲ್ಲಿರುವುದೆಂದೂ ನಾವು ನಂಬುತ್ತೇವೆ. ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ – ಲೋಕದಲ್ಲೆಲ್ಲ ಒಡಕು ಮತ್ತು ಅವ್ಯವಸ್ಥೆ ಹರಡಲು ಮೂಲ ಕಾರಣ ಸೃಷ್ಟಿಕರ್ತ ಮತ್ತು ಅವನ ಸೃಷ್ಟಿಯಾದ ಮನುಷ್ಯನ ಮಧ್ಯೆ ಹೆಚ್ಚುತ್ತಿರುವ ದೂರ ಸರಿಯುವಿಕೆಯಾಗಿದೆ.

ಲೋಕವು ವಿನಾಶದ ಕಡೆಗೆ ಸಾಗುತ್ತಿರುವಾಗ ಸರ್ವಶಕ್ತನಾದ ಅಲ್ಲಾಹನು ತನ್ನ ಅಪರಿಮಿತ ಕಾರುಣ್ಯ ಮತ್ತು ದಯೆಯ ಕಾರಣದಿಂದ ತನ್ನ ಸಂದೇಶವಾಹಕರನ್ನು ಆಯ್ಕೆ ಮಾಡಿ ಕಳುಹಿಸಿ ಮಾನವರು ಧರ್ಮದ ಕಡೆಗೆ ಬರುವಂತೆ ಮಾಡುತ್ತಾನೆ.

ಪುರಾತನ ಕಾಲದಲ್ಲಿ ಲೋಕದ ವಿವಿಧ ಪ್ರದೇಶಗಳಲ್ಲಿ ಪ್ರವಾದಿಗಳು ಆಗಮಿಸಿ ಜನರಿಗೆ ಮಾರ್ಗದರ್ಶನ ನೀಡುತ್ತಾ ಇದ್ದರು. ಅನಂತರ ನಮ್ಮ ನಂಬಿಕೆ ಪ್ರಕಾರ ಕೊನೆಯದಾಗಿ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಪ್ರವಾದಿ ಮುಹಮ್ಮದರನ್ನು(ಸ) ಸಾರ್ವತ್ರಿಕ, ಶಾಶ್ವತ ಉಪದೇಶಗಳೊಂದಿಗೆ ಮಾನವರ ಆಧ್ಯಾತ್ಮಿಕ ಮತ್ತು ನೈತಿಕ ಸುಧಾರಣೆಗೋಸ್ಕರ ಕಳುಹಿಸಿದನು.

ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ಅಹ್ಮದೀ ಮುಸ್ಲಿಮರಾದ ನಾವು ಹೀಗೆ ನಂಬುತ್ತೇವೆ: ಈ ಕಾಲಘಟ್ಟದಲ್ಲಿ ಸರ್ವಶಕ್ತನಾದ ಅಲ್ಲಾಹನು ಅಹ್ಮದಿಯಾ ಸಂಘಟನೆಯ ಸ್ಥಾಪಕರನ್ನು ಸರ್ವ ಮಾನವರಿಗೆ ಒಬ್ಬ ಸುಧಾರಕನನ್ನಾಗಿಯೂ ಮಾರ್ಗದರ್ಶಕನನ್ನಾಗಿಯೂ ನಿಯೋಜಿಸಿ ಕಳುಹಿಸಿರುವನು. ಇಸ್ಲಾಮಿನ ನೈಜ ತತ್ವಗಳನ್ನು ಕೈಬಿಡಲಾಗಿದೆ ಮತ್ತು ಭ್ರಷ್ಟಗೊಳಿಸಲಾಗಿದೆ; ಆದುದರಿಂದ ನೈಜ ತತ್ವಗಳನ್ನು ಬೆಳಕಿಗೆ ತರುವುದು ಅವರ ನಿಯೋಜನೆಯ ಉದ್ದೇಶವಾಗಿದೆ. ಇಸ್ಲಾಮ್ ಶಾಂತಿ, ಸೌಹಾರ್ದ,

ಭ್ರಾತೃತ್ವ, ಸ್ನೇಹವನ್ನು ಪ್ರತಿಪಾದಿಸುವ ಧರ್ಮವೆಂದು ಮುಸ್ಲಿಮರಿಗೂ ಮುಸ್ಲಿಮೇತರರಿಗೂ ತೋರಿಸಿಕೊಡಲು ಸರ್ವಶಕ್ತನಾದ ಅಲ್ಲಾಹನು ಅವರನ್ನು ಕಳುಹಿಸಿದ್ದಾನೆ. ಎಲ್ಲ ಮಾನವರು ಶಾಂತಿಯಿಂದ ಜೀವಿಸಬೇಕೆಂದೂ ಅವರು ತಮ್ಮ ಸೃಷ್ಟಿಕರ್ತನ ಮತ್ತು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವವರಾಗಬೇಕೆಂದೂ ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುತ್ತಾನೆ.

ವಾಗ್ದತ್ತ ಮಸೀಹರು ಪದೇ ಪದೇ ಒತ್ತಿ ಹೇಳಿದ್ದಾರೆ – ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವ ತನಕ ಸೃಷ್ಟಿಕರ್ತನ ಹಕ್ಕುಗಳನ್ನು ಈಡೇರಿಸಲು ಸಾಧ್ಯವಾಗಲಾರದು ಎಂದು. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳಿದೆ – ದೇವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಿಕೊಡದವರ ಪ್ರಾರ್ಥನೆಗಳು ನಿರರ್ಥಕವೆಂದೂ ಅವು ಸರ್ವಶಕ್ತನಾದ ಅಲ್ಲಾಹನಿಂದ ತಿರಸ್ಕರಿಸಲ್ಪಡುವುವೆಂದೂ.

ವಾಗ್ದತ್ತ ಮಸೀಹರು ಮಾನವರೆಲ್ಲರೂ ಸರ್ವಶಕ್ತನಾದ ದೇವನ ನೆರಳಿನಡಿ ಆಶ್ರಯ ಪಡೆದು ಎಲ್ಲ ವಿಧ ಯುದ್ಧಗಳಿಂದಲೂ ಅಪಾಯಗಳಿಂದಲೂ ರಕ್ಷಿಸಲ್ಪಡಲು ಕರೆ ನೀಡಿದ್ದಾರೆ. ಆದರೆ ಅವರು ಹೀಗೆ ಎಚ್ಚರಿಕೆ ಸಹ ನೀಡಿದ್ದಾರೆ – ಮಾನವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಿ ಅವನ ಕಡೆಗಿರುವ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸದಿದ್ದರೆ ಅವರು ಅಪಾಯಕ್ಕೆ ಗುರಿಯಾಗುವರು ಎಂದು. ಅವರು ಹೀಗೆ ಹೇಳಿದರು – ಯುರೋಪು ಮತ್ತು ಅಮೇರಿಕ ಶಕ್ತಿ ಮತ್ತು ಸಂಪತ್ತಿನಿಂದ ಸಮೃದ್ಧವಾಗಿದ್ದರೂ ಅವು ವಿನಾಶಗಳಿಂದ ಸುರಕ್ಷಿತವಾಗಿರಲಾರವು. ಅದೇ ರೀತಿ ಏಶ್ಯಾ, ಆಸ್ಟ್ರೇಲಿಯಾ ಮತ್ತು ದ್ವೀಪದ ನಿವಾಸಿಗಳೂ ಅಥವಾ ಲೋಕದ ಬೇರೆ ಯಾವ ಪ್ರದೇಶದ ಜನರು ಕೂಡ ಸುರಕ್ಷಿತವಾಗಿರಲಾರರೆಂದು ಅವರು ಹೇಳಿದರು.

ಈ ಎಚ್ಚರಿಕೆಯ ಬೆಳಕಿನಲ್ಲಿ ನನ್ನ ಹೃತ್ಪೂರ್ವಕ ಪ್ರಾರ್ಥನೆ ಏನೆಂದರೆ ಮಾನವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಿ ಅವನ ಕಡೆಗೆ ತಿರುಗಬೇಕು. ತಮ್ಮ ಸೃಷ್ಟಿಯ ಅಂತಿಮ ಗುರಿ ಲೌಕಿಕ ಆಕರ್ಷಣೆಗಳು ಮತ್ತು ಸುಖಗಳು ಅಲ್ಲ ಎನ್ನುವುದನ್ನು ಮನಗಾಣಬೇಕು.

ನನ್ನ ಹೃತ್ಪೂರ್ವಕ ಪ್ರತೀಕ್ಷೆ ಮತ್ತು ಪ್ರಾರ್ಥನೆ ಏನೆಂದರೆ, ಲೋಕದ ಜನರು ತಮ್ಮ ಸೃಷ್ಟಿಕರ್ತನಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಮತ್ತು ತಮ್ಮ ಸಹಜೀವಿಗಳಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಅರಿತುಕೊಳ್ಳುವವರಾಗಬೇಕು ಮತ್ತು ನಾವು ತೀವ್ರವಾಗಿ ಆಶಿಸುವ ಹಾಗೆ ಲೋಕ ಶಾಂತಿಧಾಮವಾಗಬೇಕು.

ನಮ್ಮ ಮುಂದಿನ ಪೀಳಿಗೆಗೆ ಅನುಸರಿಸಲು ನಾವೊಂದು ಉತ್ತಮ ಮಾದರಿಯನ್ನು ತೋರಿಸುವವರಾಗಬೇಕು. ಆ ಮೂಲಕ ಅವರು ಶಾಂತಿಯಿಂದ ಜೀವಿಸುವವರಾಗಬೇಕು. ಸಂಘರ್ಷ ಮತ್ತು ಒಡಕು ಬಡಿದೆಬ್ಬಿಸಿ ತಮ್ಮ ಪ್ರಗತಿ ಮತ್ತು ಸಮೃದ್ಧಿಯ ಮಾರ್ಗವನ್ನು ಸದಾಕಾಲ ಮುಚ್ಚಿಬಿಡುವವರ ಹಾಗೆ ಅವರಾಗಬಾರದು.

ನಾನು ಪ್ರಾರ್ಥಿಸುತ್ತೇನೆ: ಯುದ್ಧ ಮತ್ತು ಹಗೆತನದ ಕಪ್ಪುಮೋಡಗಳು ನಮ್ಮ ಸುತ್ತಲೂ ಅನಿಷ್ಠ ಸೂಚಕವಾಗಿ ಹಾರಾಡುತ್ತಿರುವುದು ದೂರ ಸಾಗಿ ಶಾಂತಿ ಮತ್ತು ಸಮೃದ್ಧಿಯ ಶಾಶ್ವತ ನೀಲಾಕಾಶಗಳಿಂದ ಲೋಕದ ಎಲ್ಲ ಭಾಗಗಳಲ್ಲಿಯೂ ಬದಲಾಯಿಸಲ್ಪಡಲಿ. ಸರ್ವಶಕ್ತನಾದ ಅಲ್ಲಾಹನು ಮಾನವರನ್ನು ತನ್ನ ಕಡೆಗೆ ಬೇಗನೆ ತಿರುಗುವಂತೆ ಮಾಡಿ ಸನ್ನಿಹಿತವಾಗಿರುವ ವಿನಾಶದಿಂದ ರಕ್ಷಿಸುವವನಾಗಲಿ – ಆಮೀನ್.

ಕೊನೆಯದಾಗಿ, ನೀವೆಲ್ಲರೂ ಈ ದಿನ ಮಧ್ಯಾಹ್ನ ನಮ್ಮ ಜೊತೆ ಸೇರಿರುವುದಕ್ಕೋಸ್ಕರ ನಿಮಗೆ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು.

(**The Review of Religions - Sept 2019 ಸಂಚಿಕೆಯಿಂದ. ಭಾಷಾಂತರ: ಎಮ್. ಉಬೈದುಲ್ಲಾ**).

♦

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

# LOVE FOR HONESTY AND HATRED FOR DISHONESTY
# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಯಥಾರ್ಥ ಸತ್ಯವಿಶ್ವಾಸಿಯ ಗುಣಲಕ್ಷಣಗಳು

**(ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಜರ್ಮನಿಯ 'ಮಹ್‌ದೀ ಆಬಾದ್'ನಿಂದ 25-12-2019 ರಂದು ನೀಡಿದ ಜುಮುಅ ಖುತ್‌ಬದ ಸಾರಾಂಶ)**

اَلَّذِيْنَ اِنْ مَّكَّنّٰهُمْ فِى الْاَرْضِ اَقَامُوا الصَّلٰوةَ وَاٰتَوُا الزَّكٰوةَ وَاَمَرُوْا بِالْمَعْرُوْفِ وَنَهَوْا عَنِ الْمُنْكَرِ ؕ وَلِلّٰهِ عَاقِبَةُ الْاُمُوْرِ

"ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝನ್ನು ನಿಷ್ಠೆಯಿಂದ ನಿರ್ವಹಿಸುವರು, ಝಕಾತ್ ನೀಡುವರು, ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲ ಕಾರ್ಯಗಳ ಅಂತ್ಯಪರಿಣಾಮ ಅಲ್ಲಾಹನ ಕೈಯಲ್ಲಿದೆ." (22: 42)

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಈ ವಿಷಯದ ಕಡೆಗೆ ಗಮನ ಹರಿಸಿದ್ದಾನೆ: ನೈಜ ವಿಶ್ವಾಸಿಗಳು ಯಾರೆಂದರೆ ಅವರಿಗೆ ಶಕ್ತಿ ಲಭಿಸಿದಾಗ ನಮಾಝನ್ನು ಸ್ಥಿರವಾಗಿ ಅನುಷ್ಠಿಸುತ್ತಾರೆ. ಅವರು ತಮ್ಮ ಮಸ್‌ಜಿದ್‌ಗಳನ್ನು ಜನನಿಬಿಡವಾಗಿರಿಸುತ್ತಾರೆ. ಮಾನವರಿಗೆ ಸೇವೆ ಮಾಡುವವರಾಗಿರುತ್ತಾರೆ. ಅಲ್ಲಾಹನ ಭಯವನ್ನು ಹೊಂದಿ ಬಡವರಿಗೂ ನಿರ್ಗತಿಕರಿಗೂ ತಮ್ಮ ಸಂಪತ್ತಿನಿಂದ ಖರ್ಚು ಮಾಡುವವರಾಗಿರುತ್ತಾರೆ. ಅವರು ಧರ್ಮ ಪ್ರಚಾರಕ್ಕೆ ತ್ಯಾಗಗಳನ್ನು ಮಾಡುವವರಾಗಿರುತ್ತಾರೆ. ಅವರು ಒಳಿತುಗಳ ಕಡೆಗೆ ಸ್ವತಃ ಗಮನ ಹರಿಸುವವರಾಗಿರುತ್ತಾರೆ ಮತ್ತು ಅನ್ಯರನ್ನೂ ಗಮನ ಹರಿಸುವವರನ್ನಾಗಿ ಮಾಡುತ್ತಾರೆ. ಅವರು ಕೆಡುಕುಗಳಿಂದ ತಮ್ಮನ್ನು ತಡೆಗಟ್ಟುತ್ತಾರೆ ಮತ್ತು ಅನ್ಯರನ್ನೂ ಕೆಡುಕುಗಳಿಂದ ತಡೆಯುತ್ತಾರೆ. ಈ ಎಲ್ಲ ಕೆಲಸಗಳನ್ನು ಅವರು ಅಲ್ಲಾಹನಿಗೆ ಭಯಪಟ್ಟುಕೊಂಡು ಮಾಡುವುದರಿಂದ ಅಲ್ಲಾಹನು ಸಹ ಅವರ ಕೆಲಸಗಳಿಗೆ ಅತ್ಯುತ್ತಮ ಪರಿಣಾಮ ದೊರಕುವಂತೆ ಮಾಡುತ್ತಾನೆ. ಏಕೆಂದರೆ ಎಲ್ಲ ವಿಷಯಗಳಿಗೆ ಸಂಬಂಧಿಸಿ ತೀರ್ಮಾನವನ್ನು ಅಲ್ಲಾಹನೇ ಮಾಡುತ್ತಾನೆ.

ನೀವು ಇಲ್ಲಿ ಮಹ್‌ದೀ ಆಬಾದ್‌ನಲ್ಲಿ ಮಸ್‌ಜಿದ್ ನಿರ್ಮಿಸಿದಿರಿ. ಅದರ ಉದ್ಘಾಟನೆ ಸಹ ನಡೆದಿದೆ. ಜರ್ಮನಿಯ ಜಮಾಅತ್ ಒಂದು ನೂರು ಮಸ್‌ಜಿದ್‌ಗಳ ನಿರ್ಮಾಣ ಮಾಡುವ ಯೋಜನೆ ಪ್ರಕಾರ ಅಲ್ಲಾಹನ ಅನುಗ್ರಹದಿಂದ ಮಸ್‌ಜಿದ್‌ಗಳನ್ನು ನಿರ್ಮಿಸುವ ಭಾಗ್ಯವನ್ನು ಗಳಿಸುತ್ತಾ ಇದೆ. ಪ್ರತಿಯೊಬ್ಬ ಅಹ್ಮದೀ ನೆನಪಿಡಬೇಕಾದುದೇನೆಂದರೆ, ಅವರ ಉದ್ದೇಶಲಕ್ಷ್ಯ ಮಸ್‌ಜಿದ್‌ಗಳ ನಿರ್ಮಾಣದಿಂದ ಪೂರ್ಣಗೊಳ್ಳುವುದಿಲ್ಲ. ನಿಷ್ಠೆಯಿಂದ ಅಲ್ಲಾಹನನ್ನು ಆರಾಧಿಸುವ ಕಡೆಗೆ ಲಕ್ಷ್ಯ ನೀಡುವಾಗ ಮತ್ತು ಬಾಜಮಾಅತ್ ನಮಾಝ್‌ಗಳನ್ನು ನಿರ್ವಹಿಸಲು ಮಸ್‌ಜಿದ್‌ಗಳಿಗೆ ಆಗಮಿಸುವಾಗ ಮಾತ್ರ ಉದ್ದೇಶ ಲಕ್ಷ್ಯ ಈಡೇರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುತ್ತಖಿಯ ಗುಣಗಳನ್ನು ವಿವರಿಸುತ್ತಾ ಹೇಳಿದರು: ಅವರು ಯುಖೀಮೂನಸ್ಸಲಾತ ಮಾಡುವವರಾಗಿರುತ್ತಾರೆ. ಎಂದರೆ ಅವರು ನಮಾಝನ್ನು ನೆಲೆನಿಲ್ಲುವಂತೆ ಮಾಡುತ್ತಾರೆ. ಮುತ್ತಖಿ ಅಲ್ಲಾಹನಿಗೆ ಭಯಪಡುತ್ತಾನೆ ಮತ್ತು ನಮಾಝನ್ನು ನೆಲೆನಿಲ್ಲಿಸುತ್ತಾನೆ. ನಮಾಝ್ ಮಾಡುವಾಗ ವಿವಿಧ ರೀತಿಯ ಯೋಚನೆಗಳೂ ಅಪಾಯಗಳೂ ಸಂಭವಿಸಿ ನಮಾಝ್ ಮಾಡುವವನ ಏಕಾಗ್ರತೆಗೆ ತಡೆ ಉಂಟುಮಾಡುತ್ತವೆ. ಒಬ್ಬ ಮುತ್ತಖಿಯಾದವನು ತನ್ನ ಆತ್ಮದ ಈ ಚಂಚಲತೆಯಲ್ಲಿಯೂ ನಮಾಝನ್ನು ನೆಲೆನಿಲ್ಲಿಸುತ್ತಾನೆ. ಅವನು ಪ್ರಯತ್ನಪೂರ್ವಕವಾಗಿ ಪದೇ ಪದೇ ತನ್ನ ನಮಾಝನ್ನು ನೆಲೆನಿಲ್ಲಿಸುತ್ತಾನೆ.

ಆದುದರಿಂದ ಸ್ಥಿರಚಿತ್ತನಾಗಿ ಮನುಷ್ಯನು ನಮಾಝನ್ನು ನೆಲೆನಿಲ್ಲಿಸುವವನಾದರೆ, ಅವನು ತನ್ನ ನಮಾಝನ್ನು ಉನ್ನತ ಮಟ್ಟಕ್ಕೆ ತಲಪಿಸಬೇಕೆಂಬ ಪ್ರಯತ್ನವನ್ನು ಮಾಡುತ್ತಾ ಇದ್ದರೆ ಎಂತಹ ಸಮಯ ಸನ್ನಿಹಿತವಾಗುತ್ತದೆ ಎಂದರೆ ಅಲ್ಲಾಹನು ತನ್ನ ವಚನದ ಮೂಲಕ ಮಾರ್ಗದರ್ಶನವನ್ನು ದಯಪಾಲಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಲೌಕಿಕ ಆಹಾರವಿಲ್ಲದೆ ಜೀವಿಸಲು ಸಾಧ್ಯವಾಗದ ಹಾಗೆಯೇ ನಮಾಝ್ ರಹಿತವಾಗಿ ಸಹ ಜೀವಿಸಲು ಸಾಧ್ಯವಿಲ್ಲ. ಈ ಆಹಾರ ಹೇಗಿದೆ ಎಂದರೆ ಅದನ್ನು ರುಚಿಸಲು ಸಹ ಸಾಧ್ಯವಿದೆ. ಬಹಳ ಬಾಯಾರಿಕೆಯ ವೇಳೆ ತಣ್ಣೀರು ಕುಡಿಯುವಾಗ ಎಂತಹ ರಸಾನುಭೂತಿ ಪ್ರಾಪ್ತಿಯಾಗುತ್ತದೆಯೋ ಅಂತಹ ರಸಾನುಭೂತಿ ನಮಾಝ್‌ನಿಂದಲೂ ಲಭಿಸುತ್ತದೆ. ಬಾಯಾರಿಕೆಯಿಂದಿರುವವನು ತಣ್ಣೀರನ್ನು ಸಂತೋಷಭರಿತನಾಗಿ ಕುಡಿಯುತ್ತಾನೆ ಮತ್ತು ಬಾಯಾರಿಕೆ ನಿವಾರಿಸಿ ಅದರಿಂದ ಸಂತೋಷ ಗಳಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮುತ್ತಖಿಯಾದ ಸತ್ಯವಿಶ್ವಾಸಿ ನಮಾಝ್‌ನಿಂದ ರಸಾನುಭೂತಿ ಗಳಿಸುತ್ತಾನೆ. ಆದುದರಿಂದ ಅವನು ನಮಾಝನ್ನು ಚೆನ್ನಾಗಿ ಸಾವಧಾನದಿಂದ ಅನುಷ್ಠಿಸಬೇಕು. ನಮಾಝ್ ಎಲ್ಲ ಅಭಿವೃದ್ಧಿಗಳ ಬೇರು ಮತ್ತು ಏಣಿ ಆಗಿದೆ. ಆದುದರಿಂದ ನಮಾಝನ್ನು ಸತ್ಯವಿಶ್ವಾಸಿಗಳ ಮಿಅ್‌ರಾಜ್ (ಆರೋಹಣ) ಎಂದು ಹೇಳಲಾಗಿದೆ. ಅದರ ಮೂಲಕ ಅಲ್ಲಾಹನ ಸಮೀಪಕ್ಕೆ ತಲಪಬಹುದಾಗಿದೆ.

ಆದುದರಿಂದ ನಮ್ಮ ಮಸ್‌ಜಿದ್‌ಗಳು ನಿರ್ಮಿಸಲ್ಪಡುವಾಗ ಇಂತಹ ನಮಾಝ್ ಅನುಷ್ಠಿಸಲಿಕ್ಕೋಸ್ಕರ ನಿರ್ಮಿಸಲ್ಪಡಲಿ. ನಾವು ಮಸ್‌ಜಿದ್‌ಗಳನ್ನು ನಿರ್ಮಿಸುವ ಕಡೆಗೆ ಗಮನ ಹರಿಸಿದರೆ ಅಲ್ಲಾಹನ ಸಮೀಪಕ್ಕೆ ತಲಪಿಸುವ ಇಂತಹ ಮಿಅ್‌ರಾಜ್ ಗಳಿಸಲು ಮತ್ತು ಅಲ್ಲಾಹನೊಂದಿಗೆ ಮಾತನಾಡಲು ಸಂದರ್ಭ ಸಿಗುತ್ತದೆ. ಆದುದರಿಂದ ಇಂತಹ ಪದವಿ ಗಳಿಸುವ ಬಗ್ಗೆ ನಿರಾಶೆ ಹೊಂದಬೇಡಿರಿ. ನಿರಂತರ ಪ್ರಯತ್ನ ಮಾಡಿದರೆ ಅಲ್ಲಾಹನು ಇಂತಹ ಸ್ಥಾನ ದಯಪಾಲಿಸುತ್ತಾನೆ. ಅನೇಕ ಜನರು ಪ್ರಶ್ನೆ ಕೇಳುತ್ತಾರೆ ಮತ್ತು ನನಗೆ ಸಹ ಬರೆಯುತ್ತಾರೆ, ನಮಾಝ್‌ನಲ್ಲಿ ಶ್ರದ್ಧೆ ನೆಲೆನಿಲ್ಲುವುದಿಲ್ಲ ಎಂದು. ಅದಕ್ಕಿರುವ ಪರಿಹಾರ ಮಾರ್ಗ ಇದೇ ಆಗಿದೆ. ನೀವು ಪದೇ ಪದೇ ಪ್ರಯತ್ನ ಮಾಡುತ್ತಾ ಶ್ರದ್ಧೆಯನ್ನು ಸ್ಥಾಪಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇದು ಅಲ್ಲಾಹನ ಅನುಗ್ರಹ ಮತ್ತು ಔದಾರ್ಯವಾಗಿದೆ. ಮನುಷ್ಯರು ಅಂತಹ ಯೋಚನೆಗಳಿಂದ ಸೋಲಿಸಲ್ಪಡುವುದಿಲ್ಲ. ಮನುಷ್ಯನು ನಮಾಝ್ ಮಾಡುವಾಗ ನಾನಾ ವಿಧಗಳ ಯೋಚನೆಗಳು ತನ್ನ ಮೇಲೆ ಜಯಗಳಿಸಲು ಬಿಡದಿದ್ದರೆ ಅದು ಸಹ ಪುಣ್ಯ ಗಳಿಸುವ ಸ್ಥಿತಿಯಾಗುತ್ತದೆ. ಅಲ್ಲಾಹನು ಅವನಿಗೆ ಪುಣ್ಯ ದಯಪಾಲಿಸುತ್ತಾನೆ. ದುಷ್ಪ್ರೇರಕ ಆತ್ಮ (ನಫ್ಸೇ ಅಮ್ಮಾರ) ಬಾಧಿತರಾದವರಿಗೆ ಕೆಟ್ಟದೆಂದರೆ ಏನೆಂದು ತಿಳಿದಿರುವುದಿಲ್ಲ. ನಫ್ಸೇ ಲವ್ವಾಮ (ಸ್ವಯಂದೂಷಿಸುವ

ಆತ್ಮ) ಹೊಂದಿರುವವರು ಕೆಟ್ಟ ಕೆಲಸ ಮಾಡುವಾಗ ಯಾವಾಗಲೂ ಗಾಬರಿಪಡುತ್ತಾರೆ ಮತ್ತು ನಾಚಿಕೆಪಡುತ್ತಾರೆ. ನಫ್ಸೇ ಲವ್ವಾಮದ ಸ್ಥಿತಿಯಲ್ಲಿ ಕೆಡುಕಿನ ಬಗ್ಗೆ ನಾಚಿಕೆಪಡುವಾಗ ಅಲ್ಲಾಹನು ಅದಕ್ಕೆ ಸಹ ಪ್ರತಿಫಲ ನೀಡುತ್ತಾನೆ. ಅಂತಹ ವ್ಯಕ್ತಿ ತನ್ನ ಆತ್ಮದ ಗುಲಾಮನಾಗಿರುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಮನುಷ್ಯನು ಬಳಲಿಕೆ ಹೊಂದಬಾರದು. ಸಜ್ದದಲ್ಲಿ **ಯಾ ಹಯ್ಯು ಯಾ ಖಯ್ಯೂಮ್ ಬಿ ರಹ್ಮತಿಕ ಅಸ್ತಗೀಸ್** ಎಂಬ ಪ್ರಾರ್ಥನೆ ಬಹಳವಾಗಿ ಉಚ್ಚರಿಸುತ್ತಾ ಇರಬೇಕು. ಆದರೆ ನೆನಪಿಡಿರಿ, ತ್ವರೆಪಡುವುದು ಭಯಾನಕವಾಗಿದೆ. ವರ್ಷಗಟ್ಟಲೆ ಪ್ರಯತ್ನ ಮಾಡುವ ಮೂಲಕ ಶೈತಾನನ ಆಕ್ರಮಣಗಳು ಬಲಹೀನವಾಗುತ್ತವೆ. ಅವನು ಓಡಿ ಹೋಗುತ್ತಾನೆ. ಆದರೆ ತ್ವರೆ ಪಟ್ಟರೆ, ನಮಾಝನ್ನು ನೆಲೆನಿಲ್ಲಿಸಲು ಧಾರಾಳ ಪ್ರಯತ್ನ ಮಾಡದಿದ್ದರೆ, ಮನುಷ್ಯನು ಶೈತಾನನ ಹಿಡಿತಕ್ಕೆ ಸಿಲುಕುತ್ತಾನೆ.

ಕೇವಲ ಲೌಕಿಕವಾದ ಆವಶ್ಯಕತೆಗಳನ್ನು ಮಾತ್ರ ಬೇಡಿಕೊಳ್ಳುತ್ತಾ ಇದ್ದರೆ ಅಲ್ಲಾಹನು ಅಂತಹ ಪ್ರಾರ್ಥನೆಗಳನ್ನು ಅಂಗೀಕರಿಸಲಾರನು. ಅಲ್ಲಾಹನಿಂದ ತನ್ನ ಆಧ್ಯಾತ್ಮಿಕ ಪ್ರಗತಿಯನ್ನು ಬೇಡಿಕೊಳ್ಳುವುದಾದರೆ, ಅಲ್ಲಾಹನ ಸಾಮೀಪ್ಯ ಲಭಿಸುವಂತೆ ಬೇಡಿಕೊಳ್ಳುವುದಾದರೆ ಅಲ್ಲಾಹನು ಬೇಡಿಕೊಳ್ಳುವವನಿಗೆ ಸಮೀಪವಾಗುತ್ತಾನೆ ಮತ್ತು ಹಾಗೆ ಪ್ರಾರ್ಥಿಸುವವನ ಲೌಕಿಕ ಆವಶ್ಯಕತೆಗಳನ್ನು ಸಹ ಈಡೇರಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಸ್ಸಲಾಮ್ ಈ ವಿಷಯದ ಬಗ್ಗೆ ಹೀಗೆ ಹೇಳುತ್ತಾರೆ: ನೀವು ನಮಾಝ್‌ಗಳಲ್ಲಿ ನಿಮ್ಮ ಭಾಷೆಯಲ್ಲಿ ಸಹ ಬೇಡಿಕೊಳ್ಳಿರಿ. ಅಲ್ಲಾಹನು ಆಜ್ಞಾಪಿಸಿದ್ದಾನೆ – ನಮಾಝ್‌ನಲ್ಲಿ ಅಳಲು ಇರಬೇಕು ಮತ್ತು ಹೃತ್ಪೂರ್ವಕತೆ ಇರಬೇಕು. ಯಾರಲ್ಲಿ ಅಳಲು ಇದೆಯೋ ಅಂತಹ ಜನರ ಪಾಪಗಳು ದೂರ ಸರಿಸಲ್ಪಡುತ್ತವೆ. اِنَّ الۡحَسَنٰتِ يُذۡهِبۡنَ السَّيِّاٰتِ ಅಂದರೆ, ಒಳಿತುಗಳು ಕೆಡುಕುಗಳನ್ನು ದೂರಸರಿಸುತ್ತವೆ. ಇಲ್ಲಿ ಹಸನಾತ್ (ಒಳಿತುಗಳು) ಎಂದು ಹೇಳಿದುದು ನಮಾಝ್‌ಗಳ ಬಗ್ಗೆಯಾಗಿದೆ. ಪ್ರಾರ್ಥನೆಯನ್ನು ಸ್ವಂತ ಭಾಷೆಯಲ್ಲಿ ಬೇಡುವಾಗ ಹೃತ್ಪೂರ್ವಕ ಸ್ಥಿತಿ ಮತ್ತು ಅಳಲು ಉಂಟಾಗುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅತ್ಯುತ್ತಮ ದುಆ **ಸೂರತುಲ್ ಫಾತಿಹ** ಆಗಿದೆ. ಏಕೆಂದರೆ ಅದು ಸಮಗ್ರ ದುಆ ಆಗಿದೆ. ಸೂರತುಲ್ ಫಾತಿಹದಲ್ಲಿ ಅಲ್ಲಾಹನು ನಮಗೆ ಕಲಿಸಿದ ಒಂದು ದುಆ **ಇಹ್‌ದಿನಸ್ಸಿರಾತಲ್ ಮುಸ್ತಖೀಮ್** (ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು) ಎಂದಾಗಿದೆ. ನೀವು ಸರಿಯಾದ ಮಾರ್ಗವನ್ನು ಹುಡುಕಿರಿ. ನೀವು ಪ್ರಾರ್ಥಿಸಿರಿ: ನನ್ನ ದೇವಾ, ನಾನು ಪಾಪಿಯಾದ ನಿನ್ನ ದಾಸನಾಗಿದ್ದೇನೆ. ವಿಪತ್ತಿಗೆ ಈಡಾದವನಾಗಿದ್ದೇನೆ. ನನಗೆ ಮಾರ್ಗದರ್ಶನ ನೀಡು. ನೀವು ಚಿಕ್ಕ ಮತ್ತು ದೊಡ್ಡ ಎಲ್ಲ ಆವಶ್ಯಕತೆಗಳನ್ನು ಸಂಕೋಚಪಡದೆ ಅಲ್ಲಾಹನಲ್ಲಿ ಬೇಡಿಕೊಳ್ಳಿರಿ. ವಾಸ್ತವಿಕವಾಗಿ ನೀಡಬಲ್ಲವನು ಅವನೇ ಆಗಿದ್ದಾನೆ. ಬಹಳ ಪ್ರಾರ್ಥನೆ ಮಾಡುವವನೇ ಬಹಳ ಒಳ್ಳೆಯವನಾಗಿದ್ದಾನೆ. ಏಕೆಂದರೆ ಒಬ್ಬ ಜಿಪುಣನ ಮನೆ ಬಾಗಿಲಿನ ಬಳಿಗೆ ಹೋಗಿ ಪ್ರತಿ ದಿನ ಭಿಕ್ಷೆ ಬೇಡುತ್ತಾ ಇದ್ದರೆ ಅವನಿಗೆ ಮುಂದೆ ಒಂದು ದಿನ ನಾಚಿಕೆಯಾಗಬಹುದಾಗಿದೆ. ಹೀಗಿರುವಾಗ ಅಲ್ಲಾಹನಿಂದ ಬೇಡಿಕೊಳ್ಳುವವನಿಗೆ ಸಿಗದಿರುವುದಾದರೂ ಹೇಗೆ? ಆದುದರಿಂದ ಬೇಡಿಕೊಳ್ಳುವವನು ಎಂದಾದರೂ ಒಂದು ದಿನ ಖಂಡಿತವಾಗಿ ಪಡೆದುಕೊಳ್ಳುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ಬೈಅತ್ ಸಮಯದಲ್ಲಿ ತೌಬ ಮಾಡುವಾಗ ಒಂದು ಅನುಗ್ರಹವಿರುತ್ತದೆ. ಅದರೊಂದಿಗೆ ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಶರತ್ತನ್ನು ಸೇರಿಸಿದರೆ ಅಭಿವೃದ್ಧಿ ಲಭಿಸುತ್ತದೆ. ಆದರೆ ಹೀಗೆ ಮಾಡುವುದು ನಿಮ್ಮ ಸಾಮರ್ಥ್ಯಕ್ಕೆ ಒಳಪಟ್ಟದ್ದಲ್ಲ. ಅದಕ್ಕೋಸ್ಕರ ದೈವಿಕ ಸಹಾಯ ಬಹಳ ಆವಶ್ಯಕವಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: وَالَّذِيۡنَ جَاهَدُوۡا فِيۡنَا لَنَهۡدِيَنَّهُمۡ سُبُلَنَا – ಯಾರು ನಮ್ಮ ಮಾರ್ಗದಲ್ಲಿ ಪರಿಶ್ರಮಪಡುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ಮಾರ್ಗದರ್ಶನ ನೀಡುತ್ತೇವೆ. ಅಲ್ಲಾಹನ ಸಹಾಯವಿಲ್ಲದೆ ಬದಲಾವಣೆ ಅಸಾಧ್ಯವಾಗಿದೆ. ಅಲ್ಲಾಹನ ಅನುಗ್ರಹ ಯಾಚಿಸಲಿಕ್ಕೋಸ್ಕರ, ಅವನ ಸಹಾಯ ಬೇಡಿಕೊಳ್ಳಲಿಕ್ಕೋಸ್ಕರ ಪ್ರಾರ್ಥನೆ ಮಾಡಲೇಬೇಕಾಗಿದೆ. ಇದೇ ಕಾರಣದಿಂದ ಐದು ಹೊತ್ತು ನಮಾಝ್‌ಗಳಲ್ಲಿ ಸೂರಃ ಫಾತಿಹ ಓದಲು ಆಜ್ಞಾಪಿಸಲಾಗಿದೆ. ಅದರಲ್ಲಿ **ಇಯ್ಯಾಕ ನಅ್‌ಬುದು** ಮತ್ತು **ಇಯ್ಯಾಕ ನಸ್ತಈನ್**. (ಹೇ ದೇವಾ, ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದಲೇ ಸಹಾಯವನ್ನು ಯಾಚಿಸುತ್ತೇವೆ) ಎಂಬ ಪ್ರಾರ್ಥನೆ ಇದೆ. ಈ ಪ್ರಾರ್ಥನೆಯಲ್ಲಿ ಎರಡು ವಿಷಯಗಳನ್ನು ಸೂಚಿಸಲಾಗಿದೆ. ಪ್ರತಿಯೊಂದು ಒಳ್ಳೆಯ ಕೆಲಸವನ್ನು ಯೋಚಿಸಿ ಪರಿಶ್ರಮದಿಂದ ಮಾಡಬೇಕು. ಒಬ್ಬನು ಕೇವಲ ಪ್ರಾರ್ಥನೆ ಮಾಡಿ ಪರಿಶ್ರಮಪಡದಿದ್ದರೆ ಅವನು ಜಯಶಾಲಿಯಾಗಲಾರ. ಒಬ್ಬ ಕೃಷಿಕ ಬೀಜ ಬಿತ್ತಿದ ನಂತರ ಪರಿಶ್ರಮಪಡದಿದ್ದರೆ ಅವನಿಗೆ ಬೆಳೆ ಸಿಗುವ ಪ್ರತೀಕ್ಷೆ ಇರಲು ಹೇಗೆ ತಾನೆ ಸಾಧ್ಯ. ಇದೇ ರೀತಿ ಧಾರ್ಮಿಕ ಕೆಲಸಗಳ ಸ್ಥಿತಿಯೂ ಆಗಿದೆ. ಜನರಲ್ಲಿ ಕಪಟ ವಿಶ್ವಾಸಿಗಳು, ನೀಚರು, ಸಾತ್ವಿಕರು, ಸಂತರು, ಖುತುಬುಗಳು, ಗೌಸ್‌ಗಳು ಇರುತ್ತಾರೆ. ಕೆಲವರು ನಲ್ವತ್ತು ವರ್ಷ ನಮಾಝ್ ಅನುಷ್ಠಿಸಿದರೂ ಮೊದಲಿನ ದಿನ ಇದ್ದ ಹಾಗೆಯೇ ಇರುತ್ತಾರೆ. ಅಭಿವೃದ್ಧಿ ಏನೂ ಇರುವುದಿಲ್ಲ. ರಮಝಾನಿನ ಮೂವತ್ತು ಉಪವಾಸ ಅನುಷ್ಠಿಸಿದರೂ ಯಾವುದೇ ಪ್ರಯೋಜನ ಇರುವುದಿಲ್ಲ. ಬಹಳ ಜನರು ಹೇಳುತ್ತಾರೆ: ನಾವು ಮುತ್ತಖಿಗಳಾಗಿದ್ದೇವೆ. ದೀರ್ಘಕಾಲದಿಂದ ನಮಾಝ್ ನಿರ್ವಹಿಸುತ್ತಿದ್ದೇವೆ. ಆದರೆ ನಮಗೆ ದೈವಿಕ ಸಹಾಯ ಲಭಿಸಿಲ್ಲ ಎಂದು. ಇದಕ್ಕೆ ಕಾರಣವೇನೆಂದರೆ, ಅವರು ಆಚಾರದ ಮತ್ತು ಅನುಕರಣೆಯ ನಮಾಝ್ ನಿರ್ವಹಿಸುತ್ತಾರೆ. ಅವರಿಗೆ ಆಧ್ಯಾತ್ಮಿಕ ಅಭಿವೃದ್ಧಿಯ ಯೋಚನೆಯೇ ಇರುವುದಿಲ್ಲ. ಅವರಿಗೆ ಪಾಪ ಕಾರ್ಯಗಳ ಬಗ್ಗೆ ಶ್ರದ್ಧೆಯೇ ಇಲ್ಲ. ಸತ್ಯವಾದ ತೌಬದ ಆಶೆಯೇ ಅವರಿಗೆ ಇರುವುದಿಲ್ಲ. ಅವರು ಪ್ರಥಮ ಹೆಜ್ಜೆಯಲ್ಲಿಯೇ ಇರುತ್ತಾರೆ. ಇಂತಹ ಮನುಷ್ಯರು ಮೃಗಗಳಿಗೆ ಸಮಾನರು. ಅಂತಹ ನಮಾಝ್‌ಗಳು ಅಲ್ಲಾಹನ ಕಡೆಯಿಂದ ವೈಲ್ (ವಿನಾಶ) ತರುತ್ತವೆ. ಅವು ಸ್ವೀಕರಿಸಲ್ಪಡುವುದಿಲ್ಲ. ಅವು ಅವರ ಮುಖಕ್ಕೆ ಎಸೆಯಲ್ಪಡುತ್ತವೆ. ನಮಾಝ್‌ನೊಂದಿಗೆ ಅಭಿವೃದ್ಧಿಯನ್ನು ತರುವಂತಹದ್ದೇ ನಿಜವಾದ ನಮಾಝ್ ಆಗಿದೆ.

ಆದುದರಿಂದ ಆಚಾರ ರೂಪದ ನಮಾಝ್ ಸರಿಯಲ್ಲ. ಅದನ್ನು ಬದಲಾಯಿಸಬೇಕು. ನೀವು ಯೋಚಿಸಬೇಕು, 'ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸುವುದಾಗಿ ಹೇಳಿದ್ದಾನೆ. ಆದರೆ ನನ್ನ ಪ್ರಾರ್ಥನೆಗಳು ಯಾಕೆ ಸ್ವೀಕರಿಸಲ್ಪಡುವುದಿಲ್ಲ' ಎಂಬುದರ ಬಗ್ಗೆ ಚಿಂತಿಸಬೇಕು. ವಾಸ್ತವಿಕ ಆರಾಧನೆಯಿಂದ ಅಲ್ಲಾಹನ ಸಾಮೀಪ್ಯ ದೊರಕಬೇಕು. ನಮಾಝ್ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝ್ ವಾಸ್ತವಿಕವಾಗಿ ಪ್ರಾರ್ಥನೆ ಆಗಿದೆ. ಪ್ರಾರ್ಥನೆಯಲ್ಲಿ ಉಚ್ಚರಿಸುವ ಪ್ರತಿಯೊಂದು ಶಬ್ದ ದುಆದ ಗುರಿಯಾಗಿರುತ್ತದೆ. ನಮಾಝ್ ಬಗ್ಗೆ ಹೃತ್ಪೂರ್ವಕ

ಆಸಕ್ತಿ ಉಂಟಾಗದಿದ್ದರೆ ಶಿಕ್ಷೆಗೆ ಸಿದ್ಧರಾಗಿರಿ. ಯಾರು ದುಆ ಮಾಡುವುದಿಲ್ಲವೋ ಅವನು ನಾಶಕ್ಕೆ ಸಮೀಪವಾಗುತ್ತಾನೆ. ಅಲ್ಲಾಹನು ಎಲ್ಲ ಸಮಯ ಮನುಷ್ಯನಿಗೆ ಸುಖ ನೀಡಲು ಸಿದ್ಧನಾಗಿರುತ್ತಾನೆ. ಆದರೆ ಅದರ ಶರತ್ತೇನೆಂದರೆ ಅದಕ್ಕೋಸ್ಕರ ಬೇಡಿಕೊಳ್ಳಬೇಕು. ದುಆಗಳು ಸ್ವೀಕರಿಸಲ್ಪಡಲು ಅಲ್ಲಾಹನ ಆಜ್ಞೆಗಳನ್ನು ಪಾಲಿಸದಿರುವುದರಿಂದ ದೂರ ಸರಿಯಬೇಕು. ದುಆ ಬಹಳ ತೀವ್ರವಾಗಿ ಮಾಡಬೇಕು. ಏಕೆಂದರೆ ಕಲ್ಲು ಕಲ್ಲಿನ ಮೇಲೆ ತೀವ್ರವಾಗಿ ಬೀಳುವಾಗ ಬೆಂಕಿ ಉತ್ಪನ್ನವಾಗುತ್ತದೆ.

ಆದುದರಿಂದ ನಾವು ನಮ್ಮೊಳಗೆ ಉತ್ತಮ ಬದಲಾವಣೆ ಸೃಷ್ಟಿಸಿದರೆ ನಮ್ಮ ನಮಾಝ್‌ಗಳೂ ನಮ್ಮ ಕರ್ಮಗಳೂ ಅಲ್ಲಾಹನ ಸಂಪ್ರೀತಿ ಗಳಿಸುವವುಗಳಾಗುತ್ತವೆ. ಆಗ ಅಲ್ಲಾಹನು ನಮ್ಮ ಭಯಗಳನ್ನು ನಿವಾರಿಸಿ ಯಾವಾಗಲೂ ಶಾಂತಿಯಲ್ಲಿರುವಂತೆ ಮಾಡುವನು. ನಾವು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಹೇಳಿಕೆಯನ್ನು ಯಾವಾಗಲೂ ನೆನಪಿನಲ್ಲಿರಿಸಬೇಕು: ಕುಫ್ರ್ ಮತ್ತು ಈಮಾನ್ ಇವುಗಳ ಮಧ್ಯೆ ವ್ಯತ್ಯಾಸವನ್ನುಂಟುಮಾಡುವುದು ನಮಾಝ್ ತ್ಯಜಿಸುವುದಾಗಿದೆ. ಆದುದರಿಂದ ಈ ಹೇಳಿಕೆ ನಮ್ಮನ್ನು ಅಲುಗಾಡಿಸುವಂತಹದಾಗಬೇಕು. ನಮಾಝನ್ನು ಕ್ರಮಬದ್ಧವಾಗಿ ಅನುಷ್ಠಿಸುವವನೇ ಸತ್ಯ ವಿಶ್ವಾಸಿಯಾಗಿದ್ದಾನೆ. ಹಾಗೆ ಅಲ್ಲವಾದರೆ ಅವನ ಮತ್ತು ಅವಿಶ್ವಾಸಿ ಮಧ್ಯೆ ವ್ಯತ್ಯಾಸವೇನೂ ಇರುವುದಿಲ್ಲ. ಆದುದರಿಂದ ನಾವು ಮಸ್‌ಜಿದ್ ನಿರ್ಮಿಸಿದ ನಂತರ ಮಸ್‌ಜಿದ್‌ಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವುದು ಸಹ ಆವಶ್ಯಕವಾಗಿದೆ. ನಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸುವ ಆವಶ್ಯಕತೆ ಸಹ ಇದೆ. ಸಾಂಪತ್ತಿಕ ತ್ಯಾಗದ ಬಗ್ಗೆ ಗಮನ ಹರಿಸುವ ಆವಶ್ಯಕತೆಯೂ ಇದೆ. ಸ್ವತಃ ಒಳಿತುಗಳನ್ನು ಮಾಡಿ ಸ್ವಭಾವ ಗುಣಗಳನ್ನು ಉತ್ತಮಗೊಳಿಸಿ ಅದರೊಂದಿಗೆ ಅನ್ಯರಿಗೂ ಒಳಿತು ಮಾಡುವ ಬಗ್ಗೆ ಉಪದೇಶಿಸುವುದು ಆವಶ್ಯಕವಾಗಿದೆ. ಇಲ್ಲಿನ ಪರಿಸರದ ಕೆಡುಕುಗಳಿಂದ ಸ್ವತಃ ತನ್ನನ್ನು ರಕ್ಷಿಸಿಕೊಂಡು ಅನ್ಯರನ್ನು ಸಹ ರಕ್ಷಿಸಲು ಪ್ರಯತ್ನಿಸುವುದು ಆವಶ್ಯಕವಾಗಿದೆ. ಹೀಗೆ ಮಾಡದಿದ್ದರೆ ನಮ್ಮ ಬೈಅತ್ ಕೇವಲ ಬಾಯಿ ಮಾತಿನ ಪ್ರತಿಜ್ಞೆ ಮಾತ್ರವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಎಂತಹ ಜನರಾಗಬೇಕೆಂದರೆ ಅಲ್ಲಾಹನ ಇರಾದೆಗಳು ನಿಮ್ಮ ಇರಾದೆಯಾಗಬೇಕು. ನೀವು ಅವನ ಸಂಪ್ರೀತಿ ಪಡೆದವರಾಗಬೇಕು. ನಿಮ್ಮದು ಏನೂ ಇರಬಾರದು. ಎಲ್ಲವೂ ಅವನಿಗೆ ಸೇರಿರಬೇಕು. ಹೃದಯ ಪರಿಶುದ್ಧತೆ ಇದೇ ಆಗಿದೆ. ಎಂದರೆ ಕರ್ಮಗಳಲ್ಲಿ ಮತ್ತು ನಂಬಿಕೆಗಳಲ್ಲಿ ಅಲ್ಲಾಹನಿಗೆ ವಿರುದ್ಧವಾದವುಗಳನ್ನು ಎಸೆದು ಬಿಡಬೇಕು. ಮನುಷ್ಯನ ಇರಾದೆ ನನ್ನ ಇರಾದೆ ಪ್ರಕಾರ ಇದೆಯೋ ಮನುಷ್ಯನ ಸಂತೃಪ್ತಿ ನನ್ನ ಸಂಪ್ರೀತಿಯಲ್ಲಿ ಲೀನವಾಗಿದೆಯೋ ಎಂದು ಅಲ್ಲಾಹನು ನೋಡುತ್ತಿರುತ್ತಾನೆ. ಅಲ್ಲಿಯ ತನಕ ಅಲ್ಲಾಹನು ಯಾರಿಗೂ ಸಹಾಯ ನೀಡುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನನ್ನ ಜಮಾಅತಿನ ಜನಸಂಖ್ಯೆ ವರ್ಧಿಸುವುದರಿಂದ ನಾನು ಎಂದೂ ಸಂತೋಷಪಡುವುದಿಲ್ಲ. ಒಂದು ಜಮಾಅತ್ ವಾಸ್ತವಿಕವಾಗಿ ಜಮಾಅತ್ ಎಂದು ಕರೆಯಲ್ಪಡಲು ಅರ್ಹವಾಗುವುದು ಬೈಅತ್ ಪ್ರತಿಜ್ಞೆಗಳನ್ನು ವಾಸ್ತವಿಕವಾಗಿ ಕಾರ್ಯರೂಪಕ್ಕೆ ತರುವಾಗ ಮಾತ್ರವಾಗಿರುತ್ತದೆ. ಅವರಲ್ಲಿ ಸತ್ಯವಾಗಿಯೂ ಒಂದು ಪರಿಶುದ್ಧ ಬದಲಾವಣೆ ಉಂಟಾಗಿ ಅವರ ಜೀವಿತ ಪಾಪ ಕೃತ್ಯಗಳ ಮಲಿನತೆಯಿಂದ ಸಂಪೂರ್ಣವಾಗಿ ಮುಕ್ತವಾಗಿರಬೇಕು. ಅವರು ಅಲ್ಲಾಹನ ಹಕ್ಕುಗಳನ್ನು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ವಿಶಾಲ ಹೃದಯಿಗಳಾಗಿ ಪರಿಪೂರ್ಣವಾಗಿ ಈಡೇರಿಸುವವರಾಗಬೇಕು. ಧರ್ಮದ ಪ್ರಚಾರಕ್ಕೋಸ್ಕರ ಅವರ ಹೃದಯದಲ್ಲಿ ಒಂದು ಬೇಗುದಿ ಸೃಷ್ಟಿಸಲ್ಪಡಬೇಕು. ಅವರು ತಮ್ಮ ಆಶಾಭಿಲಾಷೆಗಳನ್ನು ತ್ಯಜಿಸಿ ಅಲ್ಲಾಹನಿಗೆ ಸೇರಿದವರಾಗಬೇಕು. ನೀವು ಖಂಡಿತವಾಗಿ ತಿಳಿದುಕೊಳ್ಳಿರಿ, ಜಮಾಅತಿನ ಜನರ ಮತ್ತು ಅನ್ಯರ ಮಧ್ಯೆ ಯಾವುದಾದರೂ ವ್ಯತ್ಯಾಸವಿಲ್ಲದಿದ್ದರೆ ನೀವು ತಿಳಿದುಕೊಳ್ಳಿರಿ, ಅಲ್ಲಾಹನು ಯಾರ ಸಂಬಂಧಿಕನೂ ಅಲ್ಲ. ಅಲ್ಲಾಹನು ಹೇಳಿದ್ದಾನೆ: إِنَّمَا يَتَقَبَّلُ اللّٰهُ مِنَ الْمُتَّقِينَ – ಮುತ್ತಖಿಗಳ ಪ್ರಾರ್ಥನೆ ಮಾತ್ರ ಅಲ್ಲಾಹನು ಸ್ವೀಕರಿಸುತ್ತಾನೆ. ಅಲ್ಲಾಹನಿಗೆ ಭಯಪಟ್ಟು ಅವನ ಇಚ್ಛೆಗೆ ವಿರುದ್ಧವಾದ ಕೃತ್ಯಗಳನ್ನು ತ್ಯಜಿಸುವವನೇ ಮುತ್ತಖಿಯಾಗಿದ್ದಾನೆ. ಪ್ರಾರ್ಥಿಸುವಾಗ ಸತ್ಯವಾದ ಬೇಗುದಿ ಮತ್ತು ಅಳಲು ಇರದಿದ್ದರೆ ಅದು ಸ್ವೀಕರಿಸಲ್ಪಡಲಾರದು. ದುಆ ಸ್ವೀಕರಿಸಲ್ಪಡಲು ಅಳಲು ಆವಶ್ಯಕವಾಗಿದೆ. ಅಲ್ಲಾಹನು ಹೇಳುತ್ತಾನೆ: أَمَّنْ يُجِيبُ الْمُضْطَرَّ إِذَا دَعَاهُ وَيَكْشِفُ السُّوءَ – ಸಂಕಷ್ಟಕ್ಕೆ ಗುರಿಯಾದವನು ಪ್ರಾರ್ಥಿಸುವಾಗ ಅವನ ಪ್ರಾರ್ಥನೆಗೆ ಉತ್ತರ ನೀಡುವವನೂ ಅವನ ಕ್ಲೇಶಗಳನ್ನು ಹೋಗಲಾಡಿಸುವವನೂ ಯಾರು? (27:63).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪತ್ನಿ ಮತ್ತು ಮಕ್ಕಳನ್ನು ಸುಧಾರಣೆ ಮಾಡುವುದು ಸಹ ನಿಮಗೆ ಕಡ್ಡಾಯವಾಗಿದೆ. ಯಾರು ಒಳಿತು ಮಾಡುವುದರಲ್ಲಿ ಯಾವಾಗಲೂ ಮುಂದೆ ಹೆಜ್ಜೆ ಹಾಕುತ್ತಾರೋ ಅವರ ಜೊತೆಗೆಯೇ ಅಲ್ಲಾಹನ ಸಹಾಯವಿರುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಈ ಪ್ರಾರ್ಥನೆ ಕಲಿಸಿದ್ದಾನೆ: أَصْلِحْ لِي فِي ذُرِّيَّتِي – ನನ್ನ ಪತ್ನಿ ಮತ್ತು ಮಕ್ಕಳನ್ನು ಸುಧಾರಣೆ ಮಾಡು. ನಿಮ್ಮಲ್ಲಿ ಪರಿಶುದ್ಧ ಬದಲಾವಣೆಯನ್ನುಂಟುಮಾಡಿ ನಿಮ್ಮ ಬಗ್ಗೆ ದುಆ ಮಾಡುವುದರ ಜೊತೆಗೆ ಪತ್ನಿ ಮತ್ತು ಮಕ್ಕಳ ಸುಧಾರಣೆಗೆ ಪ್ರಯತ್ನಿಸಬೇಕು. ಅವರಿಗೋಸ್ಕರ ಪ್ರಾರ್ಥನೆ ಸಹ ಮಾಡಬೇಕು. ಯಾಕೆಂದರೆ ಬಹುತೇಕ ಪರೀಕ್ಷೆಗಳು ಮಕ್ಕಳ ಕಾರಣದಿಂದ ಮನುಷ್ಯರಿಗೆ ಸಂಭವಿಸುತ್ತವೆ. ಬಹುತೇಕ ಪರೀಕ್ಷೆಗಳು ಪತ್ನಿಯ ಕಾರಣದಿಂದಲೂ. ಆದುದರಿಂದ ಅವರ ಸುಧಾರಣೆ ಬಗ್ಗೆ ಪೂರ್ಣ ಶ್ರದ್ಧೆ ವಹಿಸಬೇಕು. ಅವರಿಗೋಸ್ಕರ ಪ್ರಾರ್ಥನೆ ಮಾಡುತ್ತಲೂ ಇರಬೇಕು.

ನಾವು ನಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಾವು ನಮ್ಮ ನಮಾಝನ್ನು ನೆಲೆನಿಲ್ಲಿಸಿ ಅವುಗಳನ್ನು ಉನ್ನತ ಮಟ್ಟಕ್ಕೆ ತಲಪಿಸುವವರಾಗಲಿ. ನಾವು ನಮ್ಮ ಸಂಪತ್ತನ್ನೂ ಪರಿಶುದ್ಧಗೊಳಿಸುವವರಾಗಲಿ. ನಮ್ಮ ಗುಣಗಳನ್ನು ಉತ್ತಮಗೊಳಿಸುವವರಾಗಲಿ. ಒಳಿತುಗಳನ್ನು ಮಾಡುವವರೂ ಹಬ್ಬಿಸುವವರೂ ಆಗಲಿ. ನಾವು ಕೆಡುಕುಗಳಿಂದ ದೂರ ಸರಿಯುವವರೂ ನಮ್ಮ ಸಂತಾನಗಳನ್ನು ಕೆಡುಕುಗಳಿಂದ ತಡೆಯುವವರೂ ಆಗಲಿ. ಮಸ್‌ಜಿದ್‌ಗಳನ್ನು ನಿರ್ಮಿಸುವುದರೊಂದಿಗೆ ಇಸ್ಲಾಮಿನ ನೈಜ ತತ್ವಗಳನ್ನು ಇಲ್ಲಿನ ನಾಗರಿಕರಿಗೆ ತಲಪಿಸುವವರಾಗಲಿ. ಅವರನ್ನು ಏಕದೇವನ ಆರಾಧಕರನ್ನಾಗಿ ಮಾಡುವವರಾಗಲಿ. ನಾವು ನಮ್ಮಲ್ಲಿ ಉತ್ತಮ ಬದಲಾವಣೆ ಉಂಟುಮಾಡಿದರೆ ಮಾತ್ರ ಇದು ಸಾಧ್ಯವಾಗುವುದು. ಅಲ್ಲಾಹನು ನಮಗೆ ಆ ಭಾಗ್ಯ ದಯಪಾಲಿಸಲಿ – ಆಮೀನ್.

◆

# ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು

* ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ (ಅಹ್ಮದಿಯಾ ಮುಸ್ಲಿಮ್ ಜಮಾಅತಿನ ದ್ವಿತೀಯ ಖಲೀಫರು)

ಇಂದಿನ ಕಾಲದಲ್ಲಿ ಭೌತಿಕವಾದಿಗಳು ಧಾರ್ಮಿಕ ವಿಶ್ವಾಸಗಳ ವಿರುದ್ಧ ಮಾಡುವ ಆಕ್ಷೇಪಗಳಲ್ಲಿ ಅತ್ಯಂತ ಮುಖ್ಯವಾದುದು ದೇವಾಸ್ತಿತ್ವದ ನಿರಾಕರಣೆಯಾಗಿದೆ. ಬಹುದೇವಾರಾಧಕರು ಏಕದೇವನಿಗೆ ಸಹಭಾಗಿಗಳನ್ನು ಕಲ್ಪಿಸುತ್ತಾರಾದರೂ ಅವರು ಸಹ ದೇವನ ಅಸ್ತಿತ್ವವನ್ನು ಅಂಗೀಕರಿಸುವವರಾಗಿದ್ದಾರೆ. ಆದರೆ ನಾಸ್ತಿಕರು ದೇವನ ಅಸ್ತಿತ್ವವನ್ನು ಸಂಪೂರ್ಣವಾಗಿ ನಿರಾಕರಿಸುವವರಾಗಿದ್ದಾರೆ. ಆಧುನಿಕ ಕಾಲದ ವಿಜ್ಞಾನ ಪ್ರತಿಯೊಂದರ ಅಸ್ತಿಭಾರವನ್ನು ಪ್ರತ್ಯಕ್ಷ ಜ್ಞಾನದ ಮೇಲೆ ಇರಿಸಿದೆ. ಆದುದರಿಂದ ನಾಸ್ತಿಕರು ಹೇಳುತ್ತಾರೆ – ದೇವನೊಬ್ಬನಿದ್ದರೆ ತೋರಿಸಿಕೊಡಿರೆಂದು; ಅವನನ್ನು ಕಾಣದೆ ಹೇಗೆ ತಾನೆ ನಾವು ನಂಬಬಲ್ಲೆವು ಎಂದು. ಈ ಕಾಲಘಟ್ಟದ ಪರಿಸರ ಬಹುತೇಕ ಯುವ ಜನರ ಹೃದಯಗಳಲ್ಲಿ ದೇವನೆಂಬ ಪರಿಶುದ್ಧ ಅಸ್ತಿತ್ವದ ಚಿತ್ರವನ್ನು ಅಳಿಸಿ ಬಿಟ್ಟಿದೆ. ಕಾಲೇಜುಗಳ ಅನೇಕ ವಿದ್ಯಾರ್ಥಿಗಳು ಮತ್ತು ನ್ಯಾಯವಾದಿಗಳು ಮೊದಲಾದವರು ದೇವನ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ಅವರ ಸಂಖ್ಯೆ ವರ್ಧಿಸುತ್ತಾ ಇರುತ್ತದೆ. ಸಾವಿರಾರು ಜನರು ತಮ್ಮ ದೇಶ ಮತ್ತು ಜನಾಂಗದ ಭಯದಿಂದ ಬಹಿರಂಗವಾಗಿ ಪ್ರಕಟಿಸುವುದಿಲ್ಲವಾದರೂ ವಾಸ್ತವಿಕವಾಗಿ ಅವರಿಗೆ ದೇವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವಿಲ್ಲದವರಾಗಿದ್ದಾರೆ. ಆದುದರಿಂದ ನಾನು ಈ ವಿಷಯಕ್ಕೆ ಸಂಬಂಧಿಸಿ ಬರೆಯಲು ಉದ್ದೇಶಿಸಿದೆನು – ಅದರ ಮೂಲಕ ಯಾವುದಾದರೂ ಸಾತ್ವಿಕನಾದವನಿಗೆ ಪ್ರಯೋಜನವಾಗಲಿ ಎಂದು.

ನಾಸ್ತಿಕರ ಮೊದಲನೆಯ ಪ್ರಶ್ನೆ ಹೀಗೆ: "ನಮಗೆ ದೇವನನ್ನು ತೋರಿಸಿ ಕೊಡುವುದಾದರೆ ನಾವು ನಂಬುವೆವು." ನಾನು ಈ ಪ್ರಶ್ನೆಯನ್ನು ಆಲಿಸಿದ ಅನೇಕ ಸಂದರ್ಭಗಳಿವೆ. ಆದರೆ ನನಗೆ ಅವರ ಮಾತನ್ನು ಕೇಳಿ ಆಶ್ಚರ್ಯವಾಗುತ್ತದೆ. ಮನುಷ್ಯನು ವಿವಿಧ ಇಂದ್ರಿಯಗಳ ಮೂಲಕ ವಿವಿಧ ವಸ್ತುಗಳನ್ನು ಗುರುತಿಸುತ್ತಾನೆ. ಕೆಲವು ವಸ್ತುಗಳನ್ನು ನೋಡಿ, ಕೆಲವನ್ನು ಪ್ರಶ್ನಿಸಿ, ಕೆಲವನ್ನು ಮೂಸಿ, ಕೆಲವನ್ನು ಆಲಿಸಿ, ಕೆಲವನ್ನು ರುಚಿಸಿ ಅರಿತುಕೊಳ್ಳುತ್ತಾನೆ. ಬಣ್ಣವನ್ನು ನೋಡುವುದರಿಂದ ತಿಳಿಯುವುದೇ ಹೊರತು ಮೂಸುವುದರಿಂದ ಅಥವಾ ಸ್ಪರ್ಶಿಸುವುದರಿಂದ ಅಥವಾ ರುಚಿಸುವುದರಿಂದ ಅಲ್ಲ. ಒಬ್ಬನು, "ನಾನು ಬಣ್ಣವಿದೆ ಎಂದು ಒಪ್ಪಿಕೊಳ್ಳಬೇಕಾದರೆ ನನಗೆ ಅದರ ಧ್ವನಿ ಕೇಳಿಸಬೇಕು" ಎಂದು ಹೇಳಿದರೆ ಆ ವ್ಯಕ್ತಿ ಅವಿವೇಕಿಯಲ್ಲವೇ? ಇದೇ ರೀತಿ ಧ್ವನಿಯು ಆಲಿಸುವ ಮೂಲಕ ತಿಳಿಯುತ್ತದೆ. ಆದರೆ ಒಬ್ಬನು, "ನನಗೆ ಒಬ್ಬನ ಧ್ವನಿಯನ್ನು ತೋರಿಸಿಕೊಟ್ಟರೆ ನಾನು ಅವನು ಮಾತನಾಡುತ್ತಾನೆ ಎಂದು ನಂಬುವೆನು" ಎಂದು ಹೇಳಿದರೆ ಅವನು ಅಜ್ಞಾನಿಯಲ್ಲವೇ? ಇದೇ ರೀತಿ ಸುವಾಸನೆಯನ್ನು ಮೂಸಿ ತಿಳಿದುಕೊಳ್ಳಲಾಗುತ್ತದೆ. ಆದರೆ ಒಬ್ಬನು, "ನೀವು ನನಗೆ ಗುಲಾಬಿ ಹೂವಿನ ಸುವಾಸನೆಯನ್ನು ರುಚಿಸುವಂತೆ ಮಾಡಿದರೆ ನಾನು ನಂಬುವೆನು" ಎಂದು ಹೇಳಿದರೆ ಅವನನ್ನು ಬುದ್ಧಿಶಾಲಿ ಎಂದು ಹೇಳಬಹುದೇ? ಇದೇ ರೀತಿ ಹುಳಿ, ಸಿಹಿ, ಕಹಿ, ಉಪ್ಪು ಮೊದಲಾದ ರುಚಿಸಿ ತಿಳಿಯಬಹುದಾದುದನ್ನು ಮೂಸಿ ನೋಡಿ ತಿಳಿಯಲು ಬಯಸಿದರೆ ಹಾಗೆ ಮಾಡಲು ಎಂದೂ ಸಾಧ್ಯವಾಗದು. ನಾವು ಕಾಣುವ ವಸ್ತುಗಳನ್ನು ಮಾತ್ರ ನಂಬಬೇಕು; ನಮಗೆ ಕಾಣದಿರುವುದನ್ನು ನಂಬಬಾರದು ಎನ್ನುವುದು ಸರಿಯಾದ ನಿಲುವಲ್ಲ. ಹೀಗೆ ಭಾವಿಸಿದರೆ ಗುಲಾಬಿ ಹೂವಿನ ಸುವಾಸನೆ, ಲಿಂಬೆಯ ಹುಳಿ, ಜೇನಿನ ಸಿಹಿ, ಕಹಿ ವಸ್ತುವಿನ ಕಹಿ, ಕಬ್ಬಿಣದ ಕಾಠಿಣ್ಯ, ಧ್ವನಿಯ ಸುಶ್ರಾವ್ಯತೆ, ಇವುಗಳನ್ನೆಲ್ಲ ನಿರಾಕರಿಸಬೇಕಾಗುತ್ತದೆ. ಏಕೆಂದರೆ ಇವುಗಳು ಕಾಣಿಸುವುದಿಲ್ಲ; ಮೂಸುವ ಮೂಲಕ, ರುಚಿಸುವ ಮೂಲಕ, ಸ್ಪರ್ಶಿಸುವ ಮೂಲಕ ಮತ್ತು ಆಲಿಸುವ ಮೂಲಕ ತಿಳಿಯುತ್ತವೆ. ಆದುದರಿಂದ ದೇವನನ್ನು ತೋರಿಸಿಕೊಟ್ಟರೆ ನಾವು ನಂಬುವೆವು ಎನ್ನುವುದು ತಪ್ಪು ಅಭಿಪ್ರಾಯವಾಗಿದೆ. ಇಂತಹ ವ್ಯಕ್ತಿ ಗುಲಾಬಿ ಹೂವಿನ ಸುವಾಸನೆಯನ್ನು ಅಥವಾ ಜೇನಿನ ಸಿಹಿಯನ್ನು ನೋಡಿ ಮನವರಿಕೆ ಮಾಡುತ್ತಾನೋ? ಹೀಗಿರುವಾಗ ಅಲ್ಲಾಹನ ಅಸ್ತಿತ್ವದ ಬಗ್ಗೆ "ತೋರಿಸಿದರೆ ನಂಬುವೆವು" ಎಂಬ ಶರತ್ತು ಮುಂದಿರಿಸುವುದು ಏಕೆ?

ಇದಲ್ಲದೆ ಮನುಷ್ಯನ ದೇಹದೊಳಗೆ ಎಂತಹ ಅಂಗಗಳಿವೆ ಎಂದರೆ ಅವುಗಳನ್ನು ನೋಡಲು ಸಾಧ್ಯವಾಗುವುದಿಲ್ಲವಾದರೂ ಅವುಗಳಿವೆ ಎಂದು ನಂಬಬೇಕಾಗುತ್ತದೆ. ಮನುಷ್ಯನು ತನ್ನ ಹೃದಯ, ಮೆದುಳು, ಕರುಳು, ಶ್ವಾಸಕೋಶ, ಯಕೃತ್ ಮೊದಲಾದುವುಗಳನ್ನು ನೋಡಿ ಇವೆ ಎಂದು ನಂಬುತ್ತಾನೋ, ನೋಡದೆ ನಂಬುತ್ತಾನೋ! ಅವುಗಳನ್ನು ಒಬ್ಬನ ದೇಹದಿಂದ ಅವನಿಗೆ ತೋರಿಸಲು ಹೊರಗೆ ತೆಗೆದರೆ ಅವನು ಕೂಡಲೇ ಸತ್ತು ಹೋಗುವನು. ಅವನಿಗೆ ನೋಡುವ ಸಂದರ್ಭವೇ ಸಿಗದು.

ನಾನು ನೀಡಿದ ಉದಾಹರಣೆಗಳು ವಿವಿಧ ಪಂಚೇಂದ್ರಿಯಗಳ ಮೂಲಕ ಮನವರಿಕೆ ಮಾಡಿಕೊಳ್ಳುವುದರ ಬಗ್ಗೆಯಾಗಿದೆ. ಆದರೆ ಕೆಲವು ವಸ್ತುಗಳು ಹೇಗಿವೆ ಎಂದರೆ ಪಂಚೇಂದ್ರಿಯಗಳ ಮೂಲಕ ಸಹ ಮನವರಿಕೆ ಮಾಡಲು ಸಾಧ್ಯವಾಗುವುದಿಲ್ಲ. ಅವುಗಳನ್ನು ತಿಳಿದುಕೊಳ್ಳಬಹುದಾದ ರೀತಿಯೇ ಬೇರೆಯಾಗಿದೆ. ಉದಾಹರಣೆಗೆ, ಬುದ್ಧಿ, ನೆನಪು, ಮೊದಲಾದುವುಗಳನ್ನು ಯಾರೂ ನಿರಾಕರಿಸುವುದಿಲ್ಲ. ಆದರೆ ಯಾರಾದರೂ ಬುದ್ಧಿಯನ್ನು ನೋಡಿರುವರೋ? ಆಲಿಸಿರುವಿರೋ? ರುಚಿಸಿರುವಿರೋ? ಮೂಸಿರುವಿರೋ? ಸ್ಪರ್ಶಿಸಿರುವಿರೋ? ಹೀಗಿರುವಾಗ ಬುದ್ಧಿ ಒಂದು ವಾಸ್ತವಿಕತೆ ಎಂದೂ ನೆನಪು ಒಂದು ವಾಸ್ತವಿಕತೆ ಎಂದೂ ಹೇಗೆ ತಿಳಿಯುತ್ತಾರೆ? ಇನ್ನು ಶಕ್ತಿಯನ್ನು ನೋಡಿರಿ. ಪ್ರತಿಯೊಬ್ಬನಲ್ಲಿ ಹೆಚ್ಚು ಅಥವಾ ಕಡಿಮೆ ಶಕ್ತಿ ಇರುತ್ತದೆ. ಆದರೆ ಶಕ್ತಿಯನ್ನು ಯಾರಾದರೂ ನೋಡಿರುವನೋ, ಆಲಿಸಿರುವನೋ, ಸ್ಪರ್ಶಿಸಿರುವನೋ, ರುಚಿಸಿರುವನೋ. ಹೀಗಿರುವಾಗ ಶಕ್ತಿ ಎಂಬುದಿದೆ ಎಂದು ಹೇಗೆ ತಿಳಿಯುತ್ತದೆ. ಇವುಗಳನ್ನು ತನ್ನ ಇಂದ್ರಿಯಗಳ ಮೂಲಕ ಅರಿತುಕೊಳ್ಳಲಾಗದೆಂದು ಅತ್ಯಂತ ಅವಿವೇಕಿಯಾದ ಮನುಷ್ಯನು ಸಹ ತಿಳಿಯುತ್ತಾನೆ ಮತ್ತು ಅವುಗಳು ಉಂಟುಮಾಡುವ ಪರಿಣಾಮಗಳಿಂದ ತಿಳಿದುಕೊಳ್ಳುತ್ತಾನೆ. ಉದಾಹರಣೆಗೆ, ಮನುಷ್ಯನು ವಿವಿಧ ಕಷ್ಟಗಳಿಗೆ ಗುರಿಯಾಗಿರುವಾಗ ಸ್ವಲ್ಪ ಹೊತ್ತು ಯೋಚಿಸಿದಾಗ ಅವನಿಗೆ ತನ್ನ ಕಷ್ಟ ಪರಿಹಾರ ಉಪಾಯ ಕಂಡುಕೊಳ್ಳುತ್ತಾನೆ ಮತ್ತು ತನ್ನ ಕಷ್ಟ ದೂರಸರಿಸುತ್ತಾನೆ. ಈ ರೀತಿ

ಕಷ್ಟ ಪರಿಹಾರವಾಗುವುದನ್ನು ನಾವು ಕಾಣುವಾಗ ನಮಗೆ ದೃಢನಂಬಿಕೆ ಉಂಟಾಗುತ್ತದೆ. ಮನುಷ್ಯನಲ್ಲಿ ಯಾವುದೋ ವಸ್ತುವಿದೆ; ಅದು ಅವನಿಗೆ ಇಂತಹ ಸಂದರ್ಭಗಳಲ್ಲಿ ಸಹಾಯ ಮಾಡುತ್ತದೆ. ಇದನ್ನು ನಾವು ಬುದ್ಧಿ ಎಂದು ಹೆಸರಿಸುತ್ತೇವೆ. ಬುದ್ಧಿಯನ್ನು ನಾವು ಪಂಚೇಂದ್ರಿಯಗಳ ಪೈಕಿ ಯಾವುದರ ಮೂಲಕವೂ ಗುರುತಿಸುವುದಿಲ್ಲ. ಆದರೆ ನಾವು ಅದರ ಪ್ರಭಾವಗಳನ್ನು ಕಂಡು ಅದನ್ನು ತಿಳಿದುಕೊಳ್ಳುತ್ತೇವೆ. ಇದೇ ರೀತಿ ಮನುಷ್ಯನು ದೊಡ್ಡ ದೊಡ್ಡ ಭಾರವಾದ ವಸ್ತುಗಳನ್ನು ಎತ್ತುವಾಗ ನಾವು ಮನುಷ್ಯನಲ್ಲಿ ಶಕ್ತಿ ಎಂಬುದಿದೆ ಎಂದು ಗುರುತಿಸುತ್ತೇವೆ.

ಇದೇ ರೀತಿ ಸೂಕ್ಷ್ಮಾತಿಸೂಕ್ಷ್ಮ ವಸ್ತುಗಳು ಮನುಷ್ಯರ ದೃಷ್ಟಿಗೆ ಅದೃಶ್ಯವಾಗಿರುತ್ತವೆ. ಅವುಗಳ ಅಸ್ತಿತ್ವವನ್ನು ಅವುಗಳು ಉಂಟುಮಾಡುವ ಪರಿಣಾಮಗಳಿಂದ ತಿಳಿಯಬಹುದೇ ಹೊರತು ಅವುಗಳನ್ನು ನೋಡಿ, ಮೂಸಿ, ರುಚಿಸಿ, ಸ್ಪರ್ಶಿಸಿ ತಿಳಿಯಲು ಸಾಧ್ಯವಿಲ್ಲ.

ಆದುದರಿಂದ ಅಲ್ಲಾಹನೆಂಬ ಸೂಕ್ಷ್ಮಾತಿಸೂಕ್ಷ್ಮ ಅಸ್ತಿತ್ವದ ಬಗ್ಗೆ ನೋಡದೆ ನಂಬಲಾರೆವು ಎಂಬ ಶರತ್ತು ವಿಧಿಸುವುದು ಹೇಗೆ ತಾನೆ ಸರಿಯಾಗಲು ಸಾಧ್ಯ? ವಿದ್ಯುಚ್ಛಕ್ತಿಯನ್ನು ಯಾರಾದರೂ ಕಂಡಿರುವರೋ? ಅದರ ಮೂಲಕ ತಂತಿ ಸಂದೇಶ ಲಭಿಸುವುದು, ಯಂತ್ರ ಚಲಿಸುವುದು, ಬೆಳಕು ನೀಡುವುದು ಮೊದಲಾದುವುಗಳನ್ನು ಯಾರಾದರೂ ನಿರಾಕರಿಸುತ್ತಾರೋ? ಈಥರ್ ಕಂಡುಹಿಡಿದುದು ವಿಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಯನ್ನು ಉಂಟುಮಾಡಿತು. ಆದರೆ ಇಂದಿನ ತನಕ ವಿಜ್ಞಾನಿಗಳು ಅದನ್ನು ಕಾಣಲು, ಆಲಿಸಲು, ಮೂಸಲು, ಸ್ಪರ್ಶಿಸಲು ಅಥವಾ ರುಚಿಸಲು ಸಾಧ್ಯವಾಗಲಿಲ್ಲ. ಆದರೆ ಅದರ ಅಸ್ತಿತ್ವವನ್ನು ಒಪ್ಪದಿದ್ದರೆ ಸೂರ್ಯನ ಬೆಳಕು ಭೂಮಿಗೆ ತಲಪುವುದು ಹೇಗೆಂದು ತಿಳಿಯಲಾಗದು. ಹೀಗಿರುವಾಗ ದೇವನನ್ನು ತೋರಿಸಿದರೆ ಮಾತ್ರ ನಂಬುವೆವು ಎಂದು ಹೇಳುವುದು ತಪ್ಪು ಆಗಿದೆ.

ಅಲ್ಲಾಹನು ಕಾಣಿಸುತ್ತಾನೆ. ಆದರೆ ಯಾರಿಗೆ ಅವನನ್ನು ಕಾಣಲು ಅರ್ಹತೆಯಿರುವ ಕಣ್ಣುಗಳು ಇವೆಯೋ ಅವನಿಗೆ ಕಾಣಿಸುತ್ತಾನೆ. ಅಲ್ಲಾಹನನ್ನು ಕಾಣಲು ಯಾರಾದರೂ ಆಶಿಸಿದರೆ ಅಲ್ಲಾಹನು ತನ್ನ ಶಕ್ತಿಗಳ ಪ್ರದರ್ಶನ ಮೂಲಕ ಲೋಕದಲ್ಲಿದ್ದಾನೆ. ಅವನು ಅದೃಶ್ಯನಾಗಿದ್ದರೂ ಎಲ್ಲವೂಗಳಿಗಿಂತ ಹೆಚ್ಚು ಬಾಹ್ಯವಾಗಿ ಪ್ರಕಟವಾಗುವವನಾಗಿದ್ದಾನೆ. ಪವಿತ್ರ ಖುರ್‌ಆನ್ ಈ ವಿಷಯವನ್ನು ಸಂಕ್ಷಿಪ್ತವಾಗಿಯೂ ಅಪ್ರತಿಮವಾಗಿಯೂ ಹೀಗೆ ಸೂಚಿಸಿದೆ: **ಲಾ ತುದ್‌ರಿಖುಹುಲ್ ಅಬ್‌ಸಾರು ವ ಹುವ ಯುದ್‌ರಿಕುಲ್ ಅಬ್‌ಸಾರ ವ ಹುವಲ್ಲತೀಫುಲ್ ಖಬೀರ್**. – **"**ದೃಷ್ಟಿಗಳು ಅವನನ್ನು ತಲಪಲಾರವು. ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. ಅವನು ಅತಿಸೂಕ್ಷ್ಮನೂ ಎಲ್ಲವನ್ನೂ ಬಲ್ಲವನೂ ಆಗಿರುತ್ತಾನೆ.**"** (6:104).

ಈ ವಚನದಲ್ಲಿ ಅಲ್ಲಾಹನು ಮನುಷ್ಯನ ಗಮನವನ್ನು ಈ ವಿಷಯದ ಕಡೆಗೆ ಸೆಳೆದಿದ್ದಾನೆ. ಅಲ್ಲಾಹನ ಅಸ್ತಿತ್ವ ಹೇಗಿದೆ ಎಂದರೆ ನಿನ್ನ ದೃಷ್ಟಿ ಅವನನ್ನು ಕಾಣುವ ಸಾಮರ್ಥ್ಯವನ್ನು ಹೊಂದಿಲ್ಲ. ಏಕೆಂದರೆ ಅವನು ಅತಿ ಸೂಕ್ಷ್ಮವಾಗಿದ್ದಾನೆ. ಸೂಕ್ಷ್ಮ ವಸ್ತುಗಳು ಕಣ್ಣಿಗೆ ಕಾಣಿಸಲಾರವು. ಉದಾಹರಣೆಗೆ, ಶಕ್ತಿ, ಬುದ್ಧಿ, ಆತ್ಮ, ವಿದ್ಯುಚ್ಛಕ್ತಿ, ಈಥರ್ ಮೊದಲಾದವು ಯಾರಿಗೂ ಎಂದೂ ಕಾಣಿಸಲಾರವು. ಹೀಗಿರುವಾಗ ಅಲ್ಲಾಹನ ಅತಿಸೂಕ್ಷ್ಮ ಅಸ್ತಿತ್ವದ ಕಡೆಗೆ ಮನುಷ್ಯನ ದೃಷ್ಟಿ ಹೇಗೆ ತಾನೆ ತಲಪಲು ಸಾಧ್ಯ. ಹಾಗಾದರೆ ಅಲ್ಲಾಹನನ್ನು ಜನರು ಹೇಗೆ ನೋಡಬಹುದು. ಅವನ ಬಗ್ಗೆ ಜ್ಞಾನ ಗಳಿಸುವ ವಿಧಾನಗಳು ಯಾವುವು. ಇದಕ್ಕೆ ಉತ್ತರ ಹೀಗೆ ನೀಡಲಾಗಿದೆ: **ವ ಹುವ ಯುದ್‌ರಿಕುಲ್ ಅಬ್‌ಸಾರ** ಎಂದರೆ ಅವನು (ಅಲ್ಲಾಹನು) ಸ್ವತಃ ದೃಷ್ಟಿಗಳನ್ನು ತಲಪುತ್ತಾನೆ. ಆದರೆ ಮನುಷ್ಯನ ದೃಷ್ಟಿ ಬಲಹೀನವಾದ ಕಾರಣ ಅವನು ಅಲ್ಲಾಹನ ತಳವನ್ನು ತಲಪಲಾರನು. ಅಲ್ಲಾಹನು ತನ್ನ ಶಕ್ತಿ ಪ್ರದರ್ಶನಗಳ ಮೂಲಕ, ತನ್ನ ಪರಿಪೂರ್ಣ ವಿಶೇಷ ಗುಣಗಳ ಪ್ರಕಟಣೆ ಮೂಲಕ ತನ್ನ ಅಸ್ತಿತ್ವವನ್ನು ಮನುಷ್ಯನಿಗೆ ತೋರಿಸುತ್ತಾನೆ. ಮನುಷ್ಯನ ದೃಷ್ಟಿಗೆ ಅಲ್ಲಾಹನನ್ನು ನೋಡಲು ಸಾಧ್ಯವಾಗದಿದ್ದರೂ ಅವನು ತನ್ನ ಅಪಾರ ಅಸ್ತಿತ್ವವನ್ನು ಪ್ರಕಟಗೊಳಿಸುತ್ತಾನೆ. ಕೆಲವು ಸಾರಿ ಕ್ರೋಧ ಪ್ರಕಟಣೆ ಮೂಲಕ, ಕೆಲವು ಸಾರಿ ಪ್ರವಾದಿಗಳ ಮೂಲಕ, ಕೆಲವು ಸಾರಿ ಅನುಗ್ರಹ ನೀಡುವ ಮೂಲಕ ಮತ್ತು ಕೆಲವು ಸಾರಿ ಪ್ರಾರ್ಥನೆ ಸ್ವೀಕಾರ ಮೂಲಕ.

ಅಲ್ಲಾಹನನ್ನು ನಂಬಬೇಕಾದರೆ ನಾವು ಅವನನ್ನು ತೋರಿಸಿಕೊಡಬೇಕು ಎಂದು ಹೇಳುವುದಾದರೆ ಮತ್ತು ನೋಡದೆ ಯಾವುದೇ ವಸ್ತುವಿನ ಅಸ್ತಿತ್ವವನ್ನು ನಂಬುವುದು ಸಾಧ್ಯವೇ ಇಲ್ಲ ಎಂದು ಹೇಳುವುದಾದರೆ ಲೋಕದಲ್ಲಿರುವ ಅಂದಾಜು 4/5 ಭಾಗದಷ್ಟು ವಸ್ತುಗಳ ಅಸ್ತಿತ್ವವನ್ನು ನಿರಾಕರಿಸಬೇಕಾಗುವುದು – ಕೆಲವು ಫಿಲಾಸಫರುಗಳ ಅಭಿಪ್ರಾಯ ಪ್ರಕಾರ ಎಲ್ಲ ವಸ್ತುಗಳ ಅಸ್ತಿತ್ವವನ್ನು. ಏಕೆಂದರೆ ಅವರ ಅಭಿಪ್ರಾಯ ಪ್ರಕಾರ ಲೋಕದಲ್ಲಿ ಯಾವುದೇ ವಸ್ತು ಕಾಣಿಸುವುದಿಲ್ಲ. ಕೇವಲ ವಸ್ತುಗಳ ಗುಣವಿಶೇಷಗಳು ಮಾತ್ರ ಕಾಣಿಸುತ್ತವೆ.

ಅಲ್ಲಾಹನ ಅಸ್ತಿತ್ವವನ್ನು ಅರಿತುಕೊಳ್ಳಲು ಸಾಧ್ಯವಾಗುವಂತಹ ಮತ್ತು ಮನುಷ್ಯನು, "ನನಗೊಬ್ಬ ಸೃಷ್ಟಿಕರ್ತನಿದ್ದಾನೆ; ನಾನೇ ಸೃಷ್ಟಿಕರ್ತನಲ್ಲ" ಎಂಬ ದೃಢವಿಶ್ವಾಸ ಉಂಟಾಗುವಂತಹ ಸಾಕ್ಷ್ಯಾಧಾರಗಳ ಕಡೆಗೆ ಗಮನ ಹರಿಸುತ್ತೇನೆ.

## ಪ್ರಥಮ ಸಾಕ್ಷ್ಯಾಧಾರ

ಆಧ್ಯಾತ್ಮಿಕ ಉನ್ನತಿ ಗಳಿಸಲು ಇರುವ ಎಲ್ಲ ಮಾರ್ಗಗಳನ್ನು ಪವಿತ್ರ ಖುರ್‌ಆನ್ ವಿವರಿಸಿದೆ ಎಂದು ನಾನು ನಂಬುವುದರಿಂದ ದೇವನ ಅಸ್ತಿತ್ವದ ಬಗ್ಗೆ ಇರುವ ಎಲ್ಲ ಸಾಕ್ಷ್ಯಾಧಾರಗಳನ್ನು ಪವಿತ್ರ ಖುರ್‌ಆನ್‌ನಿಂದಲೇ ಪ್ರಸ್ತಾಪಿಸುವೆನು. ಮನುಷ್ಯನು ಜನಿಸಿದ ನಂತರ ಅವನಿಗೆ ದೊರಕುವ ಪ್ರಥಮ ಜ್ಞಾನ ಕಿವಿಯ ಮೂಲಕವಾಗಿರುತ್ತದೆ. ಆದುದರಿಂದ ನಾನು ಮೊತ್ತಮೊದಲು ಆಲಿಸುವುದಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರ ವಿವರಿಸುವೆನು.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**ಖದ್ ಅಫ್‌ಲಹ ಮನ್ ತಝಕ್ಕಾ ವ ಧಕರಸ್ಮರಬ್ಬಿಹೀ ಫಸಲ್ಲಾ ಬಲ್ ತೂಸಿರೂನಲ್ ಹಯಾತದ್ದುನ್‌ಯಾ ವಲ್ ಆಖಿರತು ಖೈರುನ್ ವ ಅಬ್‌ಖಾ ಇನ್ನ ಹಾಧಾ ಲಫೀಸ್ಸುಹ್‌ಫಿಲ್ ಊಲಾ ಸುಹುಫಿ ಇಬ್ರಾಹೀಮ ವ ಮೂಸಾ.**

**"**ಯಾರು ಪರಿಶುದ್ಧನಾಗುತ್ತಾನೋ ಅವನು ಜಯ ಹೊಂದುವನು – (ಅವನು) ತನ್ನ ಪ್ರಭುವಿನ ನಾಮಸ್ಮರಣೆ ಮಾಡುವವನು ಮತ್ತು ಪ್ರಾರ್ಥನೆ ಸಲ್ಲಿಸುವವನು. ಆದರೆ ನೀವು ಐಹಿಕ ಜೀವನಕ್ಕೆ ಆದ್ಯತೆ ನೀಡುತ್ತೀರಿ. ವಾಸ್ತವದಲ್ಲಿ ಪರಲೋಕ ಜೀವನವು ಉತ್ತಮವಾದುದು ಮತ್ತು ಶಾಶ್ವತವಾದುದು. ನಿಜವಾಗಿಯೂ ಇವೆಲ್ಲ ಪೂರ್ವಿಕ

ಗ್ರಂಥಗಳಲ್ಲಿವೆ – ಇಬ್‌ರಾಹೀಮ್ ಮತ್ತು ಮೂಸಾರ ಗ್ರಂಥಗಳಲ್ಲಿ. (87: 15–20).

ಎಂದರೆ ಯಾರು ಪರಿಶುದ್ಧನಾಗಿ ತನ್ನ ನಾಲಗೆ ಮೂಲಕ ತನ್ನ ಪ್ರಭುವಿನ ಅಸ್ತಿತ್ವದ ಬಗ್ಗೆ ಅಂಗೀಕರಿಸಿ ಆರಾಧನೆ ಮೂಲಕ ತನ್ನ ವಿಶ್ವಾಸವನ್ನು ಪ್ರಕಟಿಸುತ್ತಾನೋ ಅವನು ಜಯಶಾಲಿಯಾದವನು. ಆದರೆ ನೀವು ಲೌಕಿಕ ಜೀವನಕ್ಕೆ ಆದ್ಯತೆ ನೀಡುತ್ತಿರುವಿರಿ. ಆದರೆ ಅಂತಿಮವಾದ ಉತ್ತಮ ಗತಿಯೇ ನಿಜವಾಗಿಯೂ ಉತ್ತಮವಾದುದಾಗಿದೆ. ಅದು ದೀರ್ಘಕಾಲ ಬಾಳುವುದಾಗಿದೆ. ಈ ಸತ್ಯವನ್ನು ಹೇಳುವುದು ಪವಿತ್ರ ಖುರ್‌ಆನ್ ಮಾತ್ರವಲ್ಲ ಹಿಂದಿನ ಎಲ್ಲ ಧಾರ್ಮಿಕ ಗ್ರಂಥಗಳಲ್ಲಿ ಇದನ್ನು ಪ್ರತಿಪಾದಿಸಲಾಗಿದೆ. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್, ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಲೋಕದ ಮುಂದೆ ಇರಿಸಿದ ಉಪದೇಶಗಳಲ್ಲಿ ಈ ವಿಷಯ ಇದೆ.

ಪವಿತ್ರ ಖುರ್‌ಆನ್‌ನಲ್ಲಿರುವ ಮೇಲೆ ಉಲ್ಲೇಖಿಸಿದ ವಚನದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನಿನ ವಿರೋಧಿಗಳಿಗೆ ಹೀಗೆ ಸಾಕ್ಷ್ಯ ನೀಡಿದ್ದಾನೆ: ದೇವನ ಅಸ್ತಿತ್ವವನ್ನು ನಂಬಿ ತಮ್ಮನ್ನು ಪರಿಶುದ್ಧರನ್ನಾಗಿ ಮಾಡಿ ದೇವನ ಸತ್ಯಸಂಧರಾದ ಆಜ್ಞಾಪಾಲಕರು ಯಾವಾಗಲೂ ಜಯಶಾಲಿಗಳಾಗುತ್ತಾರೆ. ಈ ಉಪದೇಶದ ಸತ್ಯತೆಯ ಸಾಕ್ಷ್ಯಾಧಾರವೇನೆಂದರೆ, ಹಿಂದಿನ ಕಾಲದ ಧರ್ಮಗಳಲ್ಲೂ ಈ ವಿಷಯ ಸಮಾನವಾಗಿ ಪ್ರಸ್ತಾಪಿಸಲಾಗಿದೆ. ಆ ಕಾಲದ ದೊಡ್ಡ ಧರ್ಮಗಳಾದ ಕ್ರೈಸ್ತ ಧರ್ಮ, ಯಹೂದಿ ಧರ್ಮದವರಿಗೆ ಮತ್ತು ಮಕ್ಕದ ಬಹುದೇವಾರಾಧಕರಾದ ಜನರೊಂದಿಗೆ ಹೀಗೆ ಹೇಳಲಾಗಿದೆ: ನೀವು ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರನ್ನೂ ಹಝ್ರತ್ ಮೂಸಾ ಅಲೈಹಿಸ್ಸಲಾಮರನ್ನೂ ನಂಬುತ್ತಿರುವಿರಿ. ಅವರು ಸಹ ಇದೇ ರೀತಿಯ ಉಪದೇಶ ನೀಡಿದ್ದರು.

ಪವಿತ್ರ ಖುರ್‌ಆನ್ ದೇವನ ಅಸ್ತಿತ್ವದ ಬಗ್ಗೆ ನೀಡಿದ ದೊಡ್ಡ ಸಾಕ್ಷ್ಯಾಧಾರವೇನೆಂದರೆ, ಎಲ್ಲ ಧರ್ಮಗಳು ಒಮ್ಮತ ಹೊಂದಿವೆ. ಎಲ್ಲ ಜನಾಂಗಗಳು ಈ ವಿಶ್ವಾಸದಲ್ಲಿ ಸಹಭಾಗಿ ಆಗಿವೆ. ಈ ಸಾಕ್ಷ್ಯಾಧಾರದ ಬಗ್ಗೆ ಚಿಂತಿಸುವುದಾದರೆ ನಮಗೆ ಚೆನ್ನಾಗಿ ಸ್ಪಷ್ಟವಾಗುವುದು ಹೀಗೆ: ಈ ವಿಶ್ವವನ್ನು ಸೃಷ್ಟಿಸಿದ ಒಬ್ಬ ದೇವನಿದ್ದಾನೆಂದು ಎಲ್ಲ ಧರ್ಮಗಳು ಒಮ್ಮತ ಹೊಂದಿವೆ. ವಿವಿಧ ದೇಶಗಳ ವ್ಯತ್ಯಾಸದ ಕಾರಣ ಮತ್ತು ಪರಿಸರದ ವ್ಯತ್ಯಾಸದ ಕಾರಣ ನಂಬಿಕೆಗಳಲ್ಲಿ ವ್ಯತ್ಯಾಸ ಉಂಟಾಗಿರಬಹುದು, ಹೀಗಿದ್ದರೂ ಎಲ್ಲ ಚಾರಿತ್ರಿಕ ಧರ್ಮಗಳು ಎಲ್ಲವೂ ಅಲ್ಲಾಹನ ಅಸ್ತಿತ್ವವನ್ನು ಒಮ್ಮತದಿಂದ ಒಪ್ಪಿಕೊಂಡಿವೆ. ಅವನ ಗುಣವಿಶೇಷಗಳ ಬಗ್ಗೆ ಆ ಧರ್ಮಗಳಲ್ಲಿ ವ್ಯತ್ಯಾಸವಿರಬಹುದು. ಇಂದಿನ ಕಾಲದ ಧರ್ಮಗಳಾದ ಇಸ್ಲಾಮ್, ಕ್ರೈಸ್ತ ಧರ್ಮ, ಯಹೂದಿ ಧರ್ಮ, ಬೌದ್ಧ ಧರ್ಮ, ಸಿಖ್ ಧರ್ಮ, ಹಿಂದೂ ಧರ್ಮ ಮತ್ತು ಝೊರಾಸ್ಟ್ರರ ಧರ್ಮ, ಒಬ್ಬ ದೇವನ ಅಸ್ತಿತ್ವವನ್ನು ಅಂಗೀಕರಿಸುತ್ತವೆ ಮತ್ತು ಎಲೋಹಿ, ಪರಮೇಶ್ವರ, ಪರಮಾತ್ಮ, ಸತ್‌ಗುರು, ಯಝ್‌ದಾನ್ ಎಂಬ ಹೆಸರುಗಳಿಂದ ಕರೆಯುತ್ತವೆ. ಲೋಕದಲ್ಲಿ ಅಳಿದು ಹೋದ ಧರ್ಮಗಳ ಬಗ್ಗೆ ದೊರೆತ ಅವಶೇಷಗಳಿಂದ ತಿಳಿದು ಬರುವುದೇನೆಂದರೆ, ಅವುಗಳೆಲ್ಲವೂ ಏಕದೇವನನ್ನು ನಂಬುತ್ತಿದ್ದುವು. ಅಮೇರಿಕ, ಆಫ್ರಿಕ, ರೋಮ್, ಇಂಗ್ಲೆಂಡ್, ಜಾವಾ, ಸುಮಾತ್ರಾ, ಜಪಾನ್, ಚೈನ, ಸೈಬೀರಿಯಾ, ಮಂಚೂರಿಯಾ ಮೊದಲಾದ ದೇಶಗಳ ಪುರಾತನ ಧರ್ಮಗಳಲ್ಲಿ ಈ ವಿಶ್ವಾಸ ಜಾರಿಯಲ್ಲಿತ್ತು. ಈ ವಿಶ್ವಾಸದ ಐಕ್ಯತೆ ಹೇಗೆ ಸಂಭವಿಸಿತು. ಅಮೇರಿಕದವರಿಗೆ ಹಿಂದೂಸ್ಥಾನದ ಜನರ ವಿಶ್ವಾಸವನ್ನೂ, ಚೀನದವರಿಗೆ ಆಫ್ರಿಕದ ಜನರ ವಿಶ್ವಾಸವನ್ನೂ ತಲಪಿಸಿದವರು ಯಾರು? ಈಗ ಇರುವ ಸಂಪರ್ಕ ಮಾಧ್ಯಮಗಳು ಆಗ ಇರಲಿಲ್ಲ. ಆ ಕಾಲದಲ್ಲಿ ಹಡಗುಗಳ ಸಂಚಾರ ಇಂದಿನ ಹಾಗಿರಲಿಲ್ಲ. ಕುದುರೆ, ಹೇಸರಗತ್ತೆಗಳ ಮೂಲಕ ಪ್ರಯಾಣ ಸಹ ಬಹಳ ಕಡಿಮೆ ಇತ್ತು. ಇಂದು ದಿನಗಳಲ್ಲಿ ಮಾಡುವ ಸಂಚಾರಕ್ಕೆ ಆಗ ತಿಂಗಳುಗಳು ಬೇಕಾಗುತ್ತಿದ್ದುವು. ಆ ಕಾಲದಲ್ಲಿ ಅನೇಕ ದೇಶಗಳು ಕಂಡುಹಿಡಿಯಲ್ಪಟ್ಟಿರಲಿಲ್ಲ. ವಿವಿಧ ಆಚಾರ ವಿಚಾರಗಳನ್ನು ಹೊಂದಿದ, ಪರಸ್ಪರ ಪರಿಚಯವಿಲ್ಲದ ದೇಶಗಳು ಅವುಗಳಾಗಿದ್ದುವು. ಹೀಗಿರುವಾಗ ಎಲ್ಲರೂ ಒಂದು ನಂಬಿಕೆಯ ಬಗ್ಗೆ ಐಕ್ಯಮತ್ಯ ಹೊಂದಿದುದು ಹೇಗೆ? ಒಂದು ಯೋಚನೆ ಬಗ್ಗೆ ಇಬ್ಬರು ಐಕ್ಯಮತ್ಯ ಹೊಂದುವುದು ಕಷ್ಟಕರವಾಗಿರುತ್ತದೆ. ಹೀಗಿರುವಾಗ ಇಷ್ಟೆಲ್ಲ ಜನಾಂಗಗಳು ಮತ್ತು ದೇಶಗಳು ಪರಸ್ಪರ ಸಮಾಲೋಚನೆಯ ಮಾರ್ಗವೇ ಇಲ್ಲದಿರುವಾಗ ಏಕಾಭಿಪ್ರಾಯ ಹೊಂದಿರುವುದು ಈ ವಿಶ್ವಾಸ ವಾಸ್ತವಿಕವಾದುದು ಎನ್ನುವುದಕ್ಕೆ ಸಾಕ್ಷ್ಯವಾಗಿದೆ. ಯಾವುದೋ ಅಜ್ಞಾತ – ಆದರೆ ಇಸ್ಲಾಮ್ ಬಹಿರಂಗಗೊಳಿಸಿದ – ಮಾರ್ಗದ ಕಾರಣ ಪ್ರತಿಯೊಂದು ಜನಾಂಗ ಮತ್ತು ಪ್ರತಿಯೊಂದು ದೇಶ ಅದನ್ನು ಅಂಗೀಕರಿಸಿದೆ. ಯಾವ ವಿಷಯದ ಬಗ್ಗೆ ವಿವಿಧ ಜನಾಂಗಗಳ ಚರಿತ್ರೆಗಾರರು ಏಕಾಭಿಪ್ರಾಯ ಹೊಂದಿರುವರೋ ಅದರ ಸತ್ಯತೆ ಬಗ್ಗೆ ಸಂಶಯವಿಲ್ಲವೆಂದು ಚರಿತ್ರೆಗಾರರು ಒಮ್ಮತಾಭಿಪ್ರಾಯ ಸೂಚಿಸಿದ್ದಾರೆ. ಈ ವಿಷಯದ ಬಗ್ಗೆ ಸಾವಿರಾರು, ಲಕ್ಷಾಂತರ ಜನಾಂಗಗಳು ಏಕಾಭಿಪ್ರಾಯ ಹೊಂದಿರುವಾಗ ಯಾವುದಾದರೂ ಪ್ರಭೆಯನ್ನು ನೋಡಿ ಲೋಕ ಈ ನಂಬಿಕೆ ಹೊಂದಿತೆಂದು ದೃಢವಾಗಿ ನಂಬಬಹುದಾಗಿದೆ.

### ಎರಡನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್ ದೇವಾಸ್ತಿತ್ವದ ಬಗ್ಗೆ ಹೀಗೆ ಹೇಳುತ್ತದೆ:

**ತಿಲ್‌ಕ ಹುಜ್ಜತುನಾ ಆತಯ್‌ನಾಹಾ ಇಬ್‌ರಾಹೀಮ ಅಲಾ ಖೌಮಿಹೀ ನರ್‌ಫಉ ದರಜಾತಿನ್ ಮ್ಮನ್ ನಶಾಉ ಇನ್ನ ರಬ್ಬಕ ಹಕೀಮುನ್ ಅಲೀಮುನ್ ವ ವಹಬ್‌ನಾ ಲಹೂ ಇಸ್‌ಹಾಖ ವ ಯಅ್‌ಖೂಬ ಕುಲ್ಲನ್ ಹದಯ್‌ನಾ ವ ನೂಹನ್ ಹದಯ್‌ನಾ ಮಿನ್ ಖಬ್‌ಲು ವ ಮಿನ್ ಧುರ್ರಿಯತಿಹೀ ದಾಊದ ವ ಸುಲೈಮಾನ ವ ಅಯ್ಯೂಬ ವ ಯೂಸುಫ ವ ಮೂಸಾ ವ ಹಾರೂನ ವ ಕದ್ಧಾಲಿಕ ನಜ್‌ಝಿಲ್ ಮುಹ್‌ಸಿನೀನ ವ ಝಕರಿಯ್ಯಾ ವ ಯಹ್‌ಯಾ ವ ಈಸಾ ವ ಇಲ್ಯಾಸ ಕುಲ್ಲುನ್ ಮಿನಸ್ಸಾಲಿಹೀನ ವ ಇಸ್ಮಾಈಲ ವಲ್ ಯಸಅ ವ ಯೂನುಸ ವ ಲೂತನ್ ವ ಕುಲ್ಲನ್ ಫಝ್ಝಲ್‌ನಾ ಅಲಲ್ ಆಲಮೀನ್.**

“ಇದು, ಇಬ್‌ರಾಹೀಮರಿಗೆ ಅವರ ಜನತೆಗೆ ವಿರುದ್ಧವಾಗಿ ನಾವು ನೀಡಿದ ಪುರಾವೆಯಾಗಿದೆ. ನಾವು ಇಷ್ಟಪಡುವವರ ಪದವಿಗಳನ್ನು ಉನ್ನತಿಗೇರಿಸುತ್ತೇವೆ. ಖಂಡಿತವಾಗಿಯೂ ನಿನ್ನ ಪ್ರಭು ವಿವೇಕಶಾಲಿಯೂ ಸರ್ವಜ್ಞನೂ ಆಗಿದ್ದಾನೆ. ನಾವು ಅವರಿಗೆ (ಇಬ್‌ರಾಹೀಮರಿಗೆ) ಇಸ್‌ಹಾಖ್ ಮತ್ತು ಯಅ್‌ಖೂಬರನ್ನು ದಯಪಾಲಿಸಿದೆವು; ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡಿದೆವು. ಇದಕ್ಕೆ ಮುಂಚೆ ನೂಹರಿಗೆ ಸಹ ನಾವು ಮಾರ್ಗದರ್ಶನ ಇತ್ತೆವು.

ಅವರ (ಇಬ್‌ರಾಹೀಮರ) ಸಂತತಿಗಳ ಪೈಕಿ ದಾಊದ್, ಸುಲೈಮಾನ್, ಅಯ್ಯೂಬ್, ಯೂಸುಫ್, ಮೂಸಾ, ಹಾರೂನ್ ಎಂಬವರಿಗೂ (ನಾವು ಸತ್ಪಥ ತೋರಿಸಿಕೊಟ್ಟೆವು). ಸಜ್ಜನರಿಗೆ ನಾವು ಹೀಗೆ ಪ್ರತಿಫಲ ನೀಡುತ್ತೇವೆ. ಝಕರಿಯ್ಯಾ, ಯಹ್‌ಯಾ, ಈಸಾ, ಇಲ್ಯಾಸ್ ಎಂಬವರಿಗೂ (ನಾವು ನೇರಮಾರ್ಗ ತೋರಿಸಿ ಕೊಟ್ಟಿದ್ದೇವೆ). ಅವರೆಲ್ಲರೂ ಧರ್ಮನಿಷ್ಠರಲ್ಲಿ ಸೇರಿದವರಾಗಿದ್ದರು. ಇಸ್ಮಾಈಲ್, ಅಲ್‌ಯಸಅ್, ಯೂನುಸ್, ಲೂತ್ ಎಂಬವರಿಗೂ (ನಾವು ಮಾರ್ಗದರ್ಶನ ನೀಡಿದ್ದೇವೆ). ಪ್ರತಿಯೊಬ್ಬರಿಗೂ ನಾವು ಜನರ ಮೇಲೆ ಶ್ರೇಷ್ಠತೆಯನ್ನು ದಯಪಾಲಿಸಿದ್ದೆವು." (6:84–87).

**ಉಲಾಯಿಕಲ್ಲಧೀನ ಹದಲ್ಲಾಹು ಫಬಿಹುದಾಹುಮುಖ್‌ತದಿಹ್**. "ಅವರಿಗೆಯೇ ಅಲ್ಲಾಹನು ಸರಿಯಾದ ಮಾರ್ಗದರ್ಶನ ನೀಡಿರುವುದು. ಆದುದರಿಂದ ಅವರ ಮಾರ್ಗದರ್ಶನವನ್ನು ನೀನು ಅನುಸರಿಸು." (6:91)

ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಅಲ್ಲಾಹನು ಹೀಗೆ ಸೂಚಿಸುತ್ತಾನೆ: ಇಷ್ಟೆಲ್ಲ ಸಾತ್ವಿಕರಾದ ಪರಿಶುದ್ಧ ಜನರು ನೀಡುತ್ತಿರುವ ಸಾಕ್ಷ್ಯಗಳನ್ನು ಅಂಗೀಕರಿಸಬೇಕೋ ಅಥವಾ ಇಂತಹ ಸಾತ್ವಿಕರ ನಡತೆಗಳೊಂದಿಗೆ ಸರಿಹೋಲದ ಅಜ್ಞಾನಿಗಳಾದ ಜನರು ಹೇಳುವುದನ್ನು ನಂಬಬೇಕೋ? ಯಾರು ತಮ್ಮ ನಡೆವಳಿಕೆಗಳಿಂದ ತಮ್ಮ ಸಾತ್ವಿಕತೆ ಮತ್ತು ಪರಿಶುದ್ಧತೆಯನ್ನು ಹಾಗು ಪಾಪಕೃತ್ಯಗಳಿಂದಲೂ ಸುಳ್ಳುಗಳಿಂದಲೂ ದೂರಸರಿದುದನ್ನು ಸಾಬೀತುಗೊಳಿಸಿರುವರೋ ಅಂತಹ ಜನರ ಮಾತುಗಳನ್ನು ನಂಬಬೇಕಾದುದು ಸರಿಯಾದುದಾಗಿದೆ. ಆದುದರಿಂದ ಪ್ರತಿಯೊಬ್ಬನಿಗೆ ಕಡ್ಡಾಯ ಕರ್ತವ್ಯವಾಗಿದೆ – ಈ ಜನರನ್ನು ಅನುಸರಿಸಬೇಕು ಮತ್ತು ಅವರಿಗೆ ಎದುರಾಗಿರುವವರ ಮಾತುಗಳನ್ನು ನಿರಾಕರಿಸಬೇಕು. ನಾವು ನೋಡುತ್ತಿದ್ದೇವೆ, ಒಳಿತನ್ನೂ ಸದ್ಗುಣಗಳನ್ನೂ ಹರಡುವ ಜನರು ತಮ್ಮ ಕೆಲಸಗಳಿಂದ ತಮ್ಮ ಸತ್ಯತೆಯನ್ನು ಸಾಬೀತುಗೊಳಿಸಿರುವರು. ಅವರೆಲ್ಲರೂ ಒಮ್ಮತದಿಂದ ಹೀಗೆ ಸಾಕ್ಷ್ಯ ಹೇಳುತ್ತಾರೆ: ಮಹಾನ್ ಅಸ್ತಿತ್ವವಾಗಿರುವುದು ಒಂದಿದೆ. ಆ ಮಹಾನ್ ಅಸ್ತಿತ್ವವನ್ನು ಅಲ್ಲಾಹ್ ಎಂದೂ ಗಾಡ್ ಎಂದೂ ಪರಮೇಶ್ವರ ಎಂದೂ ಕರೆಯುತ್ತಾರೆ. ಹಿಂದೂಸ್ಥಾನದಲ್ಲಿ ಜನಿಸಿದ ಸತ್ಯಸಂಧರಾದ ಶ್ರೀರಾಮ, ಶ್ರೀಕೃಷ್ಣ, ಇರಾನಿನಲ್ಲಿ ಜನಿಸಿದ ಸಾತ್ವಿಕರಾದ ಝೊರಾಸ್ಟರ್, ಈಜಿಪ್ಟ್‌ನಲ್ಲಿ ಜನಿಸಿದ ಮೂಸಾ, ನಜರೇತ್‌ನಲ್ಲಿ ಜನಿಸಿದ ಈಸಾ ಮಸೀಹ್, ಪಂಜಾಬಿನ ಒಬ್ಬ ಸಾತ್ವಿಕ ನಾನಕ್ ಮತ್ತು ಎಲ್ಲ ಸಾತ್ವಿಕರ ನಾಯಕರಾದ ಅರಬ್ ದೇಶದ ಪ್ರಕಾಶ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸಾಕ್ಷ್ಯ ನೀಡಿದ್ದಾರೆ. ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಬಾಲ್ಯಕಾಲದಿಂದಲೇ ಅವರ ಸಮುದಾಯದ ಜನರು ಸಾದಿಖ್ (ಸತ್ಯವಂತ) ಎಂಬ ಬಿರುದು ನೀಡಿದ್ದರು. ಅವರು ಸ್ವತಃ ತನ್ನ ಸಮುದಾಯದ ಜನರೊಂದಿಗೆ ಹೀಗೆ ಹೇಳಿದರು: **ಫಖದ್ ಲಬಿಸ್ತು ಫೀಕುಮ್ ಉಮುರಾ** – "ಒಂದು ದೀರ್ಘ ಕಾಲ ನಾನು ನಿಮ್ಮ ಮಧ್ಯೆ ಜೀವಿಸುತ್ತಿದ್ದೆನಲ್ಲವೇ?" (ಪವಿತ್ರ ಖುರ್‌ಆನ್ 10:17).

ಅವರು ಹೀಗೆ ಹೇಳಿದುದರ ಅರ್ಥ ಏನೆಂದರೆ: ನಾನು ಎಂದಾದರೂ ಸುಳ್ಳು ಹೇಳಿದುದಾಗಿ ನೀವು ಸಾಬೀತುಗೊಳಿಸಬಲ್ಲಿರೇನು? ಇದಕ್ಕೆದುರಾಗಿ ಅವರ ಸಮುದಾಯ ಏನೂ ಆಕ್ಷೇಪ ಹೇಳಲಿಲ್ಲ.

ಇವರಲ್ಲದೆ ಸಾವಿರಾರು ಸಾತ್ವಿಕರು ಲೋಕದಲ್ಲಿ ಜನಿಸಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಒಮ್ಮತದಿಂದ ಹೇಳಿರುತ್ತಾರೆ – ಒಬ್ಬ ದೇವನಿದ್ದಾನೆಂದು. ಅವರು ಹೀಗೆ ಸಹ ಹೇಳಿದ್ದಾರೆ – ನಾವು ಅವನನ್ನು ಕಂಡಿದ್ದೇವೆ ಮತ್ತು ಅವನೊಂದಿಗೆ ಮಾತನಾಡಿದ್ದೇವೆ ಎಂದು. ಲೋಕದಲ್ಲಿ ಜನಿಸಿದ ಪ್ರಸಿದ್ಧ ದಾರ್ಶನಿಕರಲ್ಲಿ ಒಬ್ಬನಿಗೆ ಕೂಡ ಮೇಲೆ ವಿವರಿಸಿದ ಸಾತ್ವಿಕರಲ್ಲಿ ಒಬ್ಬರು ಮಾಡಿದ ಕೆಲಸದ ಸಾವಿರದಲ್ಲಿ ಒಂದು ಪಾಲು ಕೂಡ ಮಾಡಲು ಸಾಧ್ಯವಾಗದು. ಆ ಸಾತ್ವಿಕರ ಜೀವಿತವನ್ನು ದಾರ್ಶನಿಕರ ಜೀವಿತದೊಂದಿಗೆ ಹೋಲಿಸಿ ನೋಡುವುದಾದರೆ ದಾರ್ಶನಿಕರ ಜೀವಿತದಲ್ಲಿ ಕೇವಲ ಮಾತುಗಳು ಕಂಡು ಬರುತ್ತವೆ; ಆದರೆ ಅವರ ಕೃತ್ಯಗಳು ಬಹಳ ಕಡಿಮೆಯಾಗಿ ಕಾಣಿಸುತ್ತವೆ. ಸಾತ್ವಿಕರು ಪ್ರದರ್ಶಿಸಿದ ಸತ್ಯಸಂಧತೆ ದಾರ್ಶನಿಕರಿಗೆ ಪ್ರದರ್ಶಿಸಲು ಹೇಗೆ ತಾನೆ ಸಾಧ್ಯ? ಈ ದಾರ್ಶನಿಕರು ಜನರಿಗೆ ಸತ್ಯವನ್ನು ಹೇಳಬೇಕೆಂದು ಉಪದೇಶಿಸುತ್ತಾರೆ. ಆದರೆ ಅವರು ಸ್ವಯಂ ಸುಳ್ಳನ್ನು ಕೈ ಬಿಡುವುದಿಲ್ಲ. ಆದರೆ ನಾನು ಮೇಲೆ ಉಲ್ಲೇಖಿಸಿದ ಸಾತ್ವಿಕರು ಸತ್ಯಪಾಲನೆಗೋಸ್ಕರ ಸಾವಿರಾರು ಕಷ್ಟಗಳನ್ನು ಸಹಿಸಿದರು. ಆದರೆ ಅವರ ಪಾದಗಳು ತಮ್ಮ ಸ್ಥಾನದಿಂದ ಅಲುಗಾಡಲಿಲ್ಲ. ಅವರನ್ನು ಕೊಲ್ಲಲು ಗೂಢತಂತ್ರಗಳನ್ನು ಮಾಡಲಾಯಿತು. ಅವರನ್ನು ಅವರ ದೇಶಗಳಿಂದ ಹೊರಹಾಕಲಾಯಿತು. ಅವರನ್ನು ಗಲ್ಲಿಗಳಲ್ಲೂ ಪಟ್ಟಣಗಳಲ್ಲೂ ಅಪಮಾನಿಸಲಾಯಿತು. ಎಲ್ಲರೂ ಅವರೊಂದಿಗಿರುವ ಸಂಬಂಧ ವಿಚ್ಛೇದಿಸಿದರು. ಆದರೆ ಅವರು ತಮ್ಮ ಮಾತನ್ನು ಎಂದೂ ಬದಲಾಯಿಸಲಿಲ್ಲ. ಸುಳ್ಳು ಹೇಳಿ ತಮ್ಮನ್ನು ರಕ್ಷಿಸಲು ಪ್ರಯತ್ನಿಸಲಿಲ್ಲ. ಅವರ ಕೃತ್ಯಗಳು, ಅವರಿಗಿದ್ದ ಲೌಕಿಕ ನಿರಾಸಕ್ತಿ, ತೋರಿಕೆಯಿಂದ ದೂರಸರಿಯುವಿಕೆ ಮೊದಲಾದುವು ಅವರು ನಿಸ್ವಾರ್ಥಿಗಳಾಗಿದ್ದರೆಂದು ಸಾಬೀತುಗೊಳಿಸಿದುವು. ಇಂತಹ ಸತ್ಯಸಂಧರೂ ವಿಶ್ವಾಸಾರ್ಹರೂ ಆಗಿರುವ ಜನರು, "ನಾವು ಅಲ್ಲಾಹನನ್ನು ಭೇಟಿಯಾಗಿದ್ದೇವೆ, ಅವನ ಧ್ವನಿ ಆಲಿಸಿದ್ದೇವೆ. ಅವನ ಪ್ರಭೆಯನ್ನು ನೋಡಿದ್ದೇವೆ" ಎಂದು ಒಮ್ಮತದಿಂದ ಹೇಳುವಾಗ ಅವರ ಮಾತುಗಳನ್ನು ತಿರಸ್ಕರಿಸಲು ಕಾರಣವೇನಿದೆ? ಕೆಲವು ಜನರು ನಿತ್ಯ ಸುಳ್ಳು ಹೇಳುವವರಾಗಿದ್ದರೂ ಅವರಲ್ಲಿ ಕೆಲವರು ಒಟ್ಟಿಗೆ ಸೇರಿ ಒಂದು ವಿಷಯದ ಬಗ್ಗೆ ಸಾಕ್ಷ್ಯ ಹೇಳಿದರೆ ನಾವು ನಂಬಬೇಕಾಗುತ್ತದೆ. ಕೆಲವರು ನಮಗೆ ಪರಿಚಿತರಲ್ಲವಾದರೂ ಅವರು ಪತ್ರಿಕೆಗಳಲ್ಲಿ ತಮ್ಮ ಸಂಶೋಧನೆ ಬಗ್ಗೆ ಲೇಖನ ಬರೆದಾಗ ನಾವು ಅಂಗೀಕರಿಸಲು ಸಿದ್ಧರಾಗುತ್ತೇವೆ. ಆದರೆ ಆ ಸಾತ್ವಿಕರ ಮಾತುಗಳನ್ನು ಅಂಗೀಕರಿಸಲು ಏಕೆ ಸಿದ್ಧರಾಗುವುದಿಲ್ಲ. ಲಂಡನ್ ಎಂಬ ನಗರವಿದೆ ಎಂದು ಹೇಳಿದರೆ ನಾವು ನಂಬುತ್ತೇವೆ. ಅಮೇರಿಕ ಬಹಳ ದೊಡ್ಡ ಭೂಖಂಡ ಎಂದು ಭೌಗೋಳ ಶಾಸ್ತ್ರಜ್ಞರು ಹೇಳುವುದನ್ನು ನಂಬುತ್ತೇವೆ. ಸೈಬೀರಿಯಾ ವಿಶಾಲವಾದ ನಿರ್ಜನ ಪ್ರದೇಶವೆಂದು ಪ್ರವಾಸಿಗಳು ಹೇಳಿದರೆ ನಾವು ನಿರಾಕರಿಸುವುದಿಲ್ಲ. ಏಕೆ? ಏಕೆಂದರೆ ಅನೇಕರು ಇವುಗಳ ಬಗ್ಗೆ ಸಾಕ್ಷ್ಯ ಹೇಳುತ್ತಿದ್ದಾರೆ. ಆದರೆ ಈ ಸಾಕ್ಷ್ಯ ಹೇಳಿದವರು ಸತ್ಯವಂತರೋ ಅಲ್ಲವೋ ಎಂದು ನಮಗೆ ತಿಳಿಯದು.

ಅಲ್ಲಾಹನ ಬಗ್ಗೆ ಪ್ರತ್ಯಕ್ಷ ಸಾಕ್ಷ್ಯ ನೀಡುವವರು ಹೇಗಿದ್ದಾರೆಂದರೆ ಅವರ ಸತ್ಯಸಂಧತೆ ಹಗಲು ಬೆಳಕಿನ ಹಾಗೆ ಸ್ಪಷ್ಟವಾಗಿರುತ್ತದೆ. ಅವರು ತಮ್ಮ ಸಂಪತ್ತು, ಜೀವ, ದೇಶ, ಗೌರವ ಮೊದಲಾದುವುಗಳನ್ನು ಭಂಗಗೊಳಿಸಿ ಲೋಕದಲ್ಲಿ ಸತ್ಯವನ್ನು ಸ್ಥಾಪಿಸಿದರು. ಮತ್ತೆ, ಪ್ರವಾಸಿಗಳ ಮತ್ತು ಭೌಗೋಳ ಶಾಸ್ತ್ರಜ್ಞರ ಮಾತುಗಳನ್ನು ನಂಬುವುದು ಮತ್ತು

ಸಾತ್ವಿಕರ ಮಾತುಗಳನ್ನು ನಂಬದಿರುವುದು ಹೇಗೆ ಸರಿಯಾಗುತ್ತದೆ. ಲಂಡನ್ ನಗರವಿರುವುದು ಕೆಲವು ಜನರ ಹೇಳಿಕೆಯಿಂದ ಸಾಬೀತಾಗುವುದಾದರೆ ಸಾವಿರಾರು ಸಾತ್ವಿಕರು ಅಲ್ಲಾಹನ ಅಸ್ತಿತ್ವದ ಬಗ್ಗೆ ನುಡಿದ ಸಾಕ್ಷ್ಯ ಏಕೆ ಅಂಗೀಕಾರಾರ್ಹವಾಗಲಾರದು?

ಸಾವಿರಾರು ಸಾತ್ವಿಕರು ದೇವನ ಅಸ್ತಿತ್ವದ ಬಗ್ಗೆ ತಮ್ಮ ಪ್ರತ್ಯಕ್ಷ ದರ್ಶನದ ಮೂಲಕ ಸಾಕ್ಷಿ ನೀಡುವಾಗ ಅದು ತಿರಸ್ಕಾರಕ್ಕೆ ಅರ್ಹವಾಗಿರುವುದಿಲ್ಲ. ಸಾತ್ವಿಕರ ಗುಂಪು ಒಮ್ಮತದಿಂದ ಹೇಳುತ್ತಿದೆ – ದೇವನಿದ್ದಾನೆಂದು. ಆದರೆ ಆಧ್ಯಾತ್ಮಿಕತೆ ಬಗ್ಗೆ ಸಂಪೂರ್ಣ ಅಜ್ಞರಾಗಿರುವವರು ಹೇಳುತ್ತಾರೆ – ದೇವನಿದ್ದಾನೆಂಬ ಅವರ ಮಾತನ್ನು ನಂಬಬೇಡಿರಿ ಎಂದು. ಸಾಕ್ಷ್ಯ ನೀಡುವ ತತ್ವಗಳ ಪ್ರಕಾರ ಇಬ್ಬರು ಸಾತ್ವಿಕರಲ್ಲಿ ಒಬ್ಬನು ನಾನು ನೋಡಿದ್ದೇನೆ ಎಂದು ಸಾಕ್ಷ್ಯ ನೀಡುವಾಗ ಇನ್ನೊಬ್ಬ ಸಾತ್ವಿಕನು ನಾನು ನೋಡಿಲ್ಲ ಎಂದು ಸಾಕ್ಷ್ಯ ನೀಡಿದರೆ, ಆಗ ನೋಡಿದ್ದೇನೆ ಎಂದು ಸಾಕ್ಷ್ಯ ನೀಡಿದ ಸಾತ್ವಿಕನ ಸಾಕ್ಷ್ಯಕ್ಕೆ ಆದ್ಯತೆ ನೀಡಲಾಗುವುದು. ಏಕೆಂದರೆ ಆ ಇಬ್ಬರು ಸಾತ್ವಿಕರಲ್ಲಿ ಒಬ್ಬನ ದೃಷ್ಟಿ ಅದರ ಮೇಲೆ ಬಿದ್ದಿರಲಿರಕ್ಕಿಲ್ಲ. ಆದರೆ ಸಾತ್ವಿಕರಲ್ಲಿ ಒಬ್ಬನು ನೋಡದುದನ್ನು ನೋಡಿದ್ದೇನೆ ಎಂದು ಮನವರಿಕೆ ಮಾಡಲಾರನು. ಆದುದರಿಂದ ದೇವನನ್ನು ಕಂಡವರ ಸಾಕ್ಷ್ಯ ಅವನನ್ನು ನಿರಾಕರಿಸುವವರ ಮೇಲೆ ಆದ್ಯತೆ ಗಳಿಸುತ್ತದೆ.

### ಮೂರನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್‌ನಿಂದ ತಿಳಿಯಬಹುದಾದ ಮೂರನೆಯ ಸಾಕ್ಷ್ಯಾಧಾರವೇನೆಂದರೆ, ಮನುಷ್ಯನ ಪ್ರಕೃತಿ ದೇವನ ಅಸ್ತಿತ್ವಕ್ಕೆ ಒಂದು ಸಾಕ್ಷ್ಯಾಧಾರವಾಗಿದೆ. ಕೆಲವು ಪಾಪಕೃತ್ಯಗಳು ಹೇಗಿವೆ ಎಂದರೆ ಮನುಷ್ಯನ ಪ್ರಕೃತಿ ಖಂಡಿತವಾಗಿಯೂ ಅವುಗಳನ್ನು ತೀರಾ ಇಷ್ಟಪಡುವುದಿಲ್ಲ. ತಾಯಿ, ಸಹೋದರಿ ಮತ್ತು ಮಗಳೊಂದಿಗೆ ಲೈಂಗಿಕ ಸಂಪರ್ಕ, ಮಲಮೂತ್ರ ಮೊದಲಾದ ಕೊಳಕುಗಳ ಸಂಪರ್ಕ, ಸುಳ್ಳು ಮೊದಲಾದುವುಗಳನ್ನು ಒಬ್ಬ ನಾಸ್ತಿಕ ಸಹ ಇಷ್ಟಪಡುವುದಿಲ್ಲ. ಆದರೆ ಹೀಗೆ ಏಕೆ ಸಂಭವಿಸುತ್ತದೆ? ದೇವನಿಲ್ಲವಾದರೆ ಹೀಗೆ ಏಕೆ? ತಾಯಿ, ಸಹೋದರಿಯರ ಬಗ್ಗೆ ಅನ್ಯ ಸ್ತ್ರೀಯರಿಂದ ವ್ಯತ್ಯಾಸ ಏಕೆ ಕಲ್ಪಿಸುತ್ತಾನೆ. ಸುಳ್ಳು ಕೆಟ್ಟದೆಂದು ಏಕೆ ಭಾವಿಸುತ್ತಾನೆ. ಅವುಗಳು ಕೆಟ್ಟದೆಂದು ಹೇಳಲು ಕಾರಣವೇನು? ಒಂದು ಉನ್ನತ ಬಾಹ್ಯ ಶಕ್ತಿಯ ಪ್ರಭಾವ ಹೃದಯದಲ್ಲಿಲ್ಲವಾದರೆ ಇವುಗಳಿಂದ ಏಕೆ ತನ್ನನ್ನು ದೂರ ಸರಿಸುತ್ತಾನೆ? ನಿರೀಶ್ವರವಾದಿಗೆ ಸುಳ್ಳು, ಸತ್ಯ, ದೌರ್ಜನ್ಯ ಮತ್ತು ನ್ಯಾಯಪಾಲನೆ ಒಂದೇ ರೀತಿಯಾಗಿರಬೇಕು. ಮನಸ್ಸಿಗೆ ಬಂದಂತೆ ಮಾಡಬೇಕಾಗಿದೆ. ಅವನ ಭಾವನೆಗಳನ್ನು ನಿಯಂತ್ರಿಸುವ ನಿಯಮ ಸಂಹಿತೆ ಯಾವುದು? ಅದು ಅವನ ಹೃದಯದಲ್ಲಿ ತನ್ನ ಸಿಂಹಾಸನ ಇರಿಸಿರುತ್ತದೆ. ಒಬ್ಬ ನಾಸ್ತಿಕ ಬಾಯಿ ಮಾತಿನಲ್ಲಿ ದೇವನ ಅಧಿಕಾರದಿಂದ ಹೊರಗಿರುವುದಾಗಿ ಹೇಳಿದರೂ ಅವನು ದೇವನು ಸೃಷ್ಟಿಸಿದ ಪ್ರಕೃತಿಯಿಂದ ಹೊರಗೆ ಹೋಗಲು ಸಾಧ್ಯವಾಗದು. ಪಾಪಕೃತ್ಯ ಮಾಡುವುದರಿಂದ ದೂರ ಸರಿದಿರುವುದು ಮತ್ತು ಅವುಗಳ ಪ್ರಕಟಣೆಯಿಂದ ದೂರ ಸರಿದಿರುವುದು ಅವನು ಯಾವುದೋ ಒಬ್ಬ ದೊರೆಗೆ ಉತ್ತರ ನೀಡಬೇಕಾದೀತೆಂಬ ಭಯ ಅವನ ಹೃದಯದಲ್ಲಿದೆ ಎನ್ನುವುದಕ್ಕೆ ಸಾಕ್ಷ್ಯಾಧಾರವಾಗಿದೆ. ಅವನು ಆ ದೊರೆಯ ಅಸ್ತಿತ್ವವನ್ನು ನಿರಾಕರಿಸಿದರೂ ಆ ದೊರೆಯ ಅಧಿಕಾರ ಚಲಾವಣೆ ಜಾರಿಯಲ್ಲಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಸೂಚಿಸಿದೆ: **ಲಾ ಉಖ್‌ಸಿಮು ಬಿಯೌಮಿಲ್ ಖಿಯಾಮತಿ ವಲಾ ಉಖ್‌ಸಿಮು ಬಿನ್ನಫ್‌ಸಿಲ್ಲವ್ವಾಮ.** "ನಾನು ಪುನರುತ್ಥಾನದ ದಿನದ ಮೇಲೆ ಆಣೆ ಹಾಕುತ್ತೇನೆ. ಸ್ವಯಂ ದೂಷಿಸುವ ಆತ್ಮದ ಮೇಲೆಯೂ ಆಣೆ ಹಾಕುತ್ತೇನೆ." (75:2,3).

ಪವಿತ್ರ ಖುರ್‌ಆನಿನ ಈ ವಚನಗಳು ಹೀಗೆ ಸೂಚಿಸುತ್ತವೆ– ಜನರು ದೇವನಿಲ್ಲ, ಶಿಕ್ಷೆ ರಕ್ಷೆಗಳಿಲ್ಲ ಎಂದು ಭಾವಿಸುವುದು ಸರಿಯಲ್ಲ. ನಾವು ಇದರ ಬಗ್ಗೆ ಎರಡು ಸಾಕ್ಷ್ಯಗಳನ್ನು ನೀಡುತ್ತೇವೆ. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಒಂದು ಶಿಕ್ಷೆ ರಕ್ಷೆಯ ದಿನ ನಿಶ್ಚಿತವಾಗಿದೆ. ಆ ದಿನ ಒಳಿತಿಗೆ ಬದಲಾಗಿ ಒಳಿತು ಮತ್ತು ಕೆಡುಕಿಗೆ ಬದಲಾಗಿ ಕೆಡುಕು ಲಭಿಸುತ್ತದೆ. ದೇವನಿಲ್ಲವಾದರೆ ಈ ರೀತಿಯ ಶಿಕ್ಷೆ ರಕ್ಷೆಗಳು ದೊರಕುವುದಾದರೂ ಹೇಗೆ? ಜನರು ಪರಲೋಕದ ಶಿಕ್ಷೆ ರಕ್ಷೆಗಳನ್ನು ನಿರಾಕರಿಸುತ್ತಿದ್ದಾರೆ. ಆದರೆ ಶಿಕ್ಷೆ ರಕ್ಷೆ ಈ ಲೋಕದಿಂದಲೇ ಆರಂಭವಾಗುತ್ತದೆ. ವ್ಯಭಿಚಾರಿ ಲೈಂಗಿಕ ರೋಗಗಳಿಗೆ ತುತ್ತಾಗುತ್ತಾನೆ. ಆದರೆ ವಿವಾಹಿತನಾದವನಿಗೆ ಈ ರೋಗ ತಗಲುವುದಿಲ್ಲ. ಆದರೆ ಇಬ್ಬರು ಮಾಡುವ ಕೆಲಸ ಒಂದೇ ಆಗಿರುತ್ತದೆ. ಇನ್ನೊಂದು ಸಾಕ್ಷ್ಯ ಸ್ವಯಂ ದೂಷಿಸುವ ಆತ್ಮದ್ದಾಗಿದೆ. ಪಾಪಕೃತ್ಯಗಳ ಬಗ್ಗೆ ಕೆಟ್ಟದೆಂದೂ ಕೊಳಕೆಂದೂ ಆತ್ಮವೇ ದೂಷಿಸುತ್ತದೆ. ನಾಸ್ತಿಕ ಸಹ ವ್ಯಭಿಚಾರ ಮತ್ತು ಸುಳ್ಳನ್ನು ಕೆಟ್ಟದೆಂದು ಹೇಳುತ್ತಾನೆ. ದುರಂಹಕಾರ ಮತ್ತು ಅಸೂಯೆಯನ್ನು ಕೆಟ್ಟದೆಂದು ಹೇಳುತ್ತಾನೆ. ಆದರೆ ಹೀಗೆ ಏಕೆ? ಅವನು ಯಾವುದೇ ಧಾರ್ಮಿಕ ನಿಯಮ ಸಂಹಿತೆಯನ್ನು ಅಂಗೀಕರಿಸುವುದಿಲ್ಲ. ಆದರೆ ಅವನ ಹೃದಯ ಅವುಗಳು ಕೆಟ್ಟದೆಂದು ಹೇಳುತ್ತದೆ. ತನಗೆ ಅತ್ಯುನ್ನತ ಅಧಿಕಾರಿಯಿಂದ ಶಿಕ್ಷೆ ದೊರಕುವುದೆಂದು ಅದು ಭಯಪಡುತ್ತದೆ. ಅದು ಶಬ್ದಗಳಲ್ಲಿ ಹಾಗೆ ಹೇಳುವುದಿಲ್ಲವಾದರೂ ಅದು ಹಾಗೆ ನಂಬುತ್ತದೆ. ಇದರ ಬಗ್ಗೆ ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **ಫ ಅಲ್‌ಹಮಹಾ ಫುಜೂರಹಾ ವ ತಖ್ವಾಹಾ.** "ಅಲ್ಲಾಹನು ಆತ್ಮಕ್ಕೆ ಅದರ ದುಷ್ಕತೆ ಮತ್ತು ಸಾತ್ವಿಕತೆಯ ಬಗ್ಗೆ ತಿಳಿಯಪಡಿಸಿದನು." (91:9). ಮನುಷ್ಯನಲ್ಲಿ ಒಳಿತು ಕೆಡುಕುಗಳ ಬಗ್ಗೆ ಇರುವ ಪ್ರಜ್ಞೆ ದೇವನ ಅಸ್ತಿತ್ವದ ಬಗ್ಗೆ ಬಲಯುತವಾದ ಸಾಕ್ಷ್ಯಾಧಾರವಾಗಿದೆ. ದೇವನಿಲ್ಲವಾದರೆ ಒಂದು ವಸ್ತು ಒಳ್ಳೆಯದು, ಇನ್ನೊಂದು ಕೆಟ್ಟದು ಎಂದು ಹೇಳಲಾಗದು. ಮನಸ್ಸಿಗೆ ಬಂದಂತೆ ಜನರು ಮಾಡುವರು.

### ನಾಲ್ಕನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್ ದೇವಾಸ್ತಿತ್ವದ ಬಗ್ಗೆ ನೀಡುವ ನಾಲ್ಕನೆಯ ಸಾಕ್ಷ್ಯಾಧಾರ ಹೀಗಿದೆ:

**ವ ಅನ್ನ ಇಲಾ ರಬ್ಬಿಕಲ್ ಮುನ್‌ತಹಾ ವ ಅನ್ನಹೂ ಹುವ ಅಝ್‌ಹಕ ವ ಅಬ್‌ಕಾ ವ ಅನ್ನಹೂ ಹುವ ಅಮಾತ ವ ಅಹ್‌ಯಾ ವ ಅನ್ನಹೂ ಖಲಖಝ್ಝೌಜೈನಿ ದ್ದಕರ ವಲ್ ಉನ್‌ಸಾ ಮಿನ್ ನುತ್‌ಫತಿನ್ ಇಧಾ ತುಮ್‌ನಾ.**

"ಕೊನೆಗೆ ಎಲ್ಲವೂ ನಿನ್ನ ಪ್ರಭುವಿನ ಬಳಿಗೆ ಬಂದು ಸೇರುವುವು. ನಗುವಂತೆಯೂ ಅಳುವಂತೆಯೂ ಮಾಡುವವನು ಅವನೇ ಆಗಿದ್ದಾನೆ. ಸಾಯಿಸುವವನೂ ಬದುಕಿಸುವವನೂ ಅವನೇ. ಅವನೇ ಗಂಡು ಹೆಣ್ಣು ಜೋಡಿಗಳನ್ನು ಸೃಷ್ಟಿಸುವವನು – ವೀರ್ಯಾಣುವಿನಿಂದ – ಅದು (ಗರ್ಭಾಶಯದಲ್ಲಿ) ಸ್ರವಿಸಲ್ಪಡುವಾಗ." (53:43–47)

**32ನೇ ಪುಟಕ್ಕೆ**

# ಇಸ್ಲಾಮ್ ಮತ್ತು ಮನಸಾಕ್ಷಿ ಸ್ವಾತಂತ್ರ್ಯ

ಮನಸಾಕ್ಷಿ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಪ್ರತಿಯೊಬ್ಬ ವ್ಯಕ್ತಿಯ ಜನ್ಮಸಿದ್ಧ ಹಕ್ಕಾಗಿದೆ. ಅವುಗಳನ್ನು ಅವುಗಳ ಎಲ್ಲ ಅಂಶಗಳೊಂದಿಗೆ ಅಂಗೀಕರಿಸುತ್ತಾ ಮನುಷ್ಯನ ಗೌರವಾದರಗಳನ್ನು ಕಾಪಾಡಿದ ಲೋಕದ ಪ್ರಥಮ ಧರ್ಮ ಇಸ್ಲಾಮ್ ಆಗಿದೆ. ಪವಿತ್ರ ಖುರ್‌ಆನಿನ ಪ್ರಕಾರ ಧರ್ಮ, ಜಾತಿ, ವರ್ಣ, ಕುಲ ಮತ್ತು ಕೋಮಿನ ಭೇದ - ಭಾವಗಳನ್ನು ಲಕ್ಷಿಸದೆ ಎಲ್ಲರಿಗೂ ಯಾವುದೇ ಧರ್ಮವನ್ನು ಸ್ವೀಕರಿಸಲು, ಅದನ್ನು ಸಂಪೂರ್ಣವಾಗಿ ಆಚರಿಸಲು, ಬೇಕಾದರೆ ಅದನ್ನು ಉಪೇಕ್ಷಿಸಲು ಪರಿಪೂರ್ಣವಾದ ಸ್ವಾತಂತ್ರ್ಯವಿದೆ.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: "ಧರ್ಮದಲ್ಲಿ ಯಾವುದೇ ರೀತಿಯ ಬಲಪ್ರಯೋಗವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (2:257)

ಅದೇ ರೀತಿ ಹೇಳುತ್ತಾನೆ: "ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ." (109:7)

ಮತ್ತೊಂದೆಡೆ ಅಲ್ಲಾಹನು ಹೇಳುತ್ತಾನೆ: "ಹೇಳು: 'ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ; ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ." (18:30)

ಯಾವುದೇ ಧರ್ಮವನ್ನು ಸ್ವೀಕರಿಸುವುದು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತವಾದ ಹಕ್ಕಾಗಿದೆ. ಇಸ್ಲಾಮ್ ನೀತಿ - ನ್ಯಾಯವನ್ನು ಸ್ಥಾಪಿಸಲು ಹೀಗೆ ಉಪದೇಶಿಸುತ್ತದೆ: "ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು." (5:9)

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೇಳುತ್ತಾರೆ: "ಜನರನ್ನು ಬಲಪ್ರಯೋಗದಿಂದ ಮುಸ್ಲಿಮರನ್ನಾಗಿಸಲು ಹಝ್ರತ್ ಪೈಗಂಬರ್[ಸ] ಖಡ್ಗವೆತ್ತಿದರು ಎಂದು ನಾಮಧಾರಿಗಳಾದ ಮೌಲವಿಗಳು ತಟ್ಟನೆ ಹೇಳುವುದು ಮಹಾ ತಿಳಿಗೇಡಿತನವಾಗಿದೆ......ಇದೇ ಸಂದೇಹಗಳಲ್ಲಿ ಕೆಲವು ತಿಳಿಗೇಡಿಗಳಾದ ಪಾದರಿಗಳು ಸಹ ಒಳಪಟ್ಟಿದ್ದಾರೆ. ಯಾವ ಧರ್ಮದ ಉಪದೇಶ ಮುಂಚಿನಿಂದಲೇ **ಲಾ ಇಕ್‌ರಾಹ ಫಿದ್ದೀನ್,** ಎಂದರೆ ಧರ್ಮದಲ್ಲಿ ಯಾವುದೇ ರೀತಿಯ ಬಲಪ್ರಯೋಗವಿಲ್ಲ ಎಂದಾಗಿದೆಯೋ ಅದರ ಮೇಲೆ ಬಲಪ್ರಯೋಗ ಮತ್ತು ದೌರ್ಜನ್ಯದ ಆರೋಪ ಹೊರಿಸುವುದಕ್ಕಿಂತ ಮಿಗಿಲಾದ ಸುಳ್ಳು ಮಾತು ಬೇರೆ ಇರಲಿಕ್ಕಿಲ್ಲ. ನಮ್ಮ ಪೈಗಂಬರ್[ಸ] ಮತ್ತು ಅವರ ಆದರಣೀಯ ಅನುಚರರು ಮಾಡಿದ ಯುದ್ಧಗಳು ಅವಿಶ್ವಾಸಿಗಳ

ಆಕ್ರಮಣಗಳಿಂದ ತಮ್ಮನ್ನು ಸಂರಕ್ಷಿಸಲು ಅಥವಾ ಶಾಂತಿ ಸ್ಥಾಪಿಸಲು ಆಗಿದ್ದವು. ಯಾರು ಖಡ್ಗದಿಂದ ಧರ್ಮವನ್ನು ತಡೆಯಲು ಇಚ್ಛಿಸುತ್ತಾರೋ ಅವರನ್ನು ಖಡ್ಗದಿಂದಲೇ ಹಿಂದಕ್ಕೆ ಸರಿಸಲು (ಯುದ್ಧ ಮಾಡಲಾಗಿತ್ತು)."
(ತಿರ್‌ಯಾಖಿಲ್ ಖುಲೂಬ್, ಪುಟ 16)

ಇಸ್ಲಾಮ್ ಪ್ರತಿಯೊಬ್ಬರಿಗೂ ತಮ್ಮ ಧರ್ಮದ ಪ್ರಬೋಧನೆ ಮತ್ತು ಪ್ರಚಾರದ ಹಕ್ಕು ನೀಡುತ್ತದೆ. ಅದರ ಪರಿಣಾಮವಾಗಿ ಯಾರು ಬೇಕಾದರೂ ಯಾವುದೇ ಧರ್ಮವನ್ನು ಸ್ವೀಕರಿಸಬಹುದು. ಆದರೆ ಇದರಲ್ಲಿ ಯಾವುದೇ ರೀತಿಯ ಬಲಪ್ರಯೋಗ ಅಥವಾ ಒತ್ತಾಯ ಅನುಮತನೀಯವಲ್ಲ. ಬದಲಾಗಿ, ಪ್ರೀತಿ-ಪ್ರೇಮದಿಂದ ಮತ್ತು ಪರಸ್ಪರ ಗೌರವಾದರದೊಂದಿಗೆ ಈ ಕಾರ್ಯವನ್ನು ನಿರ್ವಹಿಸಲು ಆದೇಶಿಸಲಾಗಿದೆ.

ಒಟ್ಟಿನಲ್ಲಿ, ಯಾವುದೇ ಧರ್ಮವನ್ನು ಸತ್ಯವೆಂದು ತಿಳಿದು, ಸತ್ಯವೆಂದು ಅಂಗೀಕರಿಸಿ ಮತ್ತು ಅದನ್ನು ವೈಶಿಷ್ಟ್ಯಗಳಿಂದ ಭರಿತವಾದುದು ಎಂದು ಅರಿತು ಸ್ವೀಕರಿಸಿದ ಧರ್ಮಾವಲಂಬಿಗೆ, ಅದನ್ನು ಸ್ನೇಹ ಮತ್ತು ಪ್ರೀತಿಯಿಂದ ಇತರರಿಗೆ ತಲುಪಿಸುವ ಹಕ್ಕು ಸಹ ಇಸ್ಲಾಮ್ ಮನಸ್ಸಾಕ್ಷಿ ಸ್ವಾತಂತ್ರ್ಯದ ಹೆಸರಿನಲ್ಲಿ ಕೊಡುತ್ತದೆ. ಅನಂತರ ಅದನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಪರಿಪೂರ್ಣವಾದ ಅಧಿಕಾರ ಕೇಳುವವನಿಗೆ ಇರುತ್ತದೆ.

ಅಭಿಪ್ರಾಯ ಸ್ವಾತಂತ್ರ್ಯ ಬಗ್ಗೆ ಹೇಳುವುದಾದರೆ, ತಮ್ಮ ತಮ್ಮ ಧರ್ಮಗಳ ಪ್ರಬೋಧನೆ ಮತ್ತು ಪ್ರಚಾರ ಮಾಡುವ ಹಕ್ಕನ್ನು ಇಸ್ಲಾಮ್ ಅಂಗೀಕರಿಸುತ್ತದೆ. ಆದರೆ ಯಾವುದೇ ಧರ್ಮದ ಧಾರ್ಮಿಕ ಗುರುಗಳನ್ನು, ಅವುಗಳ ಮಹಾತ್ಮರನ್ನು ಅಥವಾ ದೇವಿ - ದೇವತೆಗಳನ್ನು ನಿಂದಿಸಲು, ಅವರನ್ನು ಅವಹೇಳಿಸಲು ಮತ್ತು ದೂಷಿಸಲು ಇಸ್ಲಾಮ್ ಖಂಡಿತ ಅನುಮತಿ ಕೊಡುವುದಿಲ್ಲ. ಇಸ್ಲಾಮಿನಲ್ಲಿ ಮೂರ್ತಿ ಪೂಜೆ ಮಾಡಲು ಅನುಮತಿ ಇಲ್ಲ ಮತ್ತು ಬಹುದೇವಾರಾಧನೆ(ಶಿರ್ಕ್)ಯನ್ನು ಅತಿ ಶಕ್ತವಾಗಿ ರದ್ದುಗೊಳಿಸಿದೆ. ಆದರೂ ಇಸ್ಲಾಮ್ ಇತರ ಧರ್ಮಗಳ ಆರಾಧ್ಯರನ್ನು ದೂಷಿಸಲು ಅಥವಾ ಹೀಯಾಳಿಸಲು ಖಂಡಿತ ಅನುಮತಿ ಕೊಡುವುದಿಲ್ಲ. ಅಲ್ಲಾಹನು ಹೇಳುತ್ತಾನೆ:

"ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ." (6:109)

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೇಳುತ್ತಾರೆ: "ನೋಡಿರಿ, ಅಲ್ಲಾಹನ ಅಧ್ಯಾಪನೆಯ ಪ್ರಕಾರ ವಿಗ್ರಹಕ್ಕೆ ಯಾವುದೇ ಮಹತ್ವವಿಲ್ಲ, ಆದರೂ ವಿಗ್ರಹಗಳನ್ನು ದೂಷಿಸುವುದರಿಂದ ತಮ್ಮ ನಾಲಗೆಗಳನ್ನು ತಡೆಯುವ ಮತ್ತು ಸೌಮ್ಯವಾಗಿ ಮನವರಿಕೆ ಮಾಡಿಸುವ ನೈತಿಕ ಗುಣವನ್ನು ಅಲ್ಲಾಹನು ಮುಸ್ಲಿಮರಿಗೆ ಕಲಿಸಿ ಕೊಡುತ್ತಾನೆ."
(ಪೈಗಾಮೆ ಸುಲ್‌ಹ್ – ಪುಟ 32)

ಶತ್ರುಗಳ ಶತ್ರುತ್ವ ಮತ್ತು ಹಲವು ರೀತಿಯ ಕಷ್ಟತೆಗಳು ಇದ್ದೂ ಹಝ್ರತ್ ಪೈಗಂಬರರು(ಸ) ತಮ್ಮ ಜೀವನವಿಡೀ ಇಸ್ಲಾಮಿನ ಈ ಸ್ನೇಹಭರಿತ ಅಧ್ಯಾಪನೆಯ ಪ್ರಕಾರ ನಡೆದು ತೋರಿಸಿದರು. ಅಹ್ಮದಿಯಾ ಜಮಾಅತಿನ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹಝ್ರತ್ ಪೈಗಂಬರರ(ಸ) ಪರಿಶುದ್ಧ ಜೀವಿತದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ:

"ಹಝ್ರತ್ ಪೈಗಂಬರರ(ಸ) ಪ್ರವಾದಿತ್ವ ವಾದದ ನಂತರದ ಹದಿಮೂರು ವರ್ಷಗಳ ಮಕ್ಕಾ ಜೀವನ ಎಷ್ಟು ಕಠಿಣ ಮತ್ತು ಸಂಕಷ್ಟಮಯವಾಗಿತ್ತು ಎಂದೂ ಪೈಗಂಬರ್(ಸ) ಮತ್ತು ಅವರ ಅನುಚರರು ಎಷ್ಟು ದುಃಖ ಮತ್ತು ವಿಪತ್ತುಗಳನ್ನು ಸಹಿಸಿದರು ಎಂದೂ ಯಾರಿಗೆ ತಾನೆ ತಿಳಿದಿಲ್ಲ ? ಮಧ್ಯಾಹ್ನ ಹೊತ್ತು ಸುಡುವ ಬಿಸಿ ಮರಳಲ್ಲಿ ಮಲಗಿಸಲಾಯಿತು, ಅವರ ಎದೆಗಳ ಮೇಲೆ ಬಂಡೆಕಲ್ಲುಗಳನ್ನು ಇಡಲಾಯಿತು. ಚಾವಟಿಯಿಂದ ಹೊಡೆಯಲಾಯಿತು, ಸ್ತ್ರೀಗಳ ಕಾಲುಗಳನ್ನು ಸೀಳಿ ಕೊಲ್ಲಲಾಯಿತು, ಕೆಲವರು ಕೊಲ್ಲಲ್ಪಟ್ಟು ಹುತಾತ್ಮರಾದರು. ಪೈಗಂಬರರ(ಸ) ಮೇಲೆ ವಿವಿಧ ರೀತಿಯ ದೌರ್ಜನ್ಯಗಳನ್ನು ಮಾಡಲಾಯಿತು. ಆದರೆ ಇಂತಹ ಅವಸ್ಥೆಯಲ್ಲಿ ಕೂಡ ನಮ್ಮ ಪೈಗಂಬರ್(ಸ)ಮೃದು ಹೃದಯ ಮತ್ತು ಕರುಣೆಯ ಉನ್ನತ ನೆಲೆಯನ್ನು ಸ್ಥಾಪಿಸಿದರು. ಮಕ್ಕದಿಂದ ಹೊರಟು ಕೆಲವೇ ದಿನಗಳು ಕಳೆದಿದ್ದವು. ಎಲ್ಲ ಕಷ್ಟತೆಗಳ ಗಾಯ ಹಸಿಯಾಗಿಯೇ ಇತ್ತು. ಹಝ್ರತ್ ಪೈಗಂಬರರಿಗೆ(ಸ) ತಮ್ಮ

ಕಷ್ಟತೆಗಳಿಗಿಂತ ತಮ್ಮ ಅನುಚರರ ಸಂಕಷ್ಟಗಳ ಅನುಭವ ಅಧಿಕವಾಗುತ್ತಿತ್ತು. ಆದರೂ ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ಅಧ್ಯಾಪನೆ, ತತ್ವ ಮತ್ತು ನಿಯಮಗಳನ್ನು ಉಲ್ಲಂಘಿಸಲಿಲ್ಲ. ಅವರ ಸ್ವಭಾವ ಮತ್ತು ಬೋಧನೆಯ ಭಾಗವಾಗಿದ್ದ ನೈತಿಕ ಮಟ್ಟವನ್ನು ಅವರು ಮುರಿಯಲಿಲ್ಲ. ಕೆಲವು ಪಾಶ್ಚಿಮಾತ್ಯ ದೇಶಗಳು ತಾವು ಯುದ್ಧ ಮಾಡುತ್ತಿರುವವರೊಡನೆ ಏನೇನೆಲ್ಲ ಮಾಡುತ್ತಿವೆ ಎಂದು ನೀವಿಂದು ನೋಡಿರಿ.....

"ಮದೀನದಲ್ಲಿ ಒಂದು ಒಪ್ಪಂದ ಮಾಡಲಾಗಿತ್ತು. ಈ ಒಪ್ಪಂದದ ಪ್ರಕಾರ ಹಝ್ರತ್ ಪೈಗಂಬರ್(ಸ) ಸ್ಥಾಪಿಸಿದ ಶರತ್ತುಗಳ ಬಗ್ಗೆ, ಎಂದರೆ ಅವರು ಹೇಗೆ ಇಂತಹ ಸನ್ನಿವೇಶದಲ್ಲಿ ಸಾಮರಸ್ಯದ ವಾತಾವರಣ ಸೃಷ್ಟಿಸಲು ಪ್ರಯತ್ನಿಸಿದರು ಮತ್ತು ಆ ಸಮಾಜದಲ್ಲಿ ಶಾಂತಿ ಸ್ಥಾಪಿಸಿ, ಮನುಷ್ಯತ್ವದ ಮಾನ್ಯತೆ ನೆಲೆನಿಲ್ಲಿಸಲು ಅವರು ಏನನ್ನು ಬಯಸುತ್ತಿದ್ದರು ಎಂಬುದನ್ನು ನಮಗೆ ಲಭಿಸಿರುವ ಹದೀಸ್ ವರದಿಗಳಿಂದ ನಾನು ಪ್ರಸ್ತಾಪಿಸುತ್ತೇನೆ. ಮದೀನ ತಲುಪಿದ ನಂತರ ಹಝ್ರತ್ ಪೈಗಂಬರ್(ಸ) ಯಹೂದಿಯರೊಂದಿಗೆ ಮಾಡಿದ ಒಪ್ಪಂದದ ಕೆಲವು ಶರತ್ತುಗಳು ಇವುಗಳಾಗಿವೆ:

1. ಮುಸ್ಲಿಮರು ಮತ್ತು ಯಹೂದಿಗಳು ಪರಸ್ಪರ ಸಹಾನುಭೂತಿ ಮತ್ತು ಪ್ರಾಮಾಣಿಕತೆಯೊಂದಿಗೆ ಇರುವರು ಮತ್ತು ಪರಸ್ಪರ ಅತಿಕ್ರಮ ಅಥವಾ ದೌರ್ಜನ್ಯದಿಂದ ವರ್ತಿಸಲಾರರು.

2. ಪ್ರತಿ ಕೋಮಿಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸುವುದು.

3. ದೌರ್ಜನ್ಯ ಅಥವಾ ಅಪರಾಧವೆಸಗುವವರ ಹೊರತು ಮತ್ತೆಲ್ಲ ನಿವಾಸಿಗಳ ಜೀವ ಮತ್ತು ಸಂಪತ್ತನ್ನು ಸಂರಕ್ಷಿಸಲಾಗುವುದು ಹಾಗು ಅವರನ್ನು ಗೌರವಿಸಲಾಗುವುದು.....

"ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಾಮರಸ್ಯ ಸ್ಥಾಪಿಸಲು ಹಝ್ರತ್ ಪೈಗಂಬರ್(ಸ) ತೋರಿಸಿದ ರೀತಿ ಇದಾಗಿತ್ತು. ಹೀಗಿದ್ದರೂ ಹಝ್ರತ್ ಪೈಗಂಬರ್(ಸ) ದೌರ್ಜನ್ಯವೆಸಗಿದ್ದರು ಮತ್ತು ಇಸ್ಲಾಮ್ ಧರ್ಮವನ್ನು ಹರಡಲು ಖಡ್ಗವೆತ್ತಿದ್ದರು ಎಂದು ಆರೋಪಿಸುವುದು ಅತ್ಯಂತ ದೌರ್ಜನ್ಯಕರ ಕೃತ್ಯವಾಗಿದೆ."

(ಇಸ್ಲಾಮ್ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ- ಪುಟ 26ರಿಂದ 40)

ನಾವು ಜೀವಿಸುತ್ತಿರುವ ಈ ಕಾಲ, ಜ್ಞಾನದ ಪ್ರಕಾಶದ ಹರಡುವಿಕೆಯ ನೆಲೆಯಲ್ಲಿ ಕಳೆದ ಎಲ್ಲ ಕಾಲಘಟ್ಟಗಳಿಗಿಂತ ಶ್ರೇಷ್ಠವಾದುದಾಗಿದೆ. ಆದರೆ ಇಂತಹ ಪ್ರಕಾಶದ ಕಾಲದಲ್ಲಿಯೂ ಜನರು ಬುದ್ಧಿವಂತರೆಂದು ಕರೆಯಿಸಿಕೊಂಡು ಕೂಡ ಅಭಿಪ್ರಾಯ ಸ್ವಾತಂತ್ರ್ಯದ ತಾತ್ಪರ್ಯ ತಿಳಿದಿಲ್ಲವೆಂದು ಮಾತ್ರವಲ್ಲ ಇತರ ಧರ್ಮ ಮತ್ತು ಧರ್ಮಗಳ ಮಹಾತ್ಮರ ನಿಂದನೆಯನ್ನು ಹಾಗು ಇತರ ಧರ್ಮಾವಲಂಬಿಗಳ ಮನ ನೋಯಿಸುವುದನ್ನು ಅನುಮತನೀಯವೆಂದು ನಿರ್ಧರಿಸಿದ್ದಾರೆ ಎಂಬುದು ಈ ಕಾಲದ ಒಂದು ದುರದೃಷ್ಟವಾಗಿದೆ. ಇದರ ಪರಿಣಾಮ ಎಲ್ಲ ಕಡೆ ಹಿಂಸೆ ಮತ್ತು ಬರ್ಬರತೆ ವಿಪರೀತಗೊಂಡಿದೆ.

ಅಹ್ಮದಿಯಾ ಜಮಾಅತಿನ ಈಗಿನ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹು) ಲೋಕದಲ್ಲಿ ವರ್ಧಿಸುತ್ತಿರುವ ಅಶಾಂತಿಯನ್ನು ನೋಡಿ ಕಳೆದ ಕೆಲವು ವರ್ಷಗಳಿಂದ ಶಾಂತಿ ಮತ್ತು ಸಮಾಧಾನ ಸ್ಥಾಪಿಸಲು ತಮ್ಮ ಪ್ರಯತ್ನವನ್ನು ತೀವ್ರಗೊಳಿಸಿದ್ದಾರೆ. ಇದು ಸಂಬಂಧಿಸಿ ಅವರು ಲೋಕ ಪ್ರಸಿದ್ಧ ರಾಷ್ಟ್ರಗಳಾದ ಇರಾನ್, ಅಮೇರಿಕ, ಕೆನಡ, ಇಸ್ರಾಯೇಲ್, ಸೌದಿ ಅರೇಬಿಯ, ಚೀನಾ, ಬ್ರಿಟನ್, ಜರ್ಮನಿ ಮತ್ತು ಫ್ರಾನ್ಸಿನ ನಾಯಕರಿಗೆ ಹಾಗು ಕ್ರೈಸ್ತರ ಧರ್ಮಗುರು ಪೋಪ್‌ರಿಗೆ ಶಾಂತಿ, ಸಮಾಧಾನ, ಐಕ್ಯ ಮತ್ತು ಒಗ್ಗಟ್ಟಿನ ಕುರಿತು ಇಸ್ಲಾಮಿಕ ಅಧ್ಯಾಪನೆಗಳನ್ನು ಒಳಗೊಂಡ ಪತ್ರಗಳನ್ನು ಬರೆದರು. ಅದರೊಂದಿಗೆ ಅವರು ಇಸ್ಲಾಮಿನ ಸ್ನೇಹಭರಿತ ಅಧ್ಯಾಪನೆಗಳನ್ನು ಈ ರಾಷ್ಟ್ರಗಳ ಧಾರ್ಮಿಕ ಮತ್ತು ರಾಜಕೀಯ ನೇತಾರರ ಮುಂದಿರಿಸಿದರು. ಈ ಪತ್ರಗಳು ಮತ್ತು ಭಾಷಣಗಳು ಅವರ ಮೇರುಕೃತಿಯಾದ **"ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಮಾರ್ಗ"**ದಲ್ಲಿ ಓದಬಹುದಾಗಿದೆ. ಇದೇ

ರೀತಿ ಅವರ **"ಇಸ್ಲಾಮ್ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ"** ಎಂಬ ಕೃತಿಯೂ ಇದಕ್ಕೆ ಸಂಬಂಧಿಸಿ ಫಲಪ್ರದವಾದ ಅರಿವು ಒದಗಿಸುವುದು.

ಅಹ್ಮದಿಯಾ ಜಮಾಅತಿನ ಈಗಿನ ಖಲೀಫ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹೇಳುತ್ತಾರೆ:

"ಯಾವುದೇ ಧರ್ಮದ ಮಹಾತ್ಮರ ಕುರಿತು ಯಾವುದೇ ರೀತಿಯ ಅನುಚಿತವಾದ ಅಭಿಪ್ರಾಯ ಪ್ರಕಟನೆ ಯಾವುದೇ ವಿಧದ ಸ್ವಾತಂತ್ರ್ಯದ ಪಟ್ಟಿಯಲ್ಲಿ ಒಳಪಡುವುದಿಲ್ಲ. ನೀವು ಮನಸ್ಸಾಕ್ಷಿ ಸ್ವಾತಂತ್ರ್ಯದ ಚ್ಯಾಂಪಿಯನರಾಗಿಕೊಂಡು ಇತರರ ಭಾವನೆಗಳೊಂದಿಗೆ ಆಡುತ್ತಿದ್ದೀರಿ, ಇದು ಪ್ರಜಾಪ್ರಭುತ್ವವೂ ಅಲ್ಲ; ಮನಸ್ಸಾಕ್ಷಿ ಸ್ವಾತಂತ್ರ್ಯವೂ ಅಲ್ಲ. ಪ್ರತಿಯೊಂದು ಸಂಗತಿಗೆ ಒಂದು ಮಿತಿಯಿರುತ್ತದೆ ಮತ್ತು ನೈತಿಕವಾದ ನಿಯಮಸಂಹಿತೆ ಇರುತ್ತದೆ. ಯಾವ ರೀತಿಯಲ್ಲಿ ಪ್ರತಿಯೊಂದು ವೃತ್ತಿಗೆ ನೈತಿಕವಾದ ಕಾಯಿದೆ ಇದೆಯೋ, ಅದೇ ರೀತಿಯಲ್ಲಿ ಪತ್ರಿಕಾ ವೃತ್ತಿಗೂ ನೈತಿಕ ಕಾಯಿದೆ ಇದೆ. ಹಾಗೆಯೇ, ಯಾವುದೇ ಪ್ರಕಾರದ ಆಡಳಿತವಾದರೂ ಅದಕ್ಕೂ ಕಾನೂನು – ಕಾಯಿದೆಗಳು ಇವೆ.

"ಇತರರ ಭಾವನೆಗಳೊಂದಿಗೆ ಆಡಬಹುದು ಮತ್ತು ಅವರಿಗೆ ಕಷ್ಟಕೊಡಬಹುದು ಎಂಬ ಅರ್ಥ ಮನಸ್ಸಾಕ್ಷಿ ಸ್ವಾತಂತ್ರ್ಯಕ್ಕೆ ಖಂಡಿತವಿಲ್ಲ. ಪಾಶ್ಚಾತ್ಯರು ಹೆಮ್ಮೆ ಪಡುವ ಸ್ವಾತಂತ್ರ್ಯ ಇದೇ ಆಗಿದೆ ಎಂದಾದರೆ, ಇದು ಪ್ರಗತಿ ಕಡೆಗೆ ಕೊಂಡೊಯ್ಯುವ ಸ್ವಾತಂತ್ರ್ಯವಲ್ಲ; ಅವನತಿಯ ಕಡೆಗೆ ಕೊಂಡೊಯ್ಯುವ ಸ್ವಾತಂತ್ರ್ಯವಾಗಿದೆ."

(ಇಸ್ಲಾಮ್ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ, ಪುಟ – 22, 23)

ಅಲ್ಲಾಹನು ಲೋಕ ಜನರಿಗೆ ಮನಸ್ಸಾಕ್ಷಿ ಸ್ವಾತಂತ್ರ್ಯದ ಯಥಾರ್ಥ ತಾತ್ಪರ್ಯ ಮನವರಿಕೆ ಮಾಡಲು, ಅದರ ಪ್ರಕಾರ ಶಾಂತಿ – ಸಮಾಧಾನದೊಂದಿಗೆ ಜೀವಿಸಲು ಮತ್ತು ಇತರರಿಗೆ ಜೀವನ ಪ್ರದಾನ ಮಾಡಲು ಸೌಭಾಗ್ಯ ದಯಪಾಲಿಸಲಿ. ಆಮೀನ್.


**Contact Details:** Ahmadiyya Muslim Jama'at India

**Head Office**

Nazarat Dawat Ilallah

Qadian, Dist. Gurdaspur, Punjab. 143516.

***Branch Offices***

**No.1, 3rd Cross, Wilson Garden, Bangalore - 560027**

**Darussalam, Near Railway Level Crossing, Pandeshwar, Mangalore - 575001.**

feedback: **www.alislam.org /www.ahmadiyyamuslimjamaat.in**

**www.ahmadiyyamuslimjamaat.in/feedback**

**National Toll Free Number: 1800 3010 2131 (9:00AM to 10:30PM)**

**MUSLIM TELEVISION AHMADIYYA INTERNATIONAL**

**ww.mta.tv**

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna

EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna

Printed by : Fazl-e-Umar Printing Press Qadian 2015

# ಶೈಕ್ಷಣಿಕ ಮೇಲ್ಮೆ ಗಳಿಸುವ ಮೂಲಕ ಸೌಹಾರ್ದ ಸ್ಥಾಪನೆ

**ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಯುನೆಸ್ಕೋದಲ್ಲಿ ಮಾಡಿದ ಭಾಷಣ.**




**8–10–2019ರಂದು ಸಂಯುಕ್ತ ರಾಷ್ಟ್ರ ಸಂಘದ ಎಡ್ಯುಕೇಶನಲ್, ಸಯಂಟಿಫಿಕ್ ಆ್ಯಂಡ್ ಕಲ್ಚರಲ್ ಆರ್ಗನೈಝೇಶನ್ (UNESCO) ಸಂಬೋಧಿಸಿ ಹಝ್ರತ್ ಖಲೀಫತುಲ್ ಮಸೀಹ್ V ಭಾಷಣ ಮಾಡಿದರು.**

ಸಾಯಂಕಾಲ ಸ್ಥಳೀಯ ಸಮಯ 6:15ಕ್ಕೆ ಯುನೆಸ್ಕೋ ಸ್ಪೆಶಲ್ ಸಮಾವೇಶ ಪ್ಯಾರಿಸ್ ನಗರದ ಮಿಯೋಲ್ಲಿಸ್‌ನಲ್ಲಿ ಆರಂಭವಾಯಿತು.

ಯುನೆಸ್ಕೋ 193 ದೇಶಗಳು ಸದಸ್ಯರಾಗಿರುವ ಸಂಯುಕ್ತ ರಾಷ್ಟ್ರ ಸಂಘದ ಒಂದು ಅಂಗಸಂಸ್ಥೆಯಾಗಿದ್ದು. ಅದು ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿಗೆ ಸಂಬಂಧಿಸಿ ಅಂತರ್ರಾಷ್ಟ್ರೀಯ ಸಹಭಾಗಿತ್ವದ ಮೂಲಕ ಜಾಗತಿಕ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿದೆ.

ಯುನೆಸ್ಕೋದ ಸಂವಿಧಾನವನ್ನು 1945 ನವೆಂಬರ್ ದಿನಾಂಕ 16ರಂದು ಸದಸ್ಯ ದೇಶಗಳು ಅಂಗೀಕರಿಸಿ ಅದು ಜಗತ್ತಿನಲ್ಲಿ ಶಾಂತಿಯನ್ನು, "ಸಂವಾದ ಮತ್ತು ಪರಸ್ಪರ ಸಹಮತದ ಮೂಲಕ" ಸ್ಥಾಪಿಸುವ ಧ್ಯೇಯವನ್ನು ಹೊಂದಿದೆ. ಅದು "ಬೌದ್ಧಿಕ ಮತ್ತು ನೈತಿಕವಾಗಿ ಮಾನವರ ಏಕತೆಯ ಧ್ಯೇಯ"ವನ್ನೂ ಹೊಂದಿದೆ. ಈ ಸಂಸ್ಥೆ ಜಾಗತಿಕವಾಗಿ ಅನೇಕ ಉದಾರ, ಮಾನವೀಯ ಮತ್ತು ಬೌದ್ಧಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ.

ಖಲೀಫರು ಆಗಮಿಸಿದ ನಂತರ ಸಮಾವೇಶ ಯುನೆಸ್ಕೋ ಅಧಿಕಾರಿಗಳ ಭಾಷಣಗಳಿಂದ ಪ್ರಾರಂಭವಾಯಿತು. ಬೇರೆ ಗಣ್ಯರೂ ಭಾಷಣ ಮಾಡಿದ ನಂತರ ಆಸಿಫ್ ಆರಿಫ್ ಸಾಹಿಬರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬಗ್ಗೆ ಪರಿಚಯಿಸಿಕೊಡುವ ಭಾಷಣ ಮಾಡಿದರು.

ಭಾಷಣ ಮಾಡಿದವರಲ್ಲಿ ಈ ಕೆಳಗಿನವರು ಸೇರಿದ್ದಾರೆ: ಯುನೆಸ್ಕೋದಲ್ಲಿ ಮಾಲೀ ದೇಶದ ಪ್ರತಿನಿಧಿ ಸಂಘದ ಕಮ್ಯೂನಿಕೇಶನ್ಸ್ ಸುಪರ್‌ವೈಸರ್ (ಸಂಪರ್ಕ ವಿಭಾಗದ ಮೇಲ್ವಿಚಾರಕ) ಮಿಸ್ಟರ್ ಜೀನ್ ಕ್ರಿಸ್ಟೋಫ್ ಆವುಗೆ, ವಿದೇಶಕಾರ್ಯ ಮಂತ್ರಾಲಯದ ಧಾರ್ಮಿಕ ಸಲಹೆಗಾರ, ಮಿಸ್ಟರ್ ಕ್ಲಿಮೆಂಟ್ ರೂಚ್‌ಹೌಸ್, ಹೋಮ್ ಆಫೀಸಿನ (ಗೃಹ ಮಂತ್ರಾಲಯ) ಸೆಂಟ್ರಲ್ ರಿಲೀಜನ್ ಎಡ್ವೈಸರಿ ಬೋರ್ಡ್‌ಗೆ ಸೇರಿದ ಮಿಸ್ಟರ್ ಗ್ರೆಗೋಯಿರ್ ಡಬ್ಲಿನು, ಇಯಂಬೋನ್ ನಗರದ ಮೇಯರ್, ಮಿಸ್ಟರ್ ವಿಲ್ಲಿ ಬೈಟೋನ್, ನ್ಯಾಟೋ ಮೆಮೋರಿಯಲ್‌ನ ಪ್ರೆಸಿಡೆಂಟ್ ಮತ್ತು ವಿದೇಶ ನಿವಾಸಿಗಳಾದ ಮಾಲಿ ದೇಶದ ಕ್ರೈಸ್ತರ ಪ್ರತಿನಿಧಿ ಗಿಲ್ಲೋಮಿ ಡೈಯಾಲೋ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಜಾಗತಿಕ ಶಾಂತಿಗೋಸ್ಕರ ಹೊಂದಿರುವ ಅಭಿಲಾಷೆಯನ್ನೂ ಅವರು ಅದಕ್ಕೋಸ್ಕರ ಮಾಡುವ ಕರ್ಮಗಳನ್ನೂ ಭಾಷಣಗಾರರು ತಮ್ಮ ಭಾಷಣಗಳಲ್ಲಿ ಅಭಿನಂದಿಸಿ ಮೆಚ್ಚುಗೆ ಸೂಚಿಸಿದರು.

ಅನಂತರ ಖಲೀಫರು ಸಭೆಯನ್ನು ಸಂಬೋಧಿಸಿ ಭಾಷಣ ಮಾಡಿದರು. ಅವರು ಅತಿಥಿಗಳನ್ನು ಸ್ವಾಗತಿಸಿ ಯುನೆಸ್ಕೋ ಈ ಸಮಾರಂಭವನ್ನು ಏರ್ಪಡಿಸಿದುದಕ್ಕಾಗಿ ಕೃತಜ್ಞತೆ ಅರ್ಪಿಸಿದರು.

ಖಲೀಫರು ಹೇಳಿದರು: "ರಾಜಕಾರಣಿಯಾಗಲಿ, ರಾಜಕೀಯ ನಾಯಕನಾಗಲಿ, ವಿಜ್ಞಾನಿಯಾಗಲಿ ಆಗದಿರುವ ಕೇವಲ ಒಂದು ಧಾರ್ಮಿಕ ಸಮುದಾಯದ ನೇತಾರನಾದ ನನ್ನ ಭಾಷಣವನ್ನು ಆಲಿಸಲು ಆಗಮಿಸಿದ ಅತಿಥಿಗಳಿಗೆ ಧನ್ಯವಾದಗಳು."

ಖಲೀಫರು ಹೇಳಿದರು: ಯುನೆಸ್ಕೋ ಸ್ಥಾಪನೆಯ ಉದ್ದೇಶಲಕ್ಷ್ಯಗಳಾದ ಶಾಂತಿ ಸ್ಥಾಪನೆ, ಗೌರವ ನೀಡುವಿಕೆ, ಮಾನವೀಯ ಹಕ್ಕುಗಳ ಸ್ಥಾಪನೆ, ಶಿಕ್ಷಣ ನೀಡುವಿಕೆ, ಅಭಿಪ್ರಾಯ ಸ್ವಾತಂತ್ರ್ಯ ನೀಡುವಿಕೆ ಮತ್ತು ಬಡತನದ ನಿರ್ಮೂಲನೆ ಮೊದಲಾದುವು ಅತ್ಯುತ್ಕೃಷ್ಟ ಮತ್ತು ಪ್ರಶಂಸನೀಯವಾಗಿವೆ. ಇವುಗಳು ಇಸ್ಲಾಮ್ ಧರ್ಮದ ಉದ್ದೇಶಲಕ್ಷ್ಯಗಳೂ ಆಗಿವೆ ಎಂದು ನಾನು ಹೇಳುವಾಗ ನೀವೆಲ್ಲರೂ ಆಶ್ಚರ್ಯ ಚಕಿತರಾಗಬಹುದು. ಇಂತಹ ಸೇವೆಗಳು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿಯೇ ಪ್ರತಿಪಾದಿಸಲ್ಪಟ್ಟಿವೆ. ಪವಿತ್ರ ಖುರ್‌ಆನ್ ಸರ್ವಶಕ್ತನಾದ ಅಲ್ಲಾಹನನ್ನು ಸರ್ವಲೋಕಗಳ ಪ್ರಭು ಎಂದು ಹೇಳಿದೆ. ಈ ವಚನ ಮುಸ್ಲಿಮರಿಗೆ ನೆನಪಿಸಿಕೊಡುತ್ತದೆ – ಅಲ್ಲಾಹನು ಸರ್ವ ಮಾನವರ ಪ್ರಭುವಾಗಿದ್ದಾನೆ; ಜಾತಿ, ಧರ್ಮ ಮತ್ತು ಬಣ್ಣಗಳ ವ್ಯತ್ಯಾಸವಿಲ್ಲದೆ ಎಲ್ಲ ಮನುಷ್ಯರ ಪ್ರಭು ಅವನಾಗಿದ್ದಾನೆ."

ಅವರು ಹೇಳಿದರು: "ಪರಸ್ಪರ ಗೌರವಿಸುವ ಮತ್ತು ಸಹನೆದೋರುವ ಮೌಲ್ಯಗಳು ಸಮಾಜದಲ್ಲಿ ದೃಢವಾಗಿ ಸ್ಥಾಪಿಸಲ್ಪಡಬೇಕು.

ಅಲ್ಲಾಹನು ಎಲ್ಲ ಜನರ ಪಾಲನೆ ಪೋಷಣೆ ಮಾಡುವವನಾಗಿದ್ದಾನೆ. ಅವನನ್ನು ನಿರಾಕರಿಸುವವರನ್ನೂ ಅವನು ಪೋಷಿಸುತ್ತಾನೆ. ಅಲ್ಲಾಹನ ವಿರುದ್ಧವಾಗಿ ನಿರಂತರವಾಗಿ ಕೆಟ್ಟ ಮಾತುಗಳನ್ನು ಹೇಳುವವರನ್ನೂ ಅವನ ಕಾರುಣ್ಯ ಆವರಿಸಿರುತ್ತದೆ.

ಶಿಕ್ಷೆಗೆ ಸಂಬಂಧಿಸಿದ ದರ್ಶನಶಾಸ್ತ್ರ ಅಥವಾ ಇಸ್ಲಾಮಿನ ಶಿಕ್ಷೆಯಸಂವಿಧಾನ ಹೆಚ್ಚಿನ ಮಟ್ಟಿಗೆ ಪರಲೋಕದಲ್ಲಿ

ಸಂಭವಿಸುವುದಾಗಿದೆ. ಇಹಲೋಕದಲ್ಲಿ ಅಲ್ಲಾಹನು ತನ್ನ ಕಾರುಣ್ಯಭರಿತ ವರ್ತನೆ ಮುಂದುವರಿಸುತ್ತಾನೆ ಮತ್ತು ಮನುಷ್ಯರೊಂದಿಗೆ ಪರಸ್ಪರ ಸಹಾನುಭೂತಿ ಮತ್ತು ಕಾರುಣ್ಯದಿಂದ ವರ್ತಿಸಲು ಉಪದೇಶಿಸಿದ್ದಾನೆ.

ಮುಸ್ಲಿಮರ ಧಾರ್ಮಿಕವಾದ ಕಡ್ಡಾಯ ಕರ್ತವ್ಯವೇನೆಂದರೆ ಅವರು ಅನ್ಯ ಜನರ ಆವಶ್ಯಕತೆಗಳನ್ನು ಅವರ ಧರ್ಮ, ಸಂಸ್ಕೃತಿ ಅಥವಾ ವಂಶವನ್ನು ಪರಿಗಣಿಸದೆ ನೆರವೇರಿಸಬೇಕು ಮತ್ತು ಅವರು ಯಾವಾಗಲೂ ಅನ್ಯರ ಭಾವನೆಗಳ ಮತ್ತು ಆವಶ್ಯಕತೆಗಳ ಬಗ್ಗೆ ಕರುಣೆಯಿಂದ ವರ್ತಿಸಬೇಕು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅಲ್ಲಾಹನ ಸೃಷ್ಟಿಗಳಲ್ಲಿ ಅತ್ಯುತ್ಕೃಷ್ಟರಾಗಿದ್ದರು. ಅವರಿಗೆ ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಮದೀನಕ್ಕೆ ವಲಸೆ ಹೋದ ನಂತರ ಅವರನ್ನು ಮದೀನದ ಮುಖ್ಯ ಆಡಳಿತಾಧಿಕಾರಿಯಾಗಿ ಚುನಾಯಿಸಲಾಯಿತು. ಅವರ ನಾಯಕತ್ವದಲ್ಲಿ ಅಂಗೀಕರಿಸಲ್ಪಟ್ಟ ಒಪ್ಪಂದವು ಮಾನವೀಯ ಹಕ್ಕುಗಳ ಅತ್ಯುತ್ತಮ ಪ್ರಣಾಳಿಕೆಯಾಗಿತ್ತು. ಅದು ವಿವಿಧ ಜನಾಂಗಗಳ ಮಧ್ಯೆ ಶಾಂತಿ ಸೌಹಾರ್ದಭರಿತ ಆಡಳಿತೆ ನಡೆಸುವ ಪ್ರಣಾಳಿಕೆ ಆಗಿತ್ತು.

ಹಝ್ರತ್ ಪೈಗಂಬರರು(ಸ) ನಿಷ್ಪಕ್ಷಪಾತ ನ್ಯಾಯ ವ್ಯವಸ್ಥೆಯನ್ನು ಸ್ಥಾಪಿಸಿದರು. ಐಶ್ವರ್ಯವಂತರಾದ ಶಕ್ತಿಶಾಲಿ ಜನರಿಗೂ ಬಲಹೀನರಾದ ಬಡವರಿಗೂ ಒಂದೇ ನಿಯಮ ಅನ್ವಯಿಸುವುದು ಎಂದು ಸ್ಪಷ್ಟಪಡಿಸಿದರು. ಎಲ್ಲ ಜನರು ದೇಶದ ನಿಯಮಗಳ ಪ್ರಕಾರ ಸಮಾನರಾಗಿ ಗಣಿಸಲ್ಪಡುವರು. ಹಝ್ರತ್ ಪೈಗಂಬರರು(ಸ) ಹೇಳಿದರು: ತನ್ನ ಕುಟುಂಬದವರಿಗೂ ಈ ನಿಯಮಗಳೇ ಅನ್ವಯಿಸುವುವು.

ಹಝ್ರತ್ ಪೈಗಂಬರರು(ಸ) ಅತ್ಯುತ್ತಮದ ಶೈಕ್ಷಣಿಕ ವ್ಯವಸ್ಥೆಯನ್ನು ಸ್ಥಾಪಿಸಿದರು. ಅದರ ಮೂಲಕ ಸಮಾಜದ ಬೌದ್ಧಿಕ ಮಟ್ಟ ವರ್ಧಿಸಿತು. ವಿದ್ಯಾವಂತರು ಅವಿದ್ಯಾವಂತರಿಗೆ ವಿದ್ಯೆ ಕಲಿಸಲು ನಿರ್ದೇಶಿಸಲಾಯಿತು. ಬಲಹೀನರಾದ ಜನರು ವಿದ್ಯೆ ಕಲಿತು ತಮ್ಮ ಸ್ವಂತ ಪಾದಗಳಲ್ಲಿ ನಿಲ್ಲಲು ಶಕ್ತವಾಗುವಂತೆ ಮಾಡಲು ಮತ್ತು ಪ್ರಗತಿ ಗಳಿಸಲು ಹೀಗೆ ವ್ಯವಸ್ಥೆ ಮಾಡಲಾಯಿತು. ಹಝ್ರತ್ ಪೈಗಂಬರರು(ಸ) ವಾಣಿಜ್ಯ ಮತ್ತು ಆರ್ಥಿಕ ವ್ಯವಹಾರಗಳಿಗೆ ನಿಯಮಗಳನ್ನು ರೂಪಿಸಿದರು.

ಗುಲಾಮಗಿರಿ ಜಾರಿಯಲ್ಲಿದ್ದ ಆ ಕಾಲದಲ್ಲಿ ಮತ್ತು ಗುಲಾಮರ ಮಾಲಿಕರು ಗುಲಾಮರೊಂದಿಗೆ ಕ್ರೂರವಾಗಿ ವರ್ತಿಸುತ್ತಿದ್ದ ಆ ಕಾಲಘಟ್ಟದಲ್ಲಿ ಇಸ್ಲಾಮಿನ ಪೈಗಂಬರರು ಒಂದು ಕ್ರಾಂತಿಯನ್ನುಂಟು ಮಾಡಿದರು. ಗುಲಾಮರ ಮಾಲಿಕರು ತಮ್ಮ ಗುಲಾಮರೊಂದಿಗೆ ಅನುಕಂಪದಿಂದ ವರ್ತಿಸಬೇಕೆಂದೂ ಅವರೊಂದಿಗೆ ಗೌರವದಿಂದ ವರ್ತಿಸಿ ಕೊನೆಗೆ ಅವರನ್ನು ವಿಮೋಚಿಸಬೇಕೆಂದೂ ಹಝ್ರತ್ ಪೈಗಂಬರರು ಆದೇಶಿಸಿದರು.

ನಗರದ ರಸ್ತೆಗಳು ವಿಶಾಲಗೊಳಿಸಲ್ಪಟ್ಟು ಉತ್ತಮಪಡಿಸಲಾದುವು. ನಗರ ನೈರ್ಮಲೀಕರಣ ವ್ಯವಸ್ಥೆ ಮಾಡಲಾಯಿತು ಮತ್ತು ಜನರಿಗೆ ಆರೋಗ್ಯ ಸೂತ್ರಗಳನ್ನು ಕಲಿಸಲಾಯಿತು.

ಅರಬ್ ಜನತೆಯಲ್ಲಿ ಪ್ರಥಮ ಬಾರಿಗೆ ಒಂದು ಕ್ರಮಬದ್ಧ ಪೌರ ಸಮಾಜ ವ್ಯವಸ್ಥೆ ರೂಪಿಸಲ್ಪಟ್ಟಿತು. ಆ ಮೂಲಕ ನಗರವಾಸಿಗಳು ಪ್ರಯೋಜನಕರ ಸಕ್ರಿಯ ಸಮಾಜದ ಸದಸ್ಯರಾದರು.

ಅನಂತರ ಹಝ್ರತ್ ಖಲೀಫರು ಇಂದಿನ ಕಾಲದಲ್ಲಿ ಇಸ್ಲಾಮಿನ ಪೈಗಂಬರರನ್ನು ತಪ್ಪಾಗಿ ಚಿತ್ರೀಕರಿಸುವ ಬಗ್ಗೆ ಹೇಳಿದರು. ಅವರು ಹೇಳಿದರು: ವಾಸ್ತವಿಕವಾಗಿ ಹಝ್ರತ್ ಪೈಗಂಬರರು(ಸ) ತನ್ನ ಜೀವಿತದ ಪ್ರತಿಯೊಂದು ಕ್ಷಣವನ್ನು ಎಲ್ಲ ಜನರ ಹಕ್ಕುಗಳನ್ನು ಪುಷ್ಟೀಕರಿಸುತ್ತಾ ಕಳೆದರು. ಅವರು ಮಾನವರ ಹಕ್ಕುಗಳ ಬಗ್ಗೆ ಶಾಶ್ವತ ಪ್ರಣಾಳಿಕೆ ಸ್ಥಾಪಿಸಿದರು.

ಇಸ್ಲಾಮಿನ ಪೈಗಂಬರರು(ಸ) ಅನ್ಯರ ನಂಬಿಕೆಗಳನ್ನೂ ಭಾವನೆಗಳನ್ನೂ ಗೌರವಿಸಲು ಕಲಿಸಿದರು.

ಇಂದಿನ ಕಾಲದಲ್ಲಿ ದುಃಖಕರವಾಗಿರುವುದೇನೆಂದರೆ ಸ್ವಾತಂತ್ರ್ಯ ಮತ್ತು ಮನೋರಂಜನೆಯ ಹೆಸರಲ್ಲಿ ಗೌರವ ನೀಡುವಿಕೆಯನ್ನು ಬಲಿಯರ್ಪಿಸಲಾಗುತ್ತಿದೆ.

ಧರ್ಮಗಳ ಸ್ಥಾಪಕರು ಸಹ ಪರಿಹಾಸ ಮತ್ತು ಅವಹೇಳನ ಗೊಳಿಸಲ್ಪಡುವುದರಿಂದ ಇಂದಿನ ಕಾಲದಲ್ಲಿ ಮುಕ್ತರಾಗಿಲ್ಲ.

ಪವಿತ್ರ ಖುರ್ಆನ್ ಉಪದೇಶಿಸಿರುವುದೇನೆಂದರೆ ಮುಸ್ಲಿಮರು ಅನ್ಯರು ಆರಾಧಿಸುವ ವಿಗ್ರಹಗಳನ್ನು ಕೂಡ ನಿಂದಿಸಬಾರದೆಂದು. ಏಕೆಂದರೆ ಹಾಗೆ ನಿಂದಿಸಿದರೆ ಅನ್ಯರು ಸರ್ವಶಕ್ತನಾದ ಅಲ್ಲಾಹನನ್ನು ನಿಂದಿಸುವರು ಮತ್ತು ಸಮಾಜದಲ್ಲಿ ಶಾಂತಿಯು ಕೆಟ್ಟು ಹೋಗುವುದು.

ಹಝ್ರತ್ ಪೈಗಂಬರರು(ಸ) ಬಡವರ ಮತ್ತು ಸವಲತ್ತು ವಂಚಿತರ ಏಳಿಗೆಗೋಸ್ಕರ ಅನೇಕ ಯೋಜನೆಗಳನ್ನು ಕೈಗೊಂಡಿದ್ದರು. ಅವರು ಹೇಳಿದರು: ಒಬ್ಬ ನೀತಿವಂತ ಬಡವ ಅನ್ಯರ ಬಗ್ಗೆ ಅನುಕಂಪ ಹೊಂದಿದವನಾಗಿದ್ದರೆ ಅನ್ಯರ ಭಾವನೆಗಳ ಬಗ್ಗೆ ನಿರ್ಲಕ್ಷ್ಯತೆಯಿಂದ ವರ್ತಿಸುವ ಶ್ರೀಮಂತನಿಗಿಂತ ಹೆಚ್ಚು ಮೌಲ್ಯವುಳ್ಳವನಾಗಿದ್ದಾನೆ.

ಹಝ್ರತ್ ಪೈಗಂಬರರು(ಸ) ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಸಹ ಹೆಚ್ಚಿನ ಗಮನ ಹರಿಸಿ ಸಮಾಜದ ಬಡ ನಾಗರಿಕರ ಭಾವನೆಗಳಿಗೆ ನೋವಾಗದಂತೆ ನೋಡುತ್ತಿದ್ದರು. ಉದಾಹರಣೆಗೆ, ಹಝ್ರತ್ ಪೈಗಂಬರರು(ಸ) ಮುಸ್ಲಿಮರೊಂದಿಗೆ ಸತ್ಕಾರ ಕೂಟಗಳಿಗೆ ಬಡವರನ್ನೂ ಬಲಹೀನರನ್ನೂ ಆಮಂತ್ರಿಸಲು ಹೇಳಿರುವರು.

ಇಸ್ಲಾಮಿನ ಪೈಗಂಬರರು(ಸ) ತನ್ನ ಅನುಯಾಯಿಗಳೊಂದಿಗೆ ಗುಲಾಮರನ್ನು ವಿಮೋಚಿಸಬೇಕೆಂದು ಯಾವಾಗಲೂ ಹೇಳುತ್ತಾ ಇದ್ದರು. ಹಾಗೆ ಮಾಡಲು ಸಾಧ್ಯವಾಗದಿದ್ದರೆ ಗುಲಾಮರಿಗೆ ಅವರ ಮಾಲಿಕರು ಬಳಸುವ ಪೋಷಾಕನ್ನೂ ಆಹಾರವನ್ನೂ ನೀಡಬೇಕೆಂದು ಹೇಳಿದರು.

ಹಝ್ರತ್ ಖಲೀಫರು ಇಸ್ಲಾಮಿನಲ್ಲಿ ಮಹಿಳೆಯರಿಗಿರುವ ಹಕ್ಕುಗಳ ಬಗ್ಗೆ ವಿವರಿಸಿದರು. ಇಸ್ಲಾಮ್ ಮಹಿಳೆಯರಿಗೆ ಅವರ ಹಕ್ಕುಗಳನ್ನು ನೀಡುವುದಿಲ್ಲ ಎಂದು ಆಪಾದಿಸಲಾಗುತ್ತಿದೆ. ಆದರೆ ಇಂತಹ ಆರೋಪ ವಾಸ್ತವಿಕ ಸತ್ಯದಿಂದ ಅತ್ಯಂತ ದೂರವಿರುವುದಾಗಿದೆ ಎಂದು ಅವರು ಹೇಳಿದರು.

ಮಹಿಳೆಯರು ತೀರಾ ಗೌರವಿಸಲ್ಪಡದ ಒಂದು ಕಾಲಘಟ್ಟದಲ್ಲಿ ಹಝ್ರತ್ ಪೈಗಂಬರರು(ಸ) ತನ್ನ ಅನುಯಾಯಿಗಳೊಂದಿಗೆ ಬಾಲಿಕೆಯರಿಗೆ ವಿದ್ಯಾಭ್ಯಾಸ ನೀಡುವ ಬಗ್ಗೆ ಮತ್ತು ಅವರಿಗೆ ಗೌರವ ನೀಡುವುದನ್ನು ಖಾತರಿಪಡಿಸುವ ಬಗ್ಗೆ ಉಪದೇಶಿಸಿದರು. ಹಝ್ರತ್ ಪೈಗಂಬರರು(ಸ) ಹೇಳಿದರು: ಒಬ್ಬನು ತನ್ನ ಮೂವರು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನೂ ಮಾರ್ಗದರ್ಶನವನ್ನೂ ನೀಡಿದರೆ ಅವನು ನಿಶ್ಚಯವಾಗಿಯೂ ಸ್ವರ್ಗವನ್ನು ಪ್ರವೇಶಿಸುವನು.

ಇಸ್ಲಾಮಿನ ಪೈಗಂಬರರು(ಸ) ಹೇಳಿದರು: ಸ್ವರ್ಗವನ್ನು ಪ್ರವೇಶಿಸಲು ಇರುವ ಮಾರ್ಗ ಸಮಾಜದ ಮಹಿಳೆಯರಿಗೆ ವಿದ್ಯಾಭ್ಯಾಸವನ್ನು ನೀಡಿ ಅವರಲ್ಲಿ ನೈತಿಕ ಮೌಲ್ಯಗಳನ್ನು ಅಳವಡಿಸುವ ಮೂಲಕವಾಗಿದೆ. ಈ ಉಪದೇಶದ ಬೆಳಕಿನಲ್ಲಿ ಅಹ್ಮದೀ ಮುಸ್ಲಿಮ್ ಬಾಲಿಕೆಯರು ಮಾನವರ ಸೇವೆ ಮಾಡಲು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಬಾಲಿಕೆಯರಿಗೆ ಬಾಲಕರ ಹಾಗೆಯೇ ವಿದ್ಯಾಭ್ಯಾಸ ದೊರೆಯುವುದರ ಬಗ್ಗೆ ನಾವು ಖಾತರಿಪಡಿಸುತ್ತೇವೆ. ಆದುದರಿಂದ ಪ್ರಗತಿ ಹೊಂದುತ್ತಿರುವ ಲೋಕದಲ್ಲಿ ಅಹ್ಮದೀ ಮುಸ್ಲಿಮ್ ಬಾಲಿಕೆಯರ ವಿದ್ಯಾಭ್ಯಾಸ ಮಟ್ಟ ಶೇಕಡ 99ರಷ್ಟಿದೆ.

ಇಸ್ಲಾಮ್ ಮಹಿಳೆಯರಿಗೆ ಲೋಕದ ಚರಿತ್ರೆಯಲ್ಲಿ ಪ್ರಥಮ

ಬಾರಿ ವಾರಸುದಾರಿಕೆಯ ಹಕ್ಕು, ವಿವಾಹ ವಿಚ್ಛೇದನೆಯ ಹಕ್ಕು ಮತ್ತು ಬೇರೆ ಅನೇಕ ಹಕ್ಕುಗಳನ್ನು ನೀಡಿತು.

ಹಝ್ರತ್ ಪೈಗಂಬರರು(ಸ) ನೆರೆಹೊರೆಯವರ ಹಕ್ಕುಗಳ ಬಗ್ಗೆ ಬಹಳ ಒತ್ತಿ ಹೇಳಿದರು. ಅವರು ವಿದ್ಯಾಭ್ಯಾಸ ಮಾಡುವ ಬಗ್ಗೆ ಅತ್ಯಂತ ಹೆಚ್ಚು ಒತ್ತಿಹೇಳಿದರು. ಇದಕ್ಕೆ ಒಂದು ಉದಾಹರಣೆಯಾಗಿ ಹಝ್ರತ್ ಖಲೀಫರು ಹೀಗೆ ಹೇಳಿದರು: ಹಝ್ರತ್ ಪೈಗಂಬರರು(ಸ) ತನ್ನ ಪ್ರಥಮ ಯುದ್ಧದ ನಂತರ ಸೆರೆಯಾಳುಗಳಲ್ಲಿ ವಿದ್ಯಾಭ್ಯಾಸ ಕಲಿತವರು ಅನ್ಯರಿಗೆ ವಿದ್ಯೆ ಕಲಿಸುವರಾದರೆ ಅವರನ್ನು ಬಿಡುಗಡೆಗೊಳಿಸುವುದಾಗಿ ಹೇಳಿದರು.

ಹಝ್ರತ್ ಖಲೀಫರು ಹೇಳಿದರು: ಇಸ್ಲಾಮ್ ಹಿಂಸೆಯ ಧರ್ಮ ಎಂದು ಪದೇ ಪದೇ ಆಪಾದಿಸಲ್ಪಡುತ್ತದೆ. ಇದು ಸತ್ಯದಿಂದ ಅತ್ಯಂತ ದೂರವಾಗಿರುವ ಹೇಳಿಕೆಯಾಗಿದೆ. ಪವಿತ್ರ ಖುರ್‌ಆನ್ ನಂಬಿಕೆಯ ಮತ್ತು ಮನಸಾಕ್ಷಿಯ ಸ್ವಾತಂತ್ರ್ಯ ನೀಡುತ್ತಿದೆ.

ಆದಿಕಾಲೀನ ಮುಸ್ಲಿಮರು ಯುದ್ಧ ಮಾಡಿದುದು ಯಾವಾಗಲೂ ಆಕ್ರಮಣಗಳನ್ನು ಪ್ರತಿರೋಧಿಸಲಿಕ್ಕಾಗಿತ್ತು; ದೀರ್ಘ ಕಾಲೀನ ಶಾಂತಿ ಸ್ಥಾಪಿಸಲು ಮತ್ತು ಜನರು ಸ್ವಾತಂತ್ರ್ಯದೊಂದಿಗೆ ಜೀವಿಸಲಿಕ್ಕೋಸ್ಕರವಾಗಿತ್ತು.

ಹಿಂಸಾಚಾರ ಮಾಡುವ ಮುಸ್ಲಿಮನು ಇಸ್ಲಾಮ್ ಧರ್ಮ ತತ್ವಗಳಿಂದ ಬಹಳ ದೂರ ಸರಿದವನಾಗಿದ್ದಾನೆ. ಭಯೋತ್ಪಾದಕರ ಹಿಂಸಾಚಾರಗಳು ಶಕ್ತಿಯನ್ನು, ಸಂಪತ್ತನ್ನು, ಭೌಗೋಳಿಕ ಮತ್ತು ರಾಜಕೀಯವಾದ ಸ್ವಾರ್ಥ ಲಾಭಗಳನ್ನು ಗಳಿಸಲಿಕ್ಕೋಸ್ಕರವಾಗಿರುತ್ತದೆ.

ಇಸ್ಲಾಮಿನ ವಿರುದ್ಧ ಮಾಡಲಾಗುವ ಇನ್ನೊಂದು ಆರೋಪ, ಅದು ಹಿಂದುಳಿಕೆ ಪ್ರತಿಪಾದಿಸುವ ಪುರಾತನ ಧರ್ಮವೆಂದೂ ಬೌದ್ಧಿಕ ಪ್ರಗತಿಯನ್ನು ಪ್ರೋತ್ಸಾಹಿಸುವುದಿಲ್ಲವೆಂದೂ ಆಗಿದೆ. ಇಂತಹ ಆರೋಪಗಳು ಕೇವಲ ಕಟ್ಟುಕಥೆಗಳನ್ನು ಆಧಾರವಾಗಿಟ್ಟುಕೊಂಡು ಮಾಡಲಾಗುತ್ತದೆಯೇ ಹೊರತು ವಾಸ್ತವಿಕತೆಯನ್ನು ಅವಲಂಬಿಸಿ ಮಾಡಲ್ಪಡುವವುಗಳಲ್ಲ.

ಇದು ನಿರಾಧಾರ ಆರೋಪವಾಗಿದೆ. ಪವಿತ್ರ ಖುರ್‌ಆನ್ ವಿದ್ಯಾಭ್ಯಾಸದ ಪ್ರಾಮುಖ್ಯತೆಯನ್ನು ಈ ಕೆಳಗಿನ ಪ್ರಾರ್ಥನೆ ಮಾಡಲು ಕಲಿಸಿ ಉಪದೇಶಿಸಿದೆ: **"ಹೇ ನನ್ನ ಪ್ರಭು, ನನ್ನ ಜ್ಞಾನವನ್ನು ವರ್ಧಿಸು."**

ಈ ಪ್ರಾರ್ಥನೆ ಮುಸ್ಲಿಮರನ್ನು ಜ್ಞಾನವನ್ನು ಅನ್ವೇಷಿಸಲು ಪ್ರೋತ್ಸಾಹಿಸುತ್ತದೆ. ವಾಸ್ತವಿಕವೇನೆಂದರೆ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರು(ಸ) ಮುಸ್ಲಿಮ್ ವಿಜ್ಞಾನಿಗಳ, ಆವಿಷ್ಕಾರಗಾರರ, ದಾರ್ಶನಿಕರ ಪೀಳಿಗೆಗಳಿಗೆ ಸ್ಫೂರ್ತಿ ನೀಡಿದರು. ಆ ಜನರು ಲೋಕವನ್ನು ಬದಲಾವಣೆಗೊಳ್ಳುವಂತೆ ಮಾಡಿದರು.

ಹಝ್ರತ್ ಖಲೀಫರು ಇಬ್ನು ಹೈತಮ್ ಬಗ್ಗೆ ಪ್ರಸ್ತಾಪಿಸಿದರು. ಆಧುನಿಕ ಕಾಲದ ಓಪ್ಟಿಕ್ಸ್ (OPTICS – ದೃಗ್‌ವಿಜ್ಞಾನ) ಇದರ ಪ್ರಥಮ ಸಂಶೋಧಕ ಅವರಾಗಿದ್ದರು ಎಂಬುದನ್ನು ಯುನೆಸ್ಕೋ ಅಂಗೀಕರಿಸಿದೆ. ಕೆಮರ ಶಬ್ದದ ಮೂಲ ಅರಬಿ ಭಾಷೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಒಬ್ಬ ಮುಸ್ಲಿಮ್ ಭೂನಕಾಶೆ ತಜ್ಞ ಅತ್ಯಂತ ವಿಶಾಲವಾದ, ನಿಖರವಾದ ಜಾಗತಿಕ ಭೂನಕಾಶೆಯನ್ನು ಸೃಷ್ಟಿಸಿದರು. ಅದನ್ನು ಶತಮಾನಗಳ ಕಾಲ ಸಂಚಾರಿಗಳು ಬಳಸುತ್ತಿದ್ದರು.

ಹಝ್ರತ್ ಖಲೀಫರು, ಮುಸ್ಲಿಮ್ ಚಿಕಿತ್ಸಕರು, ವೈದ್ಯಕೀಯ ಮತ್ತು ಜೈವ ವಿಜ್ಞಾನ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ವಿವರಿಸಿದರು. ಮುಸ್ಲಿಮ್ ವಿಜ್ಞಾನಿ ಜಾಬಿರ್ ಇಬ್ನು ಹಯ್ಯಾನ್ ಕೆಮಿಸ್ಟ್ರಿ (ರಸಾಯನ ಶಾಸ್ತ್ರ)ಯಲ್ಲಿ ಕ್ರಾಂತಿಕಾರಿ ಸಂಶೋಧನೆಗಳನ್ನು ಮಾಡಿದರು. ಅವರು ಆವಿಷ್ಕರಿಸಿದ ಅನೇಕ ಸಂಸ್ಕರಣ ವಿಧಾನಗಳು ಇಂದು ಸಹ ಬಳಸಲ್ಪಡುತ್ತಿವೆ. ಅಲ್‌ಜಿಬ್ರಾ ಗಣಿತಶಾಸ್ತ್ರಕ್ಕೆ ಮುಸ್ಲಿಮರು ನೀಡಿದ ಕೊಡುಗೆಯಾಗಿದೆ.

ಹಝ್ರತ್ ಖಲೀಫರು ನ್ಯೂಯೋರ್ಕ್ ಟೈಮ್ಸ್‌ನಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ ಎಂದು ಹೇಳಿದರು: ಮುಸ್ಲಿಮರು ಎಂತಹ ಒಂದು ಸಮಾಜವನ್ನು ಸೃಷ್ಟಿಸಿದರು ಎಂದರೆ ಅದು ಮಧ್ಯ ಯುಗದಲ್ಲಿ ಲೋಕದ ವೈಜ್ಞಾನಿಕ ಕೇಂದ್ರವಾಗಿತ್ತು.

ಇದರಿಂದ ತಿಳಿಯುವುದೇನೆಂದರೆ ಜ್ಞಾನದ ಗಡಿಗಳನ್ನು ಮುಂದಕ್ಕೆ ತಳ್ಳಲು ಮತ್ತು ಜ್ಞಾನಾರ್ಜನೆಯಲ್ಲಿ ಪ್ರಗತಿ ಗಳಿಸುವ ಮೌಲ್ಯಗಳ ಬಗ್ಗೆ ಧಾರಾಳವಾಗಿ ಇಸ್ಲಾಮ್ ಪ್ರತಿಪಾದಿಸಿತು.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ತನ್ನ ಪ್ರಾರಂಭ ಘಟ್ಟದಿಂದಲೇ ಜ್ಞಾನಾರ್ಜನೆ ಬಗ್ಗೆ ಪ್ರೋತ್ಸಾಹ ನೀಡುತ್ತಾ ಇದೆ. ನೋಬೆಲ್ ಪ್ರೈಝ್ ಗಳಿಸಿದ ಪ್ರಥಮ ಮುಸ್ಲಿಮ್ ವಿಜ್ಞಾನಿ ಡಾಕ್ಟರ್ ಅಬ್ದುಸ್ಸಲಾಮ್ ಅಹ್ಮದಿಯಾಗಿದ್ದರು. ಅವರು ಹೀಗೆ ಹೇಳಿದರು: ಪವಿತ್ರ ಖುರ್‌ಆನ್‌ನಲ್ಲಿ ಅಂದಾಜು 750 ವಚನಗಳು ವಿಜ್ಞಾನದೊಂದಿಗೆ ನೇರವಾಗಿ ಸಂಬಂಧ ಹೊಂದಿವೆ. ಅವುಗಳು ಪ್ರಕೃತಿ ಮತ್ತು ವಿಶ್ವದ ಬಗ್ಗೆ ನಮ್ಮ ಜ್ಞಾನವನ್ನು ವರ್ಧಿಸಿತು.

ಖಲೀಫರು ಹೇಳಿದರು: ಅಹ್ಮದಿಯಾ ಜಮಾಅತಿನ ತೃತೀಯ ಖಲೀಫರು ಮಹಾನ್ ಮುಸ್ಲಿಮ್ ವಿಜ್ಞಾನಿಗಳ ಮತ್ತು ಶೈಕ್ಷಣಿಕ ತಜ್ಞರ ಹೊಸ ಸೂರ್ಯೋದಯವನ್ನು ಆಶಿಸಿದ್ದರು. ಅವರು ನಮ್ಮ ಜಮಾಅತಿನವರಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರೇಷ್ಠತೆ ಗಳಿಸಿದವರಿಗೆ ಬಂಗಾರದ ಮೆಡಲುಗಳನ್ನು ಕೊಡುವ ಸಂಪ್ರದಾಯ ಜಾರಿಗೊಳಿಸಿದರು.

ಖಲೀಫರು ಹೇಳಿದರು: ಶಿಕ್ಷಣ ನೀಡುವುದು ಬಡತನ ನಿವಾರಣೆಗಿರುವ ಕೀಲಿಗೈ ಆಗಿದೆ. ಇದೇ ಕಾರಣದಿಂದ ಹಝ್ರತ್ ಪೈಗಂಬರರು(ಸ) ಬಡವರಿಗೆ ಅವರ ಶಿಕ್ಷಣಕ್ಕೋಸ್ಕರ ಧನಸಹಾಯ ನೀಡಲು ಒತ್ತಿ ಹೇಳಿದರು.

ಅವರು ಹೇಳಿದರು: ಮುಸ್ಲಿಮರು ಆರಾಧನೆ ಮೂಲಕ ಮಾತ್ರವಲ್ಲ ಮಾನವರಿಗೆ ಸೇವೆ ಸಲ್ಲಿಸುವ ಮೂಲಕ ಅಲ್ಲಾಹನ ಸಂಪ್ರೀತಿ ಗಳಿಸಬೇಕೆಂದು ಆಜ್ಞಾಪಿಸಲ್ಪಟ್ಟಿದ್ದಾರೆ.

ಲೋಕದ ಎಲ್ಲ ಭಾಗಗಳಲ್ಲಿಯೂ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈ ಉದಾತ್ತ ತತ್ವಗಳನ್ನು ನಮ್ಮ ಸಾಮರ್ಥ್ಯಕ್ಕನುಸಾರವಾಗಿ ಅನುಷ್ಠಾನಕ್ಕೆ ಅತ್ಯುತ್ತಮವಾಗಿ ತರುತ್ತಿದೆ.

ಇಸ್ಲಾಮ್ ಪ್ರೀತಿ ಮತ್ತು ಅನುಕಂಪದ ಧರ್ಮ ಎಂದು ನಾವು ನಂಬುತ್ತೇವೆ. ಆದುದರಿಂದ ಜಮಾಅತ್ ಜನರ ಜಾತಿಯನ್ನಾಗಲಿ, ಧರ್ಮವನ್ನಾಗಲಿ ಪರಿಗಣಿಸದೆ ಮಾನವರಿಗೆ ಸೇವೆ ಸಲ್ಲಿಸುತ್ತಿವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶುದ್ಧವಾದ ನೀರನ್ನು ಆಫ್ರಿಕದ ಗ್ರಾಮಗಳಲ್ಲಿ ಪೂರೈಕೆ ಮಾಡುತ್ತಿವೆ. ಆಫ್ರಿಕನ್ ಮಕ್ಕಳು ನೀರನ್ನು ದೂರದ ಹೊಂಡಗಳಿಂದ ಸಂಗ್ರಹಿಸಲು ಮೈಲುಗಟ್ಟಲೆ ಸಂಚರಿಸದೆ ತಮ್ಮ ಗಮನವನ್ನು ವಿದ್ಯಾಭ್ಯಾಸದ ಕಡೆಗೆ ಕೇಂದ್ರೀಕರಿಸಲು ಇದು ಸಹಾಯಕವಾಗುತ್ತದೆ. ಜಮಾಅತ್ ಮಾನವರಿಗೋಸ್ಕರ ಮಾಡುತ್ತಿರುವ ಇತರ ಸೇವೆಗಳ ಬಗ್ಗೆ ಸಹ ಖಲೀಫರು ವಿವರಿಸಿದರು.

ಕೊನೆಗೆ ಖಲೀಫರು ಪ್ರಾರ್ಥಿಸಿದರು: ಮಾನವರು ದುರಾಶೆಗಳನ್ನೂ ಸಂಕುಚಿತ ಸ್ವಾರ್ಥ ಹಿತಗಳನ್ನೂ ಕೈಬಿಟ್ಟು ದುರ್ಭಾಗ್ಯಶಾಲಿಗಳಾದ ಮಾನವರ ನೋವನ್ನು ನಿವಾರಿಸಲು ಪ್ರಯತ್ನಿಸುವವರಾಗಲಿ.

ಹಝ್ರತ್ ಖಲೀಫರು ಆ ಸಭೆಗೆ ಆಗಮಿಸಿದ ಅತಿಥಿಗಳಿಗೆ ಧನ್ಯವಾದ ಅರ್ಪಿಸಿದರು. ಮೌನ ಪ್ರಾರ್ಥನೆಯ ನಂತರ ಸಭೆ ಮುಕ್ತಾಯಗೊಂಡಿತು. **(AL HAKAM, LONDON: 11-10-2019).**

♦

# ಇಸ್ಲಾಮ್: ಮಹಿಳೆಯರ ಹಕ್ಕುಗಳ ನೈಜ ರಕ್ಷಕ



* ಮೌಲಾನ ಇಮ್ತಿಯಾಝ್ ಅಹ್ಮದ್

**(2019 ಕೆನಡಾ ವಾರ್ಷಿಕ ಸಮ್ಮೇಳನದಲ್ಲಿ ಮಾಡಿದ ಭಾಷಣ)**

ಒಂದು ಕಾಲದಲ್ಲಿ ಒಬ್ಬನು ಮಾತನಾಡುತ್ತಾ, ನಗುತ್ತಾ ಇತರ ಮನುಷ್ಯರ ಹಾಗೆ ಸಾಮಾನ್ಯವಾದ ರೀತಿಯಲ್ಲಿ ಜೀವಿಸುತ್ತಿದ್ದನು. ಆದರೆ ಅವನು ಕೆಲವೊಮ್ಮೆ ಥಕ್ಕನೆ ನಿಷ್ಕಾರಣವಾಗಿ ಅಳುತ್ತಾ ಇದ್ದನು ಮತ್ತು ಕೆಲವು ಸಾರಿ ಪ್ರಜ್ಞಾಶೂನ್ಯನಾಗಿ ಬಿದ್ದುಬಿಡುತ್ತಿದ್ದನು. ನೀನು ಇಷ್ಟು ತೀವ್ರವಾಗಿ ಏಕೆ ಅಳುತ್ತಿರುವೆ? ಎಂದು ಜನರು ಅವನನ್ನು ವಿಚಾರಿಸುತ್ತಿದ್ದರೂ ಅವನು ಎಂದೂ ಉತ್ತರ ನೀಡುತ್ತಿರಲಿಲ್ಲ.....

ಒಂದು ದಿನ ಅವನು ದಾರುಣವಾಗಿ ನೋವನ್ನು ಅನುಭವಿಸಿದಾಗ ಅವನಿಗೆ ಸಹಿಸಲಾಗದೆ, ತನ್ನ ಗೋಳಾಟದ ನೈಜ ಕಾರಣವನ್ನು ಹೀಗೆ ವಿವರಿಸಿದನು: ನನಗೊಬ್ಬ ಪುತ್ರಿ ಜನಿಸಿದ ಸಮಾಚಾರ ಲಭಿಸಿದಾಗ ನಾನು ಅವಳನ್ನು ಜೀವಂತವಾಗಿ ಹೂತು ಹಾಕಲು ಇಚ್ಛಿಸಿದೆನು. ಅದು ನನ್ನ ಬಗ್ಗೆ ಪ್ರತೀಕ್ಷಿಸಲ್ಪಡುವುದಾಗಿತ್ತು. ಏಕೆಂದರೆ ನನ್ನ ಹಿರಿಯರು ಹಾಗೆ ಮಾಡಿದ್ದರು. ಹೆಣ್ಣು ಶಿಶುವನ್ನು ಅದು ಜನಿಸಿದ ಕೂಡಲೆ ಕೊಲ್ಲುವುದು ಉತ್ತಮವೆಂದು ಗಣಿಸಲಾಗುತ್ತಿತ್ತು. ನಮ್ಮ ಸಂಸ್ಕೃತಿ ಮತ್ತು ನಮ್ಮ ಆಚಾರ ಮತ್ತು ಪರಂಪರೆ, ನಾನು ನನ್ನ ಮಗಳನ್ನು ಅವಳು ಹುಟ್ಟಿದ ಕೂಡಲೆ ಹೂಳಬೇಕೆಂದು ಆವಶ್ಯಪಡುತ್ತಿತ್ತು. ಆದರೆ ನಾನು ನನ್ನ ಮಗುವಿನ ಬಗ್ಗೆ ಉತ್ತಮ ಭಾವನೆಗಳನ್ನು ಹೊಂದಿದುದರಿಂದ ನನಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಸಮಯ ಕಳೆದಂತೆ ನನ್ನ ಮಗಳು ಬೆಳೆದಳು. ಪ್ರತಿದಿನ ಅವಳನ್ನು ಕೊಲ್ಲಲು ನನ್ನ ಭಾವನೆ ಆವಶ್ಯಪಡುತ್ತಿತ್ತು. ಆದರೆ ನನ್ನ ಪಿತೃ ಸ್ನೇಹ ಆ ಆಲೋಚನೆಯ ಜೊತೆಗೆ ಹೋರಾಡಿ ಆ ಯೋಚನೆಯನ್ನು ಸ್ಥಗಿತಗೊಳಿಸುತ್ತಿತ್ತು. ಕೊನೆಗೆ ಅವಳು ತರುಣಿಯಾದಾಗ ಅವಳು ಓಡಿ ಹೋಗಿ ಕುಟುಂಬಕ್ಕೆ ಅಪಕೀರ್ತಿ ತರುವಳೆಂಬ ಯೋಚನೆಗಳು ಪ್ರತಿದಿನ ಪ್ರತಿ ನಿಮಿಷ ನನ್ನನ್ನು ಕಾಡಲು ತೊಡಗಿದುವು. ಆ ಯೋಚನೆಗಳು ಸಹಿಸಲಾರದಷ್ಟು ಹೆಚ್ಚಾದುವು. ನನಗೆ ವಿಶ್ರಾಂತಿ ಪಡೆಯಲಾಗಲಿ, ನಿದ್ರಿಸಲಾಗಲಿ, ಆಹಾರ ತಿನ್ನಲಿಕ್ಕಾಗಲಿ ಸಾಧ್ಯವಾಗಲಿಲ್ಲ. ಒಂದು ದಿನ ನಾನು ನನ್ನ ಪತ್ನಿಯೊಂದಿಗೆ ನನ್ನ ಮಗಳಿಗೆ ಉತ್ತಮ ಪೋಷಾಕು ಧರಿಸಲು ನೀಡುವಂತೆ ಮತ್ತು ಅವಳನ್ನು ಹೊರಗೆ ಹೋಗಲು ಸಿದ್ಧಪಡಿಸುವಂತೆ ಹೇಳಿದೆ. ನಾನು ನನ್ನ ಮಗಳನ್ನು ಅವಳ ಸ್ನೇಹಿತೆಯರೊಂದಿಗೆ ಆಟವಾಡಲು ಕರೆದುಕೊಂಡು ಹೋಗುತ್ತೇನೆ ಎಂದು ಮಗಳಿಗೆ ಹೇಳಲು ಹೇಳಿದೆ. ನನ್ನ ಪತ್ನಿ ನಾನು ಹೇಳಿದಂತೆ ಮಾಡಿದಳು. ಅವಳು ನನ್ನ ಉದ್ದೇಶವನ್ನು ಹೇಗೆಯೋ ಗ್ರಹಿಸಿದಳು. ಅವಳು ನನ್ನ ಮಗಳ ತಲೆ ಬಾಚುವಾಗ, ಅವಳಿಗೆ ಪೋಷಾಕು ತೊಡಿಸುವಾಗ ಮೌನವಾಗಿ ಅಳುತ್ತಿದ್ದಳು. ಆದರೆ ನಾನು ಮಗಳನ್ನು ಹೊರಗೆ ಕರೆದುಕೊಂಡು ಹೋಗುವೆನೆಂದು ತಿಳಿದುಕೊಂಡು ನನ್ನ ಮಗಳು ಸಂತೋಷಪಡುತ್ತಿದ್ದಳು. ನಾನು ನನ್ನ ಮಗಳನ್ನು ಹೊರಗೆ ಕರೆದುಕೊಂಡು ಹೋಗಲು ಸಿದ್ಧನಾದಾಗ ನನ್ನ ಪತ್ನಿ ಸ್ವಲ್ಪ ಧೈರ್ಯ ಹೊಂದಿ ನನ್ನ ಬಳಿಗೆ ಬಂದು ಹೇಳಿದಳು: "ನೀವು ನಿಮ್ಮ ಪಿತೃ ಸ್ನೇಹದ ನಂಬಿಕೆಯನ್ನು ಕಳೆದುಕೊಳ್ಳಬೇಡಿರಿ."

ನಾನು ನನ್ನ ಮಗಳೊಂದಿಗೆ ಮಾರ್ಗದಲ್ಲಿ ಮುಂದೆ ಸಾಗಿದೆ. ನಾನು ಯಾವುದೇ ಯೋಜನೆ ಮಾಡಿರಲಿಲ್ಲ. ನನ್ನ ಮನಸ್ಸು ತಳಮಳಗೊಂಡಿತ್ತು. ನಾನು ಅವಳನ್ನು ಕೊಲ್ಲಬೇಕೆ ಬೇಡವೇ? ಕೊಲ್ಲುವುದಾದರೆ ಹೇಗೆ ಎಂದು ನಾನು ಯೋಚಿಸುತ್ತಿದ್ದೆ. ಥಕ್ಕನೆ ದಾರಿಯಲ್ಲಿ ಒಂದು ಪಾಳು ಬಾವಿಯನ್ನು ನೋಡಿದೆ. ಅದರಲ್ಲಿ ಮೊನಚಾದ ಕಲ್ಲುಗಳಿದ್ದುವು. ನಾನು ಅವಳನ್ನು ಬಾವಿಯೊಳಗೆ ತಳ್ಳಲೇ? ನನ್ನ ಮನಸ್ಸು ಮತ್ತು ಹೃದಯ ಎರಡು ವಿಭಿನ್ನ ದಿಕ್ಕುಗಳಲ್ಲಿ ಸಾಗುತ್ತಿದ್ದುವು. ನನ್ನ ಮನಸ್ಸು ಅವಳನ್ನು ಕೊಲ್ಲಲು ಹೇಳಿತು. ಆದರೆ ನನ್ನ ಹೃದಯ ಅದರ ವಿರುದ್ಧ ಹೋರಾಡುತ್ತಿತ್ತು. ಆದರೆ ಪಿತೃ ಸ್ನೇಹ ಬಲಗುಂದುತ್ತಾ ಹೋಯಿತು. ಆ ಸಂದರ್ಭದಲ್ಲಿ ನನ್ನ ಮಗಳು ನನ್ನ ಸುತ್ತು ಮುತ್ತು ಓಡುತ್ತಾ ತನ್ನ ಸ್ನೇಹಿತೆಯರೊಂದಿಗೆ ಏನೆಲ್ಲ ಮಾಡುವೆನೆಂದು ಹೇಳುತ್ತಾ ಇದ್ದಳು – ಅವಳಿಗೆ ನನ್ನ ಆಂತರಿಕ ಸಂಘರ್ಷದ ಬಗ್ಗೆ ತಿಳಿದಿರಲಿಲ್ಲ. ನನಗೆ ಸಹಿಸಲಾಗಲಿಲ್ಲ. ನಾನು ಅವಳನ್ನು ಹಿಡಿಗೂಡಿ ಬಾವಿಯೊಳಗೆ ತಳ್ಳಿದೆನು. ಅವಳು ಆಶ್ಚರ್ಯಚಕಿತೆಯಾದಳು. ಅವಳು ಇಷ್ಟು ಮಾತ್ರ ಹೇಳಿದಳು: "ನೀವು ನಿಮ್ಮ ನಂಬಿಕೆಯನ್ನು ಕಳೆದುಕೊಳ್ಳಬೇಡಿರಿ." ಅವಳು ಈ ಮಾತನ್ನು ಪುನರಾವರ್ತಿಸುತ್ತಾ ಇದ್ದಳು. ಕೊನೆಗೆ ನಾನು ಆಕೆಯ ಧ್ವನಿ ಆಲಿಸಲಿಲ್ಲ.

ಇದು ಅರಬ್ ದೇಶದ ಜಾಹಿಲಿಯ ಕಾಲದ ಎಂದರೆ ಅಜ್ಞಾನ ಕಾಲದ ಅಸಂಖ್ಯಾತ ವಿವರಿಸಲಾಗದ ಸಂಭವ ಕಥೆಗಳಲ್ಲಿ ಒಂದಾಗಿದೆ. ಇಸ್ಲಾಮ್ ಧರ್ಮದ ಆಗಮನಕ್ಕೆ ಮೊದಲು ಮಹಿಳೆಯರೊಂದಿಗೆ ಹೇಗೆ ವರ್ತಿಸಲಾಗುತ್ತಿತ್ತು ಎಂದು ಇದು ಸೂಚಿಸುತ್ತದೆ.

ಹಝ್ರತ್ ವಾಗ್ದತ್ತ ಮಸೀಹರ(ಅ) ಪುತ್ರಿ ಹಝ್ರತ್ ನವಾಬ್ ಮುಬಾರಕ ಬೇಗಮ್ ಸಾಹಿಬರು ಅರಬ್ ದೇಶದಲ್ಲಿ ಇಸ್ಲಾಮಿನ ಆಗಮನಕ್ಕೆ ಮೊದಲು ಮಹಿಳೆಯರು ಅನುಭವಿಸುತ್ತಿದ್ದ ದಾರುಣ ದೌರ್ಜನ್ಯವನ್ನು ತನ್ನ ಒಂದು ಪದ್ಯದಲ್ಲಿ ಪರಿಪೂರ್ಣವಾಗಿ ಚಿತ್ರಿಸಿದ್ದಾರೆ.

ಹೇ ಸಹೋದರಿ, ನೀನು ಜೀವಂತವಾಗಿ ಹೂಳಲ್ಪಡುತ್ತಿದ್ದ
ಕಾಲವನ್ನು ನೆನಪಿಸು.

ನೀನು ಈ ಲೋಕಕ್ಕೆ ಆಗಮಿಸಿದಾಗ ನಿನ್ನ ಮನೆಗೋಡೆಗಳಿಂದ
ಗೋಳಾಟಗಳು ಎದ್ದೇಳುತ್ತಿದ್ದುವು.

ನಿನಗೆ ಏನಾದರೂ ಬೆಲೆ ಇದ್ದುದಾಗಿ ನೀನು ನೋಡಿರುವಿಯೋ?
ಯೋಚಿಸು, ನಿನಗೆ ಯಾವುದೇ ಗೌರವವಿತ್ತೇ?

ನೀನು ಬದುಕುವ ಭಾಗ್ಯವನ್ನೇನಾದರೂ ಗಳಿಸಿದರೆ ನಿನ್ನ
ಜೀವಿತವನ್ನು ಮೃತ್ಯುಗಿಂತ ಕೆಟ್ಟುದಾಗಿ ಮಾಡಲಾಗುತ್ತಿತ್ತು.

ಹೆಣ್ಣಾಗಿ ಜನಿಸುವುದು ಘೋರ ತಪ್ಪಾಗಿತ್ತು. ಎಲ್ಲ ವಿಧಗಳ
ಬೈಗಳು ಮತ್ತು ಹಿಂಸಾಚಾರ ನಿನ್ನ ಮೇಲೆ ಮಾಡುವುದು
ಅನುಮತಿಸಲ್ಪಟ್ಟಿತ್ತು.

ಹೆಣ್ಣಾಗಿ ಜನಿಸಿದ ಅಪರಾಧ ಎಂದೂ ಕ್ಷಮಿಸಲ್ಪಡಲಿಲ್ಲ.
ಅದಕ್ಕೆ ಶಿಕ್ಷೆ ಮೃತ್ಯು ತನಕ ನಿನ್ನ ಮೇಲೆ ಹೇರಲಾಗುತ್ತಿತ್ತು.

ಯಾವುದೇ ಭಾವನೆಗಳಿಲ್ಲದ ಒಂದು ಕಲ್ಲೆಂಬಂತೆ ನೀನು ಗಣಿಸಲ್ಪಡುತ್ತಿದ್ದೆ.

ನೀನು ವಾರಸುದಾರಿಕೆಯ ಹಕ್ಕಿನ ಹಾಗೆ ಹಂಚಲ್ಪಟ್ಟ ಅಪಮಾನವನ್ನು ನೆನಪಿಸು.

ಇಂತಹ ದಮನಕಾರಿ ಪರಿಸರದಲ್ಲಿ ಅಲ್ಲಾಹನ ಕಾರುಣ್ಯ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣವಾಗಿ ಮಹಿಳೆಯರಿಗೆ ಹಕ್ಕುಗಳು ನೀಡಲ್ಪಟ್ಟವು. ಹಝ್ರತ್ ಮುಬಾರಕ ಬೇಗಮ್ ಸಾಹಿಬ ತನ್ನ ಪದ್ಯದಲ್ಲಿ ಹೀಗೆ ಹೇಳುತ್ತಾರೆ: "ಲೋಕಕ್ಕೆ ಅನುಗ್ರಹದಾಯಕರಾದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಆಗಮಿಸಿ ನಿಮ್ಮ ಹಕ್ಕುಗಳನ್ನು ಪ್ರತಿಪಾದಿಸುವವರೂ ನೀಡುವವರೂ ಆದರು. ಕೊನೆಗೆ ಲೋಕ ನಿಮ್ಮನ್ನು ಮನುಷ್ಯರೆಂದು ಪರಿಗಣಿಸಿತು. ಅವರು ನಿಮ್ಮ ವಿರುದ್ಧ ಮಾಡಲಾಗುವ ದೌರ್ಜನ್ಯಗಳಿಂದ ನಿಮ್ಮನ್ನು ರಕ್ಷಿಸಿದರು.

ನೀವು ನಿಮ್ಮ ಹಿತೈಷಿಗೆ ನೂರಾರು ಸಾರಿ ಶಾಂತಿಯನ್ನೂ ಅನುಗ್ರಹವನ್ನೂ ಕೋರುತ್ತಾ ಇರಬೇಕು. ಅವರು ಪರಿಶುದ್ಧರೂ ಅಲ್ಲಾಹನಿಂದ ಆಯ್ಕೆಗೊಂಡವರೂ ದೊರೆಯೂ ಎಲ್ಲ ಪ್ರವಾದಿಗಳ ನಾಯಕರೂ ಆಗಿದ್ದಾರೆ.

ತನ್ನ ಪುತ್ರಿಯನ್ನು ಹತ್ಯೆ ಮಾಡಿದ ದುರ್ವ್ಯಕ್ತಿ ಕೊನೆಗೆ ಇಸ್ಲಾಮ್ ಧರ್ಮ ಸ್ವೀಕರಿಸಿದನು. ಇಸ್ಲಾಮ್ ಧರ್ಮ ಸ್ವೀಕರಿಸುವ ಮೊದಲು ಮಾಡಿದ ಅಪರಾಧಗಳ ಬಗ್ಗೆ ಪಶ್ಚಾತ್ತಾಪಗೊಂಡು ಅಲ್ಲಾಹನ ಕ್ಷಮೆಯನ್ನು ಯಾಚಿಸುತ್ತಾ ಮುಸ್ಲಿಮನಾದರೆ ಮುಸ್ಲಿಮನಾಗುವ ಮೊದಲು ಮಾಡಿದ ಎಲ್ಲ ಪಾಪದೋಷಗಳು ಅಲ್ಲಾಹನಿಂದ ಕ್ಷಮಿಸಲ್ಪಡುವುವು ಎಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಕಲಿಸಿದ್ದರು. ಆದರೆ ಮುಸ್ಲಿಮನಾದ ನಂತರ ಸಹ ಆ ವ್ಯಕ್ತಿ ತನ್ನ ಮಗಳನ್ನು ನೆನಪಿಸುತ್ತಾ ದುಃಖದಿಂದ ಧಾರಾಳವಾಗಿ ಅಳುತ್ತಾ ಇದ್ದನು. ಆ ವ್ಯಕ್ತಿ ತನ್ನ ಹೃದಯವಿದ್ರಾವಕ ಕಥೆಯನ್ನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ವಿವರಿಸುವಾಗ ಅವನು ಹಝ್ರತ್ ಪೈಗಂಬರರ(ಸ) ಗಡ್ಡ ಕಣ್ಣೀರಿನಿಂದ ಒದ್ದೆಯಾಗಿರುವುದನ್ನು ಕಂಡನು. ಹಝ್ರತ್ ಪೈಗಂಬರರು(ಸ) ಹೇಳಿದರು: ಇಸ್ಲಾಮ್ ಸ್ವೀಕರಿಸುವ ಮೊದಲು ಮಾಡಿದ ಅಪರಾಧಗಳಿಗೆ ಶಿಕ್ಷೆ ನೀಡಲು ಅನುಮತಿ ದೊರೆತಿದ್ದರೆ ಈ ಮನುಷ್ಯನು ಹಾಗೆ ಶಿಕ್ಷಿಸಲ್ಪಡುವವರಲ್ಲಿ ಮೊದಲಿಗನಾಗುತ್ತಿದ್ದನು.

## ಮಹಿಳೆಯರಿಗೆ ಗೌರವ

ಪವಿತ್ರ ಖುರ್‌ಆನ್ ಅವತೀರ್ಣವಾಗುವ ಮೊದಲು ಮತ್ತು ಇಸ್ಲಾಮ್ ಸ್ಥಾಪಿತವಾಗುವ ಮೊದಲು ಸ್ತ್ರೀಯರು ದ್ವಿತೀಯ ಅಥವಾ ತೃತೀಯ ದರ್ಜೆಯ ನಾಗರಿಕರಾಗಿ ಗಣಿಸಲ್ಪಟ್ಟಿದ್ದರು. ಅವರ ಸ್ಥಿತಿ ಗುಲಾಮರಿಗಿಂತ ಮಾತ್ರವಲ್ಲ ಮೃಗಗಳಿಗಿಂತ ಕೀಳಾಗಿತ್ತು. ಅನೇಕ ಗೋತ್ರಗಳಲ್ಲಿ ಅವರು ನಾಚಿಕೆಯ ಚಿಹ್ನೆಗಳಾಗಿ ಗಣಿಸಲ್ಪಟ್ಟಿದ್ದರು. ಅವರಿಗೆ ಅವರ ಜೀವದ ಮೇಲೆ, ಅವರ ಶರೀರದ ಮೇಲೆ ಮತ್ತು ಮಕ್ಕಳ ಮೇಲೆ ಯಾವುದೇ ಅಧಿಕಾರವಿರಲಿಲ್ಲ. ಇದಕ್ಕೆ ಮಿಗಿಲಾಗಿ ಕೆಲವು ಸಮಾಜಗಳಲ್ಲಿ ಸಾಮಾಜಿಕ ಮತ್ತು ನೈತಿಕ ನಡೆವಳಿಕೆಗಳನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯೇ ಇರಲಿಲ್ಲ. ಆ ಕಾರಣಗಳಿಂದ ಸ್ತ್ರೀಯರೊಂದಿಗೆ ವರ್ತಿಸಿದ ರೀತಿ ಚರಿತ್ರೆಯಲ್ಲಿ ನಿಸ್ತೇಜವಾಗಿಯೂ ಲಜ್ಜಾ ಭರಿತವಾಗಿಯೂ ಚಿತ್ರೀಕರಿಸಲ್ಪಟ್ಟಿದೆ. ಇಸ್ಲಾಮ್ ಮಹಿಳೆಯರಿಗೆ ಅರ್ಹವಾದ ಗೌರವವನ್ನು ನೀಡಿತು. ಇಸ್ಲಾಮ್ ಮುಸ್ಲಿಮರೊಂದಿಗೆ ತಮ್ಮ ಮಾತೆಯರನ್ನು, ಸಹೋದರಿಯರನ್ನು, ಪತ್ನಿಯರನ್ನು, ಪುತ್ರಿಯರನ್ನು ಗೌರವಿಸುವ ರೀತಿಯನ್ನು ಖಚಿತವಾಗಿ ವಿವರಿಸಿಕೊಟ್ಟಿತು.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ತಮ್ಮ ತಾಯಿಯೊಂದಿಗೆ ವರ್ತಿಸುವ ಬಗ್ಗೆ ಹೀಗೆ ಹೇಳಿದ್ದಾನೆ: "ಮನುಷ್ಯನಿಗೆ ಅವನ ತಂದೆ ತಾಯಂದಿರ ಬಗ್ಗೆ ನಾವು ಆಜ್ಞಾಪಿಸಿದ್ದೇವೆ ಅವನ ತಾಯಿ ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿಕೊಂಡು ಅವನನ್ನು ಗರ್ಭ ಹೊರುತ್ತಾಳೆ; ಎರಡು ವರ್ಷಗಳಲ್ಲಿ ಸ್ತನ್ಯಪಾನ ನಿಲ್ಲಿಸುತ್ತಾಳೆ. ನನಗೂ ನನ್ನ ಮಾತಪಿತರಿಗೂ ನೀನು ಕೃತಜ್ಞನಾಗಿರು." (31:15).

ಮುಸ್ಲಿಮರು ತಮ್ಮ ತಂದೆ ತಾಯಂದಿರೊಂದಿಗೆ ಮತ್ತು ವಿಶಿಷ್ಟವಾಗಿ ತಮ್ಮ ತಾಯಂದಿರೊಂದಿಗೆ ಪ್ರೀತಿ, ಕರುಣೆ ಮತ್ತು ಗೌರವದೊಂದಿಗೆ ವರ್ತಿಸಲು ಈ ಪವಿತ್ರ ಖುರ್‌ಆನ್ ವಚನದಲ್ಲಿ ಆಜ್ಞಾಪಿಸಲ್ಪಟ್ಟಿದ್ದಾರೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಸಹ ಹೇಳಿದರು: "ಸ್ವರ್ಗ ನಿಮ್ಮ ಮಾತೆಯರ ಪಾದ ತಳದಲ್ಲಿ ಇದೆ."

ಇಸ್ಲಾಮ್ ಧರ್ಮ ಆಗಮಿಸುವ ಮೊದಲು ಪುತ್ರಿಯರನ್ನು ಕೊಲ್ಲಲಾಗುತ್ತಿತ್ತು. ಸಹೋದರಿಯರನ್ನು ಕೀಳಾಗಿ ಕಾಣಲಾಗುತ್ತಿತ್ತು. ಇಸ್ಲಾಮ್ ಧರ್ಮದ ಪೈಗಂಬರ್(ಸ) ಹೆಣ್ಣು ಮಕ್ಕಳೊಂದಿಗೆ ಕಾರುಣ್ಯದಿಂದ ವರ್ತಿಸಬೇಕೆಂದೂ ಅವರನ್ನು ಕಾರುಣ್ಯದೊಂದಿಗೂ ಲಾಲನೆಯೊಂದಿಗೂ ಬೆಳಸಬೇಕೆಂದೂ ಹೇಳಿದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಒಬ್ಬನಿಗೆ ಎರಡು ಅಥವಾ ಮೂವರು ಪುತ್ರಿಯರು ಅಥವಾ ಸಹೋದರಿಯರಿದ್ದರೆ ಅವರಿಗೆ ಆಶ್ರಯ ನೀಡಿ ಅವರ ಆವಶ್ಯಕತೆಗಳನ್ನು ನೆರವೇರಿಸುತ್ತಾ ಕಾರುಣ್ಯದಿಂದ ವರ್ತಿಸಿದರೆ ಅವನಿಗೆ ಸ್ವರ್ಗವು ಖಂಡಿತವಾಗಿಯೂ ದೊರಕುವುದು.

ಹಝ್ರತ್ ಪೈಗಂಬರರು(ಸ) ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಒತ್ತಿ ಹೇಳುತ್ತಾ ಇದ್ದರು. ಒಬ್ಬನು ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುತ್ತಾ ತನ್ನ ಪತ್ನಿಯ ಬಾಯಿಗೆ ಒಂದು ತುತ್ತು ಆಹಾರ ಹಾಕಿದರೆ ಅದೊಂದು ಸದಖ (ದಾನಧರ್ಮದ ಕರ್ಮ) ಎಂದು ಗಣಿಸಲ್ಪಡುವುದು ಎಂದು ಹೇಳಿದರು.

ಹಝ್ರತ್ ಪೈಗಂಬರ್(ಸ) ಹೀಗೆ ಸಹ ಹೇಳಿದರು: ಒಬ್ಬನು ತನ್ನ ಪತ್ನಿಯೊಂದಿಗೆ ಎಷ್ಟು ಹೆಚ್ಚು ಸೌಜನ್ಯದಿಂದಲೂ ಕಾರುಣ್ಯದಿಂದಲೂ ವರ್ತಿಸುತ್ತಾನೋ ಆ ಪ್ರಮಾಣದಲ್ಲಿ ಅವನ ವಿಶ್ವಾಸ ಪರಿಪೂರ್ಣಗೊಳಿಸಲ್ಪಡುವುದು.

ಈ ರೀತಿ ಇಸ್ಲಾಮ್ ಮಹಿಳೆಯರಿಗೆ ಅವರಿಗೆ ಅರ್ಹವಾದ ಗೌರವವನ್ನು ನೀಡಿತು ಮತ್ತು ಮುಸ್ಲಿಮರೊಂದಿಗೆ ತಮ್ಮ ಮಾತೆಯರನ್ನು, ಪತ್ನಿಯರನ್ನು ಮತ್ತು ಪುತ್ರಿಯರನ್ನು ಪ್ರೀತಿಯಿಂದಲೂ ಕಾರುಣ್ಯದಿಂದಲೂ ಕಾಣಬೇಕೆಂದು ಆಜ್ಞಾಪಿಸಿತು.

## ಹಿಜಾಬ್ ಮೂಲಕ ಮಹಿಳೆಯರಿಗೆ ಸಂರಕ್ಷಣೆ

ಇಸ್ಲಾಮ್ ಮಹಿಳೆಯರನ್ನು, ಅವರ ಪ್ರಾಮುಖ್ಯವನ್ನು ತಗ್ಗಿಸಿದ ಮತ್ತು ನೀತಿಗೆಟ್ಟ ಸ್ಥಿತಿಯಿಂದ ಹೊರಗೆ ಸರಿಸಿ ಮನೆಗಳಲ್ಲಿ ಅವರು ಪ್ರೀತಿಸಲ್ಪಡುವಂತೆ ಮತ್ತು ಗೌರವಿಸಲ್ಪಡುವಂತೆ ಮಾಡಿತು. ಇಸ್ಲಾಮ್ ಹಿಜಾಬ್ ಎಂಬ ಆಧಿಕಾರಿಕ ಭದ್ರತೆಯ ಕಿರೀಟವನ್ನು ಮಹಿಳೆಯರಿಗೆ ಧಾರಣೆ ಮಾಡಿತು. ನಾವು ನಮ್ಮ ಸಮಾಜದ ಕಡೆಗೆ ವೀಕ್ಷಿಸುವಾಗ ಮನುಷ್ಯರು ವಿವಿಧ ರೀತಿಗಳಲ್ಲಿ ಮಹಿಳೆಯರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿದುದಾಗಿ ಕಾಣುತ್ತೇವೆ. ಮೀಡಿಯಾ ನಮ್ಮ ಸಮಾಜದಲ್ಲಿ ಬಹಳ ಮುಖ್ಯ ಪಾತ್ರವಹಿಸುತ್ತಿದೆ. ಪುರುಷರು ಮಹಿಳೆಯರ ದೃಷ್ಟಿಕೋನವನ್ನು ಬದಲಾಯಿಸಲು ಕೈಗೊಂಡ ಅತ್ಯಂತ

ದೊಡ್ಡ ವಿಧಾನ ಅವರನ್ನು ಇಂದ್ರಿಯಾಸಕ್ತಿಯ ವಸ್ತುವಾಗಿ ಮೀಡಿಯಾದಲ್ಲಿ ಚಿತ್ರಿಸುವ ಮೂಲಕವಾಗಿದೆ. ಇದನ್ನು ಲೌರ ಮಲ್‌ವೇ ತನ್ನ "ದಿ ಮೇಲ್‌ಗೇಝ್" (ಪುರುಷನ ದಿಟ್ಟಿಸಿ ನೋಟ) ಸಿದ್ಧಾಂತದಲ್ಲಿ ವಿವರಿಸಿದ್ದಾರೆ. ಮಹಿಳೆಯನ್ನು ದೃಷ್ಟಿಗೋಚರ ಕಲೆಗಳಲ್ಲಿ, ಸಾಹಿತ್ಯದಲ್ಲಿ, ಮೀಡಿಯಾದಲ್ಲಿ ಪುರುಷನ ದೃಷ್ಟಿಕೋನದಿಂದ ಚಿತ್ರೀಕರಿಸುವುದೇ ಮೇಲ್‌ಗೇಝ್ (ಪುರುಷನ ದಿಟ್ಟಿಸಿ ನೋಟ) ಸಿದ್ಧಾಂತವಾಗಿದೆ. "ಆದುದರಿಂದ ಮಹಿಳೆಯರ ಸ್ಥಾನವನ್ನು ತಗ್ಗಿಸುವ ಮತ್ತು ಅವರನ್ನು ಪುರುಷನ ಭೋಗ ವಸ್ತುವಾಗಿ ಚಿತ್ರಿಸುವ ಸಾಮಗ್ರಿಗಳು ಪ್ರವಾಹೋಪಾದಿಯಲ್ಲಿ ನಿರ್ಮಿಸಲ್ಪಡುತ್ತಿವೆ. ಅದು ಸಹ ಬಹಳ ಹೆಚ್ಚಿನ ಮಟ್ಟದಲ್ಲಿ ಪುರುಷರಿಂದ."

ಲೋಕದಲ್ಲಿ ಮಹಿಳೆಯರನ್ನು ಭೋಗವಸ್ತುವಾಗಿ ಚಿತ್ರಿಸುವುದು ಅಪಮಾನಕರವೂ ಹೇಯವೂ ನಿಂದ್ಯವೂ ಆಗಿರುವ ಸೀಮಾರೇಖೆಯನ್ನು ತಲಪಿದೆ. ಸಂಶೋಧಕರ ಅಧ್ಯಯನದಿಂದ ತಿಳಿದುಬಂದುದೇನೆಂದರೆ, ಇಂಟರ್‌ನೆಟ್‌ನಲ್ಲಿರುವ ಚಿತ್ರಣಗಳಲ್ಲಿ ಶೇಕಡ 80ರಷ್ಟು, ಮಹಿಳೆಯರನ್ನು ಮತ್ತು ಹುಡುಗಿಯರನ್ನು ಮುಚ್ಚು ಮರೆಯಿಲ್ಲದೆ ಪ್ರದರ್ಶಿಸುತ್ತವೆ. ವೇಗದಿಂದ ಚಲಿಸುವ ಕಾರು ಅಥವಾ ಬರ್ಗರ್‌ಗೋಸ್ಕರ ಪ್ರದರ್ಶಿಸುವ ಜಾಹಿರಾತುಗಳಲ್ಲಿ ಅತ್ಯಲ್ಪ ವಸ್ತ್ರಧಾರಣೆ ಮಾಡಿದ ಮಹಿಳೆಯರನ್ನು ಪುರುಷನ ಸಂತೋಷಕ್ಕೋಸ್ಕರ ಶೋಷಣೆ ಮಾಡುತ್ತಿರುವುದು ದುಃಖಕರವಾಗಿ ಮುಂದುವರಿಯುತ್ತಿದೆ. ಅತ್ಯಂತ ದುಃಖಕರವಾದುದೇನೆಂದರೆ, ಮಹಿಳೆಯರ ಸ್ವಾತಂತ್ರ್ಯದ ಹೆಸರಲ್ಲಿ ಇದನ್ನು ಬಿಂಕದಿಂದ ಮಾಡಲಾಗುತ್ತಿದೆ. ಇದು ಸ್ವಾತಂತ್ರ್ಯದ ಬಣ್ಣ ಬಳಿದ ಸಂಕಲೆಗಳಲ್ಲದೆ ಇನ್ನೇನೂ ಅಲ್ಲ.

ಪುರುಷರು ಮಹಿಳೆಯರ ಕಡೆಗೆ ಆಕರ್ಷಿಸಲ್ಪಡುತ್ತಾರೆ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಮನುಷ್ಯನ ಮನಃಶಾಸ್ತ್ರವನ್ನು ಹೀಗೆ ವಿವರಿಸಿದ್ದಾನೆ: "ಮನುಷ್ಯರಿಗೆ ಸ್ತ್ರೀಯರು, ಮಕ್ಕಳು, ಚಿನ್ನ, ಬೆಳ್ಳಿಯ ಭವ್ಯ ಭಂಡಾರ, ಉತ್ತಮ ಜಾತಿಯ ಕುದುರೆಗಳು ಮತ್ತು ಕೃಷಿ ಭೂಮಿಗಳ ಮೇಲಿನ ಪ್ರೀತಿ ಆಕರ್ಷಕಗೊಳಿಸಲ್ಪಟ್ಟಿದೆ. ಇವೆಲ್ಲ ಐಹಿಕ ಜೀವನದ ಸುಖ ಸೌಕರ್ಯಗಳಾಗಿವೆ. ಆದರೆ ಅಲ್ಲಾಹನ ಬಳಿ ಅತ್ಯುತ್ತಮವಾದ ನಿವಾಸವಿದೆ." (3:15).

ಈ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿರುವುದು ಮಹಿಳೆಯರ ಆಕರ್ಷಣೆಯಾಗಿದೆ. ಪುರುಷರು ಮಹಿಳೆಯರಿಂದ ಆಕರ್ಷಿಸಲ್ಪಡುತ್ತಾರೆ. ಪುರುಷರು ಮಹಿಳೆಯರನ್ನು ಭೋಗ ವಸ್ತುವಾಗಿ ಚಿತ್ರಿಸಲು ವಿವಿಧ ವಿಧಾನಗಳನ್ನು ಕೈಗೊಳ್ಳುತ್ತಿದ್ದಾರೆ.

ಹದಿನಾಲ್ಕು ನೂರು ವರ್ಷಗಳ ಹಿಂದೆ ಸರ್ವಶಕ್ತನಾದ ಅಲ್ಲಾಹನು "ಮೇಲ್‌ಗೇಝ್ ಸಿದ್ಧಾಂತ"ದ ಬಗ್ಗೆ ಪರಿಹಾರ ಸೂಚಿಸಿದುದು ವಿಸ್ಮಯಕರವಾಗಿದೆ. ಪುರುಷರು ಮಹಿಳೆಯರನ್ನು ಗೌರವದಿಂದ ಕಾಣಬೇಕು ಎಂದೂ ತಮ್ಮ ದೃಷ್ಟಿಗಳನ್ನು ತಗ್ಗಿಸಬೇಕೆಂದೂ ತಮ್ಮ ಕಣ್ಣುಗಳನ್ನೂ ನಿಯಂತ್ರಿಸಬೇಕೆಂದೂ ತಮ್ಮನ್ನು ಅನೈತಿಕತೆ ಮತ್ತು ಮಾಲಿನ್ಯದಿಂದ ರಕ್ಷಿಸಬೇಕೆಂದೂ ಅಲ್ಲಾಹನು ಹೇಳಿರುವನು.

ಪವಿತ್ರ ಖುರ್‌ಆನಿನ ಈ ವಚನ ನೋಡಿರಿ: "ಸತ್ಯ ವಿಶ್ವಾಸಿಗಳೊಂದಿಗೆ ಹೇಳು– ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. ಅದು ಅವರಿಗೆ ಪರಿಶುದ್ಧವಾದ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ." (24:31).

ಧಾರ್ಮಿಕ ಸ್ವಾತಂತ್ರ್ಯದ ಪ್ರತಿಪಾದಕರಲ್ಲಿ ಮುಂಚೂಣಿಯಲ್ಲಿರುವವರೆಂದು ಹೇಳುತ್ತಿರುವ ಕೆಲವು ಸರಕಾರಗಳು ಮತ್ತು ರಾಜಕಾರಣಿಗಳು ಹಿಜಾಬ್ ಅಥವಾ ಬುರ್ಖವನ್ನು ಪ್ರತಿಬಂಧಿಸಬೇಕೆಂದು ಆವಶ್ಯಪಡುವುದನ್ನು ನಾವು ಕಾಣುತ್ತೇವೆ. ಅವರು ಹಿಜಾಬ್ ಅಥವಾ ಬುರ್ಖವನ್ನು ದಬ್ಬಾಳಿಕೆಯ ಚಿಹ್ನೆಯಾಗಿ ಕಾಣುತ್ತಾರೆ. ಅವರ ವಾದ ಎಷ್ಟು ದಾರುಣವಾಗಿ ತಪ್ಪು ಭರಿತವಾಗಿದೆ! ಮಹಿಳೆಯರನ್ನು ಹಿಜಾಬ್ ಧರಿಸಲು ನಿರ್ಬಂಧಿಸುವುದು ದಮನಕಾರಿ ಕೃತ್ಯವಾಗಿರುವ ಹಾಗೆಯೇ ಮಹಿಳೆಯರನ್ನು ಹಿಜಾಬ್ ಧರಿಸುವುದರಿಂದ ತಡೆಯುವುದು ಸಹ ದಮನಕಾರಿ ಕೃತ್ಯವಾಗಿದ್ದು ಅವರ ಧಾರ್ಮಿಕ ಹಕ್ಕುಗಳನ್ನು ಅನುಷ್ಠಾನಕ್ಕೆ ತರಲು ತಡೆಗಟ್ಟಿದಂತಾಗುತ್ತದೆ.

## ಬೇರ್ಪಡಿಸುವಿಕೆ

ಬೇರ್ಪಡಿಸುವಿಕೆ ಎಂಬ ಶಬ್ದ ಹೆಚ್ಚಾಗಿ ವರ್ಣ ವಿವೇಚನೆ ಬಗ್ಗೆ ಬಳಸಲ್ಪಡುತ್ತಿದೆ. ಇಲ್ಲಿ ನಾನು ಈ ಶಬ್ದವನ್ನು ಬೇರೆ ಅರ್ಥದಲ್ಲಿ ಬಳಸಿದ್ದೇನೆ.

ಇಸ್ಲಾಮ್ ಮಹಿಳೆಯರಿಗೆ ಅವರನ್ನು ಪುರುಷರಿಂದ ಬೇರ್ಪಡಿಸುವ ಮೂಲಕ ಭದ್ರತೆ ನೀಡಿದೆ. ಅಖಂಡನೀಯವಾದ ವಾಸ್ತವಿಕತೆ ಏನೆಂದರೆ ಮಹಿಳೆಯರು ಸಮಾಜದ ಎಲ್ಲ ಹಂತಗಳಲ್ಲಿ ಅಲ್ಲವಾದರೂ ಅನೇಕ ಕಡೆಗಳಲ್ಲಿ ಲೈಂಗಿಕ ಕಿರುಕುಳಗಳಿಗೆ ಗುರಿಯಾಗುತ್ತಾರೆ. ಟ್ಯಾಕ್ಸಿಯಲ್ಲಿ ಹೋಗುವಾಗ, ಕೆಲಸದ ಸ್ಥಳಗಳಲ್ಲಿ, ಅಥವಾ ಯಾವುದಾದರೂ ಸತ್ಕಾರ ಸಮಾರಂಭದಲ್ಲಿ ಭಾಗವಹಿಸುವಾಗ ಗಣನೀಯ ಸಂಖ್ಯೆಯಲ್ಲಿ ಮಹಿಳೆಯರು ಕಿರುಕುಳಗಳಿಗೆ ಈಡಾದವರಾಗಿ ಹೊರಗೆ ಬರುವುದನ್ನು ನಾವು ಕಾಣುತ್ತೇವೆ. ಇವುಗಳ ಪರಿಣಾಮವಾಗಿ #ME TOO (ಮೀಟೂ – ನಾನು ಸಹ) ಎಂಬ ಮುಖ್ಯ ಮತ್ತು ಶಕ್ತಿಶಾಲಿ ಚಳವಳಿಗಳು ಆರಂಭಗೊಂಡಿವೆ. ಔದ್ಯೋಗಿಕ ಕ್ಷೇತ್ರದ ಮತ್ತು ಸಮಾಜದ ಎಲ್ಲ ಹಂತಗಳಿಂದಲೂ ಪಾರ್ಶ್ವಗಳಿಂದಲೂ ಹೆಚ್ಚು ಹೆಚ್ಚಾಗಿ ಮಹಿಳೆಯರು ಬಹಿರಂಗವಾಗಿ ತಮ್ಮ ನೋವುಭರಿತ ಸಂಭವ ಕಥೆಗಳನ್ನು ವಿವರಿಸುತ್ತಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರು ಹೇಗೆ ಕಿರುಕುಳಗಳಿಗೆ ಹೆಚ್ಚು ಹೆಚ್ಚಾಗಿ ಗುರಿಯಾಗುತ್ತಿದ್ದಾರೆ ಎಂಬುದರ ಬಗ್ಗೆ ಅವು ವಿಸ್ತಾರವಾಗಿ ಬೆಳಕು ಬೀರುತ್ತವೆ.

ಸೋರಿಕೆಯಾದ ಕೆಲವು ವೀಡಿಯೋಗಳಲ್ಲಿ ಶಕ್ತಿಶಾಲಿ ಪುರುಷರು ಮಹಿಳೆಯರ ದೇಹಗಳನ್ನು ತಡಕಾಡಿದ ಬಗ್ಗೆ ಮತ್ತು ಅವರ ಇಚ್ಛೆಗೆ ವಿರುದ್ಧವಾಗಿ ಅವರ ಕಡೆಗೆ ಮುಂದುವರಿದ ಬಗ್ಗೆ ಹೆಮ್ಮೆಯಿಂದ ಬಡಾಯಿ ಕೊಚ್ಚುವುದನ್ನು ನಾವು ಕಂಡಿದ್ದೇವೆ. ಅಮೇರಿಕದ ಫಿಲ್ಮ್ ಇಂಡಸ್ಟ್ರಿಯಲ್ಲಿ ಇತ್ತೀಚೆಗೆ ನಡೆದ ಲಜ್ಜೆಗೇಡಿನ ಸಂಭವಗಳು, ಕೆಲಸದ ಸ್ಥಳಗಳಲ್ಲಿ ಮಹಿಳೆಯರೊಂದಿಗೆ ವರ್ತಿಸುವ ರೀತಿಗಳನ್ನು ಬೆಳಕಿಗೆ ತಂದಿವೆ ಮತ್ತು ಮಹಿಳೆಯರಿಗೆ ಕಿರುಕುಳ ನೀಡುವ ಬಗ್ಗೆ ಜಾಗತಿಕ ಚರ್ಚೆಯ ಕಿಡಿಯನ್ನು ಹಾರಿಸಿವೆ. ಮಾತ್ರವಲ್ಲ, ಮಹಿಳೆಯರೂ ಪುರುಷರೂ ಸ್ವತಂತ್ರರಾಗಿ ಪರಸ್ಪರ ಬೆರಕೆಗೊಳ್ಳುವುದರ ಅಪಾಯಗಳನ್ನು ಎತ್ತಿ ತೋರಿಸುತ್ತಿವೆ. ಕೆನಡದ ಒಕ್ಯುಪೇಶನಲ್ ಹೆಲ್ತ್ ಆ್ಯಂಡ್ ಸೇಫ್ಟೀ ಮ್ಯಾಗಝಿನ್ (Occupational Health and Safety Magazine) ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಎಂಬುದರ ಬಗ್ಗೆ ನಡೆಸಿದ ಅಧ್ಯಯನದ ವರದಿಯಲ್ಲಿ ಹೀಗೆ ಬರೆಯಲಾಗಿದೆ: ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಕಿರುಕುಳ ನೀಡುವುದು ಸಾಂಕ್ರಾಮಿಕ ರೋಗದ ಹಾವಳಿಯ ಹಾಗಿದೆ. ಇದು

ಮಹಿಳೆಯರಿಗೆ ಮಾತ್ರ ಕಳವಳಕರವಲ್ಲ. ಪುರುಷರಿಗೂ ಇದು ಕಳವಳಕರವಾಗಿದೆ. ನಮ್ಮ ತಾಯಂದಿರು ಅಥವಾ ಪುತ್ರಿಯರು ಅಥವಾ ಸಹೋದರಿಯರು ಪ್ರತಿದಿನ ಕೆಲಸಕ್ಕೆ ಅಥವಾ ಬೇರೆ ಆವಶ್ಯಕತೆಗಳಿಗೋಸ್ಕರ ಹೊರಗೆ ಹೋಗುತ್ತಾ ಇರುತ್ತಾರೆ.

ಮಹಿಳೆಯರು ಕಿರುಕುಳಗಳನ್ನು ತಡೆಯಲು ಮತ್ತು ತಮ್ಮ ಭದ್ರತೆ ಮತ್ತು ಸಂರಕ್ಷಣೆಗೋಸ್ಕರ ಹೊಸ ವಿಧಾನಗಳ ಬಗ್ಗೆ ಚಿಂತಿಸಿದ್ದಾರೆ. ಉದಾಹರಣೆಗೆ, ಕೆನಡದ ಟೊರೊಂಟೋದಲ್ಲಿ ಮಹಿಳೆಯರಿಗೆ ಮಾತ್ರ ಸೀಮಿತವಾಗಿರುವ ಡ್ರೈವ್ ಹರ್ (Drive Her) ಎಂಬ ಟ್ಯಾಕ್ಸಿ ಸರ್ವೀಸ್ ಪ್ರಾರಂಭಿಸಲಾಗಿದೆ. ಇಂಗ್ಲೆಂಡಿನ ಲಂಡನ್‌ನಲ್ಲಿ ಸಹ ಅಂತಹ ಟ್ಯಾಕ್ಸಿ ಸರ್ವೀಸ್ ಪ್ರಾರಂಭಿಸಲಾಗಿದೆ. ಮಹಿಳೆಯರಿಗೆ ಮಾತ್ರವಿರುವ ವಿಮನ್ ಓನ್ಲಿ ಜಿಮ್ಸ್ (women only gyms)ಗಳನ್ನು ಮಹಿಳೆಯರು ಪ್ರವೇಶಿಸುತ್ತಿದ್ದಾರೆ. ಬರ್ಲಿನ್ ನಗರದಲ್ಲಿ ಸರಕಾರಿ ಅಧಿಕಾರಿಗಳು ನ್ಯೂ ಈಯರ್ಸ್ ಈವ್ ಪಾರ್ಟೀಸ್ (ಹೊಸ ವರ್ಷ ಸ್ವಾಗತ ಸಮಾರಂಭಗಳಿಗೆ) ಸೇಫ್ ಝೋನ್ (ಸುರಕ್ಷಿತ ಪ್ರದೇಶ) ಮಹಿಳೆಯರಿಗೋಸ್ಕರ ಏರ್ಪಡಿಸಿ ಲೈಂಗಿಕ ಕಿರುಕುಳಗಳನ್ನು ತಡೆಗಟ್ಟಿದರು. ಸ್ವೀಡನ್ ಪ್ರಥಮ ಬಾರಿ ವಿಮನ್ಸ್ ಓನ್ಲಿ (ಮಹಿಳೆಯರಿಗೆ ಮಾತ್ರ) ಮ್ಯೂಸಿಕ್ ಫೆಸ್ಟಿವಲ್ (ಸಂಗೀತ ಸಮಾರಂಭ) ಜರಗಿಸಿತು. ಯು.ಕೆ.ಯಲ್ಲಿ ಉದ್ಯೋಗದಾತರು ಸ್ತ್ರೀ ಪುರುಷ ಕೆಲಸಗಾರರ ಮಧ್ಯೆ ಹಸ್ತಲಾಘವ ಸಹಿತ ಎಲ್ಲ ಶಾರೀರಿಕ ಸ್ಪರ್ಶಗಳನ್ನು ನಿಷಿದ್ಧಗೊಳಿಸುವ ಕ್ರಮಗಳನ್ನು ಲೈಂಗಿಕ ಕಿರುಕುಳಗಳಿಗೆ ಸಂಬಂಧಿಸಿದ ದುಬಾರಿ ಮೊಕದ್ದಮೆಗಳನ್ನು ತಡೆಗಟ್ಟಲು ಕೈಗೊಳ್ಳುವರು.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ, ಪಂಚಮ ಖಲೀಫ, ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಇವುಗಳ ಬಗ್ಗೆ ಮುನ್ಸೂಚನೆ ನೀಡಿ ಹೀಗೆ ಹೇಳಿದ್ದರು: "ಪಶ್ಚಿಮದ ಸಮಾಜದಲ್ಲಿ ಪದೇ ಪದೇ ಚರ್ಚಿಸಲ್ಪಡುವ ಮತ್ತು ಖಂಡಿಸಲ್ಪಡುವ ವಿಷಯ ಇಸ್ಲಾಮ್‌ನಲ್ಲಿ ಪುರುಷರನ್ನೂ ಮಹಿಳೆಯರನ್ನೂ ದೂರವಾಗಿ ಇರಿಸಲಾಗುತ್ತಿದೆ ಎಂದಾಗಿದೆ. ಮುಸ್ಲಿಮ್ ಪುರುಷರು ಮತ್ತು ಮಹಿಳೆಯರು ಪರಸ್ಪರ ಹಸ್ತಲಾಘವ ಮಾಡುವುದಿಲ್ಲ ಮತ್ತು ಪುರುಷರು ಮತ್ತು ಮಹಿಳೆಯರು ಬೇರೆ ಬೇರೆಯಾಗಿ ಕುಳಿತುಕೊಳ್ಳುತ್ತಾರೆ ಮತ್ತು ಆರಾಧಿಸುತ್ತಾರೆ ಎಂಬುದರ ಬಗ್ಗೆ ಚರ್ಚಿಸಲಾಗುತ್ತಿದೆ. ಆದರೆ ಕಾಲ ಕಳೆದಂತೆ ಅಂತಹ ನಂಬಿಕೆಗಳನ್ನು ಖಂಡಿಸುವವರು ಕೂಡ ನಮ್ಮ ನಂಬಿಕೆಗಳ ಜಾಣ್ಮೆಯ ಬಗ್ಗೆ ಮನವರಿಕೆ ಮಾಡಲು ಪ್ರಾರಂಭಿಸಿದ್ದಾರೆ."

ಆದುದರಿಂದ ಈಗಿನ ವಿದ್ಯಮಾನಗಳು ಸೂಚಿಸುವುದೇನೆಂದರೆ, ಲೋಕವು ಪುರುಷ ಮತ್ತು ಮಹಿಳೆಯ ಬೇರ್ಪಡಿಸುವಿಕೆಯ ಜಾಣ್ಮೆಯನ್ನು ಮನವರಿಕೆ ಮಾಡುತ್ತಿದೆ. ಈ 21ನೇ ಶತಮಾನದಲ್ಲಿ ಲೋಕವು ಇದನ್ನು ಮನವರಿಕೆ ಮಾಡಿಕೊಳ್ಳುತ್ತಿರುವಾಗ ಇಸ್ಲಾಮ್ ಕಳೆದ 1400 ವರ್ಷಗಳಿಗಿಂತ ಹೆಚ್ಚಿನ ಕಾಲದಲ್ಲಿ ಅದರ ಬಗ್ಗೆ ಉಪದೇಶ ನೀಡುತ್ತಾ ಇತ್ತು.

ವಾಗ್ದತ್ತ ಮಸೀಹರು ಹೇಳಿರುವರು:

ಆ ರಹಾ ಹೈ ಇಸ್ ತರಫ್ ಅಹ್‌ರಾರೆ ಯುರೋಪ್ ಕಾ ಮಿಝಾಜ್
ನಬ್‌ಝ್ ಫಿರ್ ಚಲ್ನೇ ಲಗೀ ಮುರ್ದೋಂಕಿ ನಾಗ ಝಿಂದವಾರ್

"ಸ್ವಾತಂತ್ರ್ಯ ಪ್ರಿಯರಾದ  ಯುರೋಪಿನ ಜನರ ಮನೋಭಾವ ಈ ಕಡೆಗೆ ಬರುತ್ತಿದೆ. ಅಚಾನಕವಾಗಿ ಮೃತರಾದವರ ನಾಡಿಗಳು ಚಲಿಸತೊಡಗಿದವು – ಜೀವಂತವಾಗಿರುವವರ ನಾಡಿಗಳ ಹಾಗೆ."

ಹಿಜಾಬ್ ಹಾಗೂ ಪುರುಷರ ಮತ್ತು ಮಹಿಳೆಯರ ಬೇರ್ಪಡಿಸುವಿಕೆಯ ಉದ್ದೇಶಲಕ್ಷ್ಯ ಮಹಿಳೆಯರ ಸಂರಕ್ಷಣೆಯಾಗಿದೆ. ಮಹಿಳೆಯರು ತಮ್ಮ ಸ್ವಂತ ಸ್ಥಳ ಹೊಂದಿ ಅದರಲ್ಲಿ ಸ್ವತಂತ್ರರಾಗಿ ಮತ್ತು ಸುಖವಾಗಿ ಜೀವಿಸಿ ಚಾರಿತ್ರ್ಯವಂತರ ಒಂದು ಸಮಾಜವನ್ನು ರೂಪಿಸುವಂತೆ ಮಾಡುವುದೇ ಅದರ ಹಿಂದಿರುವ ಜಾಣ್ಮೆಯಾಗಿದೆ.

## ಸಮಾನತೆ

ಇಂದಿನ ಕಾಲದಲ್ಲಿ ಬಹಳ ಹೆಚ್ಚಾಗಿ ಚರ್ಚಿಸಲ್ಪಡುವ ವಿಷಯ ಮಹಿಳೆಯರ ಸಮಾನತೆಯಾಗಿದೆ. ಮಹಿಳೆಯರು ತಮ್ಮ ಸಮಾನ ಹಕ್ಕುಗಳಿಗೋಸ್ಕರ ಅನೇಕ ಶತಮಾನಗಳ ಕಾಲ ಹೋರಾಡಿರುವರು. ಉದಾಹರಣೆಗೆ, ಲೈಂಗಿಕ ಸಮಾನತೆ, ಮತದಾನ ಮಾಡುವ ಹಕ್ಕು, ಸಮಾನ ಸಂಬಳದ ಹಕ್ಕು, ಸಮಾನ ಅವಕಾಶ, ವಾರಸು ಹಕ್ಕು ಮೊದಲಾದವುಗಳ ಬಗ್ಗೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನಾಯಕರು ಇಸ್ಲಾಮ್‌ನಲ್ಲಿ ಮಹಿಳೆಯರಿಗಿರುವ ಉನ್ನತ ಸ್ಥಾನದ ಬಗ್ಗೆ ಹೀಗೆ ಹೇಳುತ್ತಾರೆ: "ಈ ಕಾಲಘಟ್ಟದ ಇನ್ನೊಂದು ವೈಶಿಷ್ಟ್ಯವೇನೆಂದರೆ ಮಹಿಳೆಯರು ಪುರುಷರಿಂದ ತಮ್ಮ ಹಕ್ಕುಗಳನ್ನು ಆವಶ್ಯಪಡುತ್ತಿದ್ದಾರೆ. ಅದರ ಪರಿಣಾಮವಾಗಿ ಕೆಲವು ಪುರುಷರು ಮಹಿಳೆಯರ ಹಕ್ಕುಗಳನ್ನು ಪ್ರೋತ್ಸಾಹಿಸಲು ಗುಂಪುಗಳನ್ನು ಸ್ಥಾಪಿಸಿದ್ದಾರೆ. ಆದರೆ ಅಹ್ಮದೀ ಮಹಿಳೆಯರು ತಮ್ಮನ್ನು ತಾವೇ ಪ್ರಶ್ನಿಸಬೇಕು, ತಮ್ಮ ಸೃಷ್ಟಿಕರ್ತನಾದ ಅಲ್ಲಾಹನು ಸ್ವತಃ ಅವರಿಗೆ ಆವಶ್ಯಕವಾದ ಮತ್ತು ಅವರು ಆಶಿಸುವ ಎಲ್ಲವನ್ನೂ ನೀಡಿರುವಾಗ ತಮಗೆ ಪುರುಷರು ಹಕ್ಕುಗಳನ್ನು ನೀಡುವವರಾಗಲು ಯಾವ ಅಧಿಕಾರವನ್ನು ಹೊಂದಿದ್ದಾರೆ? ಅಹ್ಮದೀ ಮಹಿಳೆಯರು ಮನವರಿಕೆ ಮಾಡಿಕೊಳ್ಳಬೇಕು, ಅಲ್ಲಾಹನು ಅವರಿಗೆ ತರ್ಕಬದ್ಧವಾದ ಮತ್ತು ಜಾಣ್ಮೆ ಭರಿತ ರೀತಿಯಲ್ಲಿ ಸಮಾನ ಹಕ್ಕುಗಳನ್ನು ನೀಡಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಮಹಿಳೆಯರ ಬಗ್ಗೆ ಹೇಗೆ ವಿವರಿಸಲಾಗಿದೆಯೋ ಮತ್ತು ಅವರಿಗೆ ಅವರ ಹಕ್ಕುಗಳನ್ನು ಹೇಗೆ ಸ್ಥಾಪಿಸಿಕೊಡಲಾಗಿದೆಯೋ ಅದು ಪೂರ್ಣವಾಗಿ ಅದ್ವಿತೀಯವಾಗಿದ್ದು ಬೇರೆ ಯಾವುದೇ ಧಾರ್ಮಿಕ ಗ್ರಂಥದಲ್ಲಿ ಕಂಡುಬರುವುದಿಲ್ಲ."

ಅನ್ಯಧರ್ಮಗಳ ಕಡೆಗೆ ನೋಡುವುದಾದರೆ, ಕೆಲವು ಧರ್ಮಗಳು ಮಹಿಳೆಯರಿಗೆ ಆತ್ಮವೆಂಬುದೇ ಇಲ್ಲ ಎಂದು ಹೇಳಿವೆ. ಬೇರೆ ಕೆಲವು ಧರ್ಮಗಳು ಮಹಿಳೆಯರನ್ನು ಪಾಪಿಗಳೆಂದು ಅಥವಾ ಕೆಡುಕಿನ ಮೂಲವೆಂದು ಹೇಳಿವೆ. ಇತರ ಅನೇಕ ಅಪಮಾನಕರವಾದ ಮತ್ತು ಅನ್ಯಾಯಕರವಾದ ಅಪವಾದಗಳನ್ನು ಮಹಿಳೆಯರ ಮೇಲೆ ಬೇರೆ ಕೆಲವು ಧರ್ಮಗಳು ಹೊರಿಸಿವೆ. ಆದರೆ ಇಸ್ಲಾಮಿನ ಉಪದೇಶಗಳು ಸಂಪೂರ್ಣವಾಗಿ ವಿಭಿನ್ನವಾಗಿವೆ. ಮಹಿಳೆಯರು ಯಾವ ರೀತಿಯಲ್ಲೂ ಪುರುಷರಿಗಿಂತ ಕೆಳಮಟ್ಟದವರಲ್ಲವೆಂದು ಸ್ಪಷ್ಟವಾಗಿ ಉಪದೇಶಿಸಿದೆ. ಪವಿತ್ರ ಖುರ್‌ಆನ್ ವಿಶ್ವಾಸಿಗಳಾದ ಪುರುಷರು ಎಂದು ಪ್ರಸ್ತಾಪಿಸುವುದರೊಂದಿಗೆ ವಿಶ್ವಾಸಿಗಳಾದ ಮಹಿಳೆಯರೂ ಎಂದೂ ಪ್ರಸ್ತಾಪಿಸಿದೆ. ಇದು ನೈಜ ಸಮಾನತೆ ಆಗಿದೆ."

**ಇಸ್ಲಾಮ್ ಮಹಿಳೆಯರಿಗೆ ಹದಿನಾಲ್ಕು ನೂರು ವರ್ಷಗಳಿಗಿಂತ ಹೆಚ್ಚು ಕಾಲ ಹಿಂದೆಯೇ ಮಾನವ ಹಕ್ಕುಗಳನ್ನು ಪ್ರತಿಪಾದಿಸಿದೆಯೋ, ಒಂದು ನೂರು ವರ್ಷಗಳ ಹಿಂದೆ ಕೂಡ ಇತರರು ಅವುಗಳ ಬಗ್ಗೆ ಯೋಚಿಸಿಯೇ ಇರಲಿಲ್ಲ.**

ವಾಸ್ತವಿಕವಾಗಿ, ಈಗ ಕೂಡ ಮಹಿಳೆಯರು ಸಮಾನ ವೇತನ, ಲಿಂಗ ಸಮಾನತೆ ಗಳಿಸಲು ಹೋರಾಡುತ್ತಿದ್ದಾರೆ. ಇಂದಿನ ಆಧುನಿಕ ಸಮಾಜದಲ್ಲಿ ಮಹಿಳೆಯರು ಕನಿಷ್ಠ ಮಟ್ಟದ ಸಮಾನ ಹಕ್ಕುಗಳಿಗೆ

ಈಗ ಕೂಡ ಹೋರಾಡುತ್ತಿರುವಾಗ ಇಸ್ಲಾಮ್ ಧರ್ಮ 1400 ವರ್ಷಗಳಿಗಿಂತ ಹಿಂದೆ ಮಹಿಳೆಯರಿಗೆ ಏನೆಲ್ಲ ಹಕ್ಕುಗಳನ್ನು ನೀಡಿತೆಂದು ನೋಡಿರಿ. ಪವಿತ್ರ ಖುರ್‌ಆನ್ ಅಲ್ಲಾಹನ ವಚನಗಳಾಗಿವೆ. ಅದರಲ್ಲಿ ಪುರುಷ ಮತ್ತು ಮಹಿಳೆ ಎಂದು 24 ಸಲ ಪ್ರಸ್ತಾಪಿಸಲಾಗಿದೆ – ಸಮಾನವಾಗಿ. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಯರಿಗೆ ತಾವು ವಿವಾಹವಾಗುವವರನ್ನು ಸ್ವತಃ ಆಯ್ಕೆ ಮಾಡುವ ಹಕ್ಕು ನೀಡಿತು. ಇಸ್ಲಾಮ್ 1400 ವರ್ಷಗಳ ಹಿಂದೆಯೇ ಮಹಿಳೆಯರಿಗೆ ವಿವಾಹ ವಿಚ್ಛೇದನೆ ಮಾಡುವ ಹಕ್ಕು ನೀಡಿತು. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಯರಿಗೆ ವಾರಸು ಹಕ್ಕು ನೀಡಿತು. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಗೆ ಸಮಾಜದಲ್ಲಿ ತಮ್ಮ ಅಭಿಪ್ರಾಯ ಪ್ರಕಟಿಸುವ ಹಕ್ಕು ಮತ್ತು ತಮ್ಮನ್ನು ತಾವೇ ಪ್ರತಿನಿಧೀಕರಿಸುವ ಹಕ್ಕು ನೀಡಿತು. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಗೆ ಅಧಿಕಾರದ ಹುದ್ದೆ ವಹಿಸುವ ಹಕ್ಕು ನೀಡಿತು. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಗೆ ವಿದ್ಯಾಭ್ಯಾಸ ಪಡೆಯುವ ಹಕ್ಕು ನೀಡಿತು. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ನೀಡಿತು. 1400 ವರ್ಷಗಳ ಹಿಂದೆ ಇಸ್ಲಾಮ್ ಮಹಿಳೆಯರಿಗೆ ಪ್ರಗತಿ ಹೊಂದುವ ಸಮಾನ ಅವಕಾಶ ನೀಡಿತು.

ಆದುದರಿಂದ ನಮ್ಮ ಮುಸ್ಲಿಮ್ ಮಹಿಳೆಯರೊಂದಿಗೆ ಹೇಳುತ್ತೇನೆ: **"ನೀವು ಅಲ್ಲಾಹನ ಬಗ್ಗೆ ನಿಮ್ಮ ನಂಬಿಕೆ ಕಳಕೊಳ್ಳಬೇಡಿರಿ"** ಏಕೆಂದರೆ ಅಲ್ಲಾಹನೇ ಈ ಹಕ್ಕುಗಳನ್ನು ದಿವ್ಯಗೊಳಿಸಿರುವನು. ನೀವು ಇಸ್ಲಾಮಿನ ಬಗ್ಗೆ ಹತಾಶರಾಗಬೇಡಿರಿ ಮತ್ತು ವಸಾಹತುಶಾಹಿ ಮೌಲ್ಯಗಳಿಂದ ಪ್ರಭಾವಿತರಾಗಬೇಡಿರಿ. ಇಸ್ಲಾಮ್ ಧರ್ಮ ಮಹಿಳೆಯರ ಹಕ್ಕುಗಳ ನೈಜ ರಕ್ಷಕ ಧರ್ಮವಾಗಿದೆ. ನಿಮಗಿಂತ ಹಿಂದೆ ಗತಿಸಿ ಹೋದ ಮಹಾನ್ ಮಹಿಳೆಯರನ್ನು ಮರೆತು ಬಿಡಬೇಡಿರಿ. ಅವರು ಬಿಟ್ಟು ಹೋದ ಬಳುವಳಿಯನ್ನು ಮರೆತು ಬಿಡಬೇಡಿರಿ. ಇಸ್ಲಾಮಿನ ತತ್ವಗಳಿಗೆ ಪರಿಪೂರ್ಣವಾಗಿ ನಿಷ್ಠಾಬದ್ಧರಾಗಿದ್ದುಕೊಂಡು ಅವರು ಜೀವನದ ಎಲ್ಲ ಕ್ಷೇತ್ರಗಳಲ್ಲೂ ಪ್ರಾವೀಣ್ಯತೆಯನ್ನು ಗಳಿಸಿದರು. ನೀವು ಹಝ್ರತ್ ಖದೀಜರ(ರ) ಉದಾಹರಣೆಯನ್ನು ಮರೆತು ಬಿಡಬೇಡಿರಿ. ಅವರು ಸಾತ್ವಿಕತೆಯ ಮಾರ್ಗದರ್ಶಕ ಜ್ಯೋತಿ ಆಗಿದ್ದರು. ಅದರೊಂದಿಗೆ ಅವರು ಜಯಶಾಲಿ ವಾಣಿಜ್ಯೋದ್ಯಮಿಯೂ ಆಗಿದ್ದರು. ನೀವು ಹಝ್ರತ್ ಆಯಿಶರ(ರ) ಉದಾಹರಣೆಯನ್ನು ಮರೆತು ಬಿಡಬೇಡಿರಿ. ಅವರು ಮಹಾನ್ ಅಧ್ಯಾಪಕರಲ್ಲಿ ಒಬ್ಬರಾಗಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರ ಬಗ್ಗೆ ಹೇಳಿದ್ದರು – ಇಸ್ಲಾಮ್ ಧರ್ಮದ ತತ್ವಗಳ ಅರ್ಧ ಭಾಗವನ್ನು ಆಕೆಯಿಂದ ಕಲಿತುಕೊಳ್ಳಬಹುದೆಂದು. ನೀವು ಹಝ್ರತ್ ಉಮ್ಮಿ ಸಲಮರ(ರ) ಉದಾಹರಣೆ ಮರೆತು ಬಿಡಬೇಡಿರಿ. ಅವರು ಹುದೈಬಿಯಾ ಸಂಧಿಯ ನಿರ್ಣಾಯಕ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಉತ್ತಮ ಸಲಹೆ ನೀಡಿದ್ದರು. ನೀವು ಹಝ್ರತ್ ಅಲ್ ಶಾಫಿಯ ಬಿನ್ತ್ ಅಬ್ದುಲ್ಲರ ಉದಾಹರಣೆಯನ್ನು ಮರೆತು ಬಿಡಬೇಡಿರಿ. ಆಕೆ ಬುದ್ಧಿಶಾಲಿಯೂ ರೋಗ ಚಿಕಿತ್ಸಕಿಯೂ ಆಗಿದ್ದರು. ಹಝ್ರತ್ ಉಮರ್(ರ) ಅವರನ್ನು ಎಲ್ಲ ವಾಣಿಜ್ಯ ವ್ಯವಹಾರಗಳು ಇಸ್ಲಾಮೀ ಆಜ್ಞೆಗಳ, ಉಪದೇಶಗಳ ಮತ್ತು ಮೌಲ್ಯಗಳ ಪ್ರಕಾರ ನಡೆಯುತ್ತಿವೆಯೋ ಎಂಬುದನ್ನು ಖಾತರಿಪಡಿಸುವ ಹೊಣೆಗಾರಿಕೆಯನ್ನು ನಿರ್ವಹಿಸಲು ನೇಮಿಸಿದ್ದರು. ನೀವು ಹಝ್ರತ್ ರಾಬಿಅ ಬಸರಿಯವರ ಉದಾಹರಣೆಯನ್ನು ಮರೆತು ಬಿಡಬೇಡಿರಿ. ಅವರು ಒಬ್ಬ ಸೂಫೀ ಸಂತೆಯಾಗಿದ್ದರು. ಅವರ ಆಧ್ಯಾತ್ಮಿಕ ಸಾಮರ್ಥ್ಯ ಇಸ್ಲಾಮೀ ಚರಿತ್ರೆಯಲ್ಲಿ ವಿಸ್ಮಯಕರವಾಗಿದೆ. ನೀವು ರುಫೈದ ಅಲ್ ಅಸ್ಲಾಮಿಯರ ಉದಾಹರಣೆಯನ್ನು ಮರೆತು ಬಿಡಬೇಡಿರಿ. ಅವರು ಪ್ರಥಮ ನರ್ಸ್ ಮತ್ತು ಸರ್ಜನ್ ಆಗಿದ್ದರು. ಅವರು ಸ್ವಯಂ ಸೇವಕಿಯರಾದ ನರ್ಸ್‌ಗಳ ತಂಡವನ್ನು ಗಾಯಾಳುಗಳನ್ನು ಶುಶ್ರೂಷಿಸಲು ಯುದ್ಧದ ಸಂದರ್ಭಗಳಲ್ಲಿ ಒಯ್ಯುತ್ತಿದ್ದರು. ನೀವು ಹಝ್ರತ್ ಅಮ್ಮಾ ಜಾನ್‌ರ ಉದಾಹರಣೆಯನ್ನು ಮರೆತು ಬಿಡಬೇಡಿರಿ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ, ಅವರಿಗೆ ಕಷ್ಟವುಂಟಾದ ಕಾಲದಲ್ಲಿ ಸಹಾಯ ಮಾಡಿದರು. ಅವರು ತನ್ನ ಆಭರಣಗಳನ್ನು ಮಾರಾಟ ಮಾಡಿ ಜಮಾಅತಿನ ಆವಶ್ಯಕತೆಯನ್ನು ಈಡೇರಿಸಿದ್ದರು. ಅವರು ಮಹಿಳೆಯರಿಗೆ ಅವರ ಜೀವನಾಧಾರಗಳಿಗೆ ಸಂಬಂಧಿಸಿ ಮಾರ್ಗದರ್ಶನ ನೀಡುತ್ತಿದ್ದರು. ಅವರು ಮಹಿಳೆಯರ ಶಕ್ತೀಕರಣಕ್ಕೆ ಸಂಬಂಧಿಸಿ ಪ್ರಾಯೋಗಿಕ ಮಾದರಿ ತೋರಿಸಿದರು. ಆ ಸಮಯದಲ್ಲಿ ಮಹಿಳೆಯರಿಗೆ ಯಾವ ಸ್ಥಾನವೂ ಇರಲಿಲ್ಲ.

ನೀವು ಅಸಂಖ್ಯಾತ ಅಹ್ಮದೀ ಮುಸ್ಲಿಮ್ ಮಹಿಳೆಯರ ಉದಾಹರಣೆಗಳನ್ನು ಮರೆತು ಬಿಡಬೇಡಿರಿ. ಅವರು ಅಧ್ಯಕ್ಷರಾಗಿ, ಸೆಕ್ರೆಟರಿಗಳಾಗಿ, ಡಾಕ್ಟರ್‌ಗಳಾಗಿ ಕಾರ್ಯನಿರತರಾಗಿದ್ದಾರೆ. ಅವರು ನ್ಯಾಯವಾದಿಗಳಾಗಿ, ವಾಸ್ತುಶಿಲ್ಪಿಗಳಾಗಿ, ಜರ್ನಲಿಸ್ಟ್‌ಗಳಾಗಿ, ಸಂಶೋಧಕಿಯರಾಗಿ ಲೋಕದಾದ್ಯಂತ ಮಾನವರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಮಹಿಳೆಯರು ನಮ್ಮ ವಾತ್ಸಲ್ಯಮಯ ಮಾತೆಯರೂ ನಮ್ಮ ಬಗ್ಗೆ ನಿಗಾ ವಹಿಸುವ ಸಹೋದರಿಯರೂ ಪ್ರೀತಿಸುವ ಪತ್ನಿಯರೂ ಆಗಿದ್ದಾರೆ. ನಿಮಗೆ ನಿಮ್ಮ ಹಕ್ಕುಗಳನ್ನು ನೀಡಿದ ಇಸ್ಲಾಮ್ ಧರ್ಮದ ಬಗ್ಗೆ ಅಭಿಮಾನ ಹೊಂದಿರಿ. ಆ ಧರ್ಮ ನಿಮಗೆ ಹಕ್ಕುಗಳನ್ನು ನೀಡಿತು. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಿತು. ನೀವು ನಿಮ್ಮ ಪುತ್ರಿಯರನ್ನು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣ ಬದ್ಧರಾಗಿ ಜೀವಿಸಲು ಮತ್ತು ಜೀವಿತದ ಎಲ್ಲ ಕ್ಷೇತ್ರಗಳಲ್ಲೂ ಪ್ರಾವೀಣ್ಯತೆ ಗಳಿಸಲು ತರಬೇತಿ ನೀಡಿರಿ.

ನಾನು ನನ್ನ ಭಾಷಣವನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಪಂಚಮ ಖಲೀಫರ ಒಂದು ಭಾಷಣದಿಂದ ಒಂದು ಉಲ್ಲೇಖವನ್ನು ನಿಮ್ಮ ಮುಂದಿರಿಸಿ ಮುಕ್ತಾಯಗೊಳಿಸುತ್ತೇನೆ.

ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಬ್ಬನು ತನ್ನ ಪತ್ನಿಯೊಂದಿಗೆ ಸರಿಯಾದ ರೀತಿಯಲ್ಲಿ ವರ್ತಿಸುವುದಿಲ್ಲವಾದರೆ, ಆಕೆಯೊಂದಿಗೆ ಶಾಂತಿಯಿಂದ ಜೀವಿಸುವುದಿಲ್ಲವಾದರೆ, ಅಥವಾ ಆಕೆಯ ಹಕ್ಕುಗಳನ್ನು ಗೌರವಿಸುವುದಿಲ್ಲವಾದರೆ ಅವನು ಅಲ್ಲಾಹನಿಗೆ ಸಂಬಂಧಿಸಿದ ಹಕ್ಕುಗಳನ್ನು ಹೇಗೆ ತಾನೆ ಈಡೇರಿಸಬಲ್ಲನು ಮತ್ತು ಹೇಗೆ ತಾನೆ ಅಲ್ಲಾಹನ ಆರಾಧನೆ ಮಾಡಬಲ್ಲನು. ಅವನು ತನ್ನ ಪತ್ನಿಗೆ ಕಾರುಣ್ಯ ತೋರಿಸದಿರುವಾಗ ಅವನಿಗೆ ಅಲ್ಲಾಹನೊಂದಿಗೆ ಕಾರುಣ್ಯವನ್ನು ಬೇಡಿಕೊಳ್ಳಲು ಸಾಧ್ಯವಾಗುವುದಾದರೂ ಹೇಗೆ? ಆದುದರಿಂದ, **ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿದರು: ಯಾರು ತನ್ನ ಪತ್ನಿಯೊಂದಿಗೆ ಅತ್ಯುತ್ತಮವಾಗಿ ವರ್ತಿಸುತ್ತಾನೋ ಅವನು ನಿಮ್ಮ ಪೈಕಿ ಅತ್ಯುತ್ತಮನಾಗಿದ್ದಾನೆ.** ಇಸ್ಲಾಮ್ ಹೊರತು ಬೇರೆ ಯಾವ ಧರ್ಮ ಮಹಿಳೆಯರಿಗೆ ಇಂತಹ ಭದ್ರತೆ ನೀಡುತ್ತದೆ ಮತ್ತು ಯಾವ ಧರ್ಮ ಮಹಿಳೆಯರ ಹಕ್ಕುಗಳ ಬಗ್ಗೆ ಈ ರೀತಿ ಲಕ್ಷ್ಯ ನೀಡುತ್ತದೆ?

(**Ahmadiyya Gazette Canada - October 2019**)

# ಮೃತರಾದ ಜನರು ಪುನಃ ಜೀವಂತರಾಗಿ ಲೋಕಕ್ಕೆ ಮರಳಿ ಬರಲಾರರು

ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಸಾಕ್ಷ್ಯಾಧಾರಗಳ ಮೂಲಕ ಹಝ್ರತ್ ಈಸಾ ಮಸೀಹ್(ಅ) ಮೃತರಾದರೆಂದು ಸಾಬೀತುಪಡಿಸಿದಾಗ ಕೆಲವು ಜನರು ಹೀಗೆ ಹೇಳುತ್ತಾರೆ: "ಹಝ್ರತ್ ಈಸಾ ಮಸೀಹ್(ಅ) ಮೃತರಾದರೂ ಅವರನ್ನು ಅಲ್ಲಾಹನು ಪುನಃ ಜೀವಂತಗೊಳಿಸಿ ಪುನಃ ಲೋಕಕ್ಕೆ ಕಳುಹಿಸುವನು." ಇದಕ್ಕೆ ಉತ್ತರವಾಗಿ ತಿಳಿದುಕೊಳ್ಳಬೇಕಾದುದೇನೆಂದರೆ, ಮೃತರಾದವರು ಪುನಃ ಜೀವಂತರಾಗಿ ಈ ಲೋಕಕ್ಕೆ ಮರಳಿ ಬರುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಅನುಸಾರವಾಗಿ ಅಸಾಧ್ಯವೂ ಅಲ್ಲಾಹನ ಶಾಶ್ವತ ನಡೆವಳಿಕೆಗಳಿಗೆ ವಿರುದ್ಧವೂ ಆಗಿದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಮನುಷ್ಯರನ್ನು ಸಂಬೋಧಿಸಿ ಹೀಗೆ ಹೇಳುತ್ತಾನೆ:

**ಸುಮ್ಮ ಇನ್ನಕುಮ್ ಬಅ್‌ದ ಧಾಲಿಕ ಲಮಯ್ಯುತೂನ್. ಸುಮ್ಮ ಇನ್ನಕುಮ್ ಯೌಮಲ್ ಖಿಯಾಮತಿ ತುಬ್‌ಅಸೂನ್.**

ಮತ್ತೆ, ಖಂಡಿತವಾಗಿಯೂ ಆ ಬಳಿಕ ನೀವು ಮೃತರಾಗುವಿರಿ. ಆ ಮೇಲೆ, ದಿಟವಾಗಿಯೂ ಪುನರುತ್ಥಾನ ದಿನದಂದು ನೀವು ಎಬ್ಬಿಸಲ್ಪಡುವಿರಿ. (23: 16,17).

ಈ ವಚನದಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೀಗೆ ಹೇಳಿದ್ದಾನೆ: ಮನುಷ್ಯನು ಮೃತನಾದ ನಂತರ ಪುನರುಜ್ಜೀವಿಸಲ್ಪಡುವುದು ಪುನರುತ್ಥಾನ ದಿನದಂದೇ ಆಗಿದೆ. ಅದರ ಮೊದಲು ಖಂಡಿತವಾಗಿಯೂ ಪುನರುಜ್ಜೀವಿಸಲ್ಪಡಲಾರನು.

ಅಲ್ಲಾಹನು ಇನ್ನೊಂದು ಪವಿತ್ರ ಖುರ್‌ಆನ್ ವಚನದಲ್ಲಿ ಹೀಗೆ ಹೇಳಿದ್ದಾನೆ:

**ವ ಮಿನ್ ವರಾಯಿಹಿಮ್ ಬರ್‌ಝುಖುನ್ ಇಲಾ ಯೌಮಿ ಯುಬ್‌ಅಸೂನ್**

"ಅವರು ಪುನರುತ್ಥಾನಗೊಳಿಸಲ್ಪಡುವ ದಿನದ ತನಕ ಅವರ ಹಿಂದೆ ಒಂದು ತಡೆಯಿದೆ." (23:101).

ಇದರ ವ್ಯಾಖ್ಯಾನ ಹೀಗೆ: ಯಾರು ಮೃತರಾಗುತ್ತಾರೋ ಅವರ ಮತ್ತು ಇಹಲೋಕದ ಮಧ್ಯೆ ಒಂದು ತಡೆ ಇರುತ್ತದೆ. ಅದು ಪುನರುತ್ಥಾನದ ದಿನದ ತನಕ ಇರುವುದು.

ಈ ವಚನ ಸ್ಪಷ್ಟಪಡಿಸುವುದೇನೆಂದರೆ, ಯಾರು ಮೃತರಾಗುವರೋ ಅವರು ಪುನರುತ್ಥಾನ ದಿನದಂದೇ ಜೀವಂತರಾಗಿ ಎಬ್ಬಿಸಲ್ಪಡುವರು ಎಂದು ಅಲ್ಲಾಹನು ತೀರ್ಮಾನಿಸಿದ್ದಾನೆ. ಪುನರುತ್ಥಾನ ದಿನದ ತನಕ ಅವನ ಮತ್ತು ಇಹಲೋಕದ ಮಧ್ಯೆ ಒಂದು ತಡೆಗಟ್ಟನ್ನು ಅಲ್ಲಾಹನು ಇರಿಸಿದ್ದಾನೆ. ಅದನ್ನು ಪುನರುತ್ಥಾನದ ದಿನದಂದು ಎತ್ತಿ ಬಿಡಲಾಗುವುದು.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ:

**ವ ಹರಾಮುನ್ ಅಲಾ ಖರ್‌ಯತಿನ್ ಅಹ್‌ಲಕ್‌ನಾ ಹಾ ಅನ್ನಹುಮ್ ಲಾ ಯರ್‌ಜಿಊನ್.**

"ನಾವು ನಾಶಪಡಿಸಿದ ನಾಡಿನ ಜನರು ಮರಳಿ ಬರಲಾರರೆಂಬುದು ಒಂದು ಅಲಂಘ್ಯ ನಿಯಮವಾಗಿದೆ." (21:96).

ಇದರ ವ್ಯಾಖ್ಯಾನವೇನೆಂದರೆ, ಯಾರನ್ನು ಅಲ್ಲಾಹನು ನಾಶಗೊಳಿಸುತ್ತಾನೋ ಅವರು ಮರಳಿ ಇಹಲೋಕಕ್ಕೆ ಬರುವುದು ನಿಷಿದ್ಧಗೊಳಿಸಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಒಂದು ಹದೀಸು ಈ ವಿಷಯವನ್ನು ಚೆನ್ನಾಗಿ ಸ್ಪಷ್ಟಗೊಳಿಸುತ್ತದೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಉಹುದ್ ಯುದ್ಧದಲ್ಲಿ ಜಾಬಿರ್ ಎಂಬ ಸಹಾಬಿಯ ಪಿತ ಕೊಲ್ಲಲ್ಪಟ್ಟಾಗ ಅವರು ಅಲ್ಲಾಹನ ಸನ್ನಿಧಿಗೆ ಹಾಜರಾದಾಗ ಅಲ್ಲಾಹು ಅವರೊಂದಿಗೆ ಹೇಳಿದನು: ನೀನು ಬೇಡುವುದನ್ನು ನಾನು ನಿನಗೆ ಕೊಡುವೆನು. ಆಗ ಜಾಬಿರರ ಪಿತ ಹೇಳಿದರು: ಹೇ ಅಲ್ಲಾಹ್, ನನ್ನನ್ನು ನೀನು ಪುನಃ ಜೀವಂತಗೊಳಿಸು. ನಾನು ಇಸ್ಲಾಮಿನ ಮಾರ್ಗದಲ್ಲಿ ಹೋರಾಡಿ ಪುನಃ ನನ್ನ ಜೀವವನ್ನರ್ಪಿಸುವೆನು. ಆಗ ಅಲ್ಲಾಹನು ಹೇಳಿದನು: **ಸಬಖಲ್ ಖೌಲು ಮಿನ್ನೀ ಅನ್ನಹುಮ್ ಲಾ ಯರ್‌ಜಿಊನ್** – ಹೀಗೆ ಆಗಲು ಸಾಧ್ಯವಿಲ್ಲ. ಯಾರು ಮೃತರಾಗುತ್ತಾರೋ ಅವರು ಲೋಕಕ್ಕೆ ಮರಳಿ ಹೋಗಲಾರರೆಂದು ಸೈದ್ಧಾಂತಿಕ ತೀರ್ಪು ಆಗಿದೆ.* (ತಿರ್‌ಮಧೀ).

ಈ ಹದೀಸು ಸ್ಪಷ್ಟವಾಗಿರುವಾಗ ಯಾವುದೇ ಹೆಚ್ಚಿನ ಸಾಕ್ಷ್ಯಾಧಾರ ಆವಶ್ಯಕತೆಯಿಲ್ಲವೆಂದು ನಾನು ಭಾವಿಸುತ್ತೇನೆ. ಆದರೆ ಆಶ್ಚರ್ಯಕರವಾದುದೇನೆಂದರೆ, ಹಝ್ರತ್ ಈಸಾ(ಅ) ಮೃತರಾಗಿದ್ದರೂ ಪುನಃ ಲೋಕಕ್ಕೆ ಮರಳಿ ಬರುವರೆಂದು ನಮ್ಮ ವಿರೋಧಿಗಳಾದ ಕೆಲವು ಮತಪಂಡಿತರು ಆಶಿಸುತ್ತಾರೆ. ಮಾತ್ರವಲ್ಲ ಹಝ್ರತ್ ಈಸಾ ಮಸೀಹ್(ಅ) ಮೃತರಾದವರನ್ನು ಸ್ವತಃ ಜೀವಂತಗೊಳಿಸಿದರೆಂದು ಹೇಳುತ್ತಾರೆ. ವಾಸ್ತವಿಕ ವಿಷಯವೇನೆಂದರೆ, ಹಝ್ರತ್ ಈಸಾ ಮಸೀಹ್ ಮೃತರನ್ನು ಯಾವ ಅರ್ಥ ಪ್ರಕಾರ ಜೀವಂತಗೊಳಿಸಿದರೋ ಅದೇ ಅರ್ಥ ಪ್ರಕಾರ ಎಲ್ಲ ಪ್ರವಾದಿಗಳು ಮೃತರಾದವರನ್ನು ಜೀವಂತಗೊಳಿಸುತ್ತಾ ಇದ್ದರು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಇತರ ಪ್ರವಾದಿಗಳು ಜೀವಂತಗೊಳಿಸಿದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮೃತರಾದವರನ್ನು ಜೀವಂತ ಗೊಳಿಸಿದ್ದರು. ವಾಸ್ತವಿಕ ಸಮಸ್ಯೆ ಏನೆಂದರೆ, ಅರಿವಿನ ಕೊರತೆಯ ಕಾರಣದಿಂದ ಸಾಮಾನ್ಯ ಜನರು ಶಬ್ದಗಳ ಬಾಹ್ಯ ಅರ್ಥವನ್ನೇ ತೆಗೆದುಕೊಳ್ಳುತ್ತಾರೆ. ಕೆಲವು ಸಾರಿ ಒಂದು ಪದವನ್ನು ಆಲಂಕಾರಿಕವಾಗಿಯೂ ಉಪಮಾ ರೂಪದಲ್ಲೂ ಬಳಸಲಾಗುತ್ತಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ನೋಡಿರಿ:

**ಮನ್‌ಕಾನ ಫೀ ಹಾಧೀಹೀ ಅಅ್‌ಮಾ ಫ ಹುವ ಫಿಲ್ ಆಖಿರತಿ ಅಅ್‌ಮಾ.** "ಯಾರು ಇಹಲೋಕದಲ್ಲಿ ಅಂಧನಾಗಿರುತ್ತಾನೋ ಅವನು ಪರಲೋಕದಲ್ಲಿಯೂ ಅಂಧನಾಗುವನು." (17:73).

*ಇಲ್ಲಿ ಚಿಂತಿಸಬೇಕಾದ ವಿಷಯವೇನೆಂದರೆ, ಅಲ್ಲಾಹನು ಸ್ವತಃ ಹೇಳಿದನು: ಏನನ್ನಾದರೂ ಬೇಡಿಕೊಳ್ಳು ಎಂದು. ಬೇಡಿಕೆ ಇಟ್ಟವರು ಶಹೀದ್ ಮತ್ತು ಉನ್ನತ ಸ್ಥಾನ ಪಡೆದ ಸಹಾಬಿ ಆಗಿದ್ದರು. ಆದರೆ ಆ ಬೇಡಿಕೆ ಅಲ್ಲಾಹನ ಸ್ಪಷ್ಟ ತೀರ್ಮಾನಕ್ಕೆ ಮತ್ತು ಅಲ್ಲಾಹನ ನಡೆವಳಿಕೆಗೆ ವಿರುದ್ಧವಾದುದರಿಂದ ಆ ಬೇಡಿಕೆಯನ್ನು ನಿರಾಕರಿಸಲಾಯಿತು.

ಈ ವಚನದಲ್ಲಿ ಹೇಳಿದುದು ಆಧ್ಯಾತ್ಮಿಕವಾಗಿ ಅಂಧನಾದವನ ಬಗ್ಗೆ ಎಂದೂ ಶಾರೀರಿಕವಾಗಿ ಅಂಧನಾದವನ ಬಗ್ಗೆ ಅಲ್ಲ ಎಂಬುದರ ಬಗ್ಗೆ ಎಲ್ಲರೂ ಒಮ್ಮತ ಹೊಂದಿದ್ದಾರೆ. ಆದರೆ ಹಝ್ರತ್ ಈಸಾ ಮಸೀಹ್ ಆಧ್ಯಾತ್ಮಿಕವಾಗಿ ಮೃತರಾದ ಜನರನ್ನು ಜೀವಂತಗೊಳಿಸಿದರೆಂಬ ಅರ್ಥ ಏಕೆ ಅಂಗೀಕರಿಸುವುದಿಲ್ಲ.

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಕುರಿತು ಸತ್ಯವಿಶ್ವಾಸಿಗಳೊಂದಿಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

**ಯಾ ಅಯ್ಯುಹಲ್ಲಧೀನ ಆಮನುಸ್ತಜೀಬೂ ಲಿಲ್ಲಾಹಿ ವ ಲಿರ್ರಸೂಲಿ ಇಧಾ ದಆಕುಮ್ ಲಿಮಾ ಯುಹ್‌ಯೀಕುಮ್.**

"ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ – ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ." (8:25).

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಜನರನ್ನು ಜೀವಂತಗೊಳಿಸುತ್ತಾರೆಂದು ಎಷ್ಟು ಸ್ಪಷ್ಟವಾಗಿ ಈ ವಚನದಲ್ಲಿ ಹೇಳಿದೆ ಎಂದು ನೋಡಿರಿ. ಆದರೆ ನಮ್ಮ ವಿರೋಧಿಗಳು ಸಹ ಈ ವಚನದಲ್ಲಿ ಬಳಸಲಾದ ಜೀವಂತಗೊಳಿಸುವ ಪದಕ್ಕೆ ಆಧ್ಯಾತ್ಮಿಕವಾಗಿ ಜೀವಂತಗೊಳಿಸುವ ಅರ್ಥವನ್ನು ನೀಡುತ್ತಾರೆ. ಆದರೆ ಇದೇ ಪದವನ್ನು ಹಝ್ರತ್ ಈಸಾ ಮಸೀಹರಿಗೆ(ಅ) ಸಂಬಂಧಿಸಿ ಬಳಸುವಾಗ ಅದಕ್ಕೆ ಮೃತರನ್ನು ಜೀವಂತಗೊಳಿಸುವ ಅರ್ಥ ನೀಡುತ್ತಾರೆ. ಅತ್ಯಂತ ದುಃಖಕರವಾದ ವಿಷಯವೇನೆಂದರೆ, ನಮ್ಮ ವಿರೋಧಿಗಳಾದ ಮತಪಂಡಿತರು ಹಝ್ರತ್ ಈಸಾ ಮಸೀಹರಿಗೆ(ಅ) ನೀಡುವ ಗೌರವವನ್ನು ಶಿರ್ಕ್‌ಗೆ (ಬಹುದೇವಾರಾಧನೆಗೆ) ತಲಪಿಸಿದ್ದಾರೆ. ಆದರೆ ಅವರೆದುರಿಗೆ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಗೌರವದ ಬಗ್ಗೆ ನಿರ್ಲಕ್ಷ್ಯ ಹೊಂದಿದ್ದಾರೆ.

ಮೃತರು ಪುನಃ ಜೀವಂತರಾಗುವುದನ್ನು ಪವಿತ್ರ ಖುರ್‌ಆನ್ ನಿಷಿದ್ಧಗೊಳಿಸುತ್ತದೆ ಎಂದು ಮನವರಿಕೆ ಮಾಡಿಕೊಳ್ಳಲು ನಿರ್ಬಂಧಿತರಾಗುವಾಗ ನಮ್ಮ ವಿರೋಧಿಗಳು ಹೀಗೆ ಹೇಳುತ್ತಾರೆ: ಅಲ್ಲಾಹನ ಸಾಮಾನ್ಯ ನಿಯಮ ಪ್ರಕಾರ ಮೃತರಾದವರು ಜೀವಂತರಾಗಿ ಇಹಲೋಕಕ್ಕೆ ಆಗಮಿಸಲಾರರು ಎನ್ನುವುದು ಸರಿಯಾಗಿದೆ. ಆದರೆ ಹಝ್ರತ್ ಈಸಾ ಮಸೀಹ್(ಅ) ಮೃತರಾಗಿದ್ದರೂ ಅವರನ್ನು ಜೀವಂತಗೊಳಿಸಿ ಈ ಲೋಕಕ್ಕೆ ಕರೆದು ತರಲು ಅಲ್ಲಾಹನಿಗೆ ಶಕ್ತಿ ಇಲ್ಲವೇ? ಎಂದು ಅವರು ಕೇಳುತ್ತಾರೆ. ಆದರೆ ನೀವು ನೋಡಿರಿ, ಅವರ ಈ ಹೇಳಿಕೆ ಒಂದು ಸಾಕ್ಷ್ಯಾಧಾರವಾಗುವುದಾದರೂ ಹೇಗೆ? ಅಲ್ಲಾಹನು ಎಲ್ಲ ಕಾರ್ಯಗಳನ್ನು ಮಾಡಲು ಶಕ್ತಿಯುಳ್ಳವನೆಂಬುದನ್ನು ಯಾರಿಗೆ ನಿರಾಕರಿಸಲು ಸಾಧ್ಯ. ಆದರೆ ಒಂದು ಕೆಲಸ ಮಾಡಲು ಅಲ್ಲಾಹನಿಗೆ ಸಾಮರ್ಥ್ಯವಿರುವುದು ಅವನು ಆ ಕೆಲಸವನ್ನು ಕೃತಿರೂಪಕ್ಕೆ ತಂದನೆಂಬುದಕ್ಕೆ ಸಾಕ್ಷ್ಯವಾಗಲಾರದು. ನೀವು ಯೋಚಿಸಿರಿ, ಹಝ್ರತ್ ಮುಹಮ್ಮದ್ ಪೈಗಂಬರರನ್ನೂ(ಸ) ಜೀವಂತಗೊಳಿಸಿ ಪುನಃ ಲೋಕಕ್ಕೆ ಕರೆದುಕೊಂಡು ಬರಲು ಅಲ್ಲಾಹನಿಗೆ ಶಕ್ತಿ ಇಲ್ಲವೇ? ಆದುದರಿಂದ ಹಝ್ರತ್ ಪೈಗಂಬರ್(ಸ) ಪುನಃ ಜೀವಂತರಾಗಿ ಈ ಲೋಕಕ್ಕೆ ಮರಳಿ ಬರುವರೆಂದು ಇದರಿಂದ ಸಾಬೀತು ಆಗುತ್ತದೆಯೋ? ಈಗಲೇ ತಕ್ಷಣ ಖಿಯಾಮತ್ (ಲೋಕಾಂತ್ಯ) ಸಂಭವಿಸುವಂತೆ ಮಾಡಲು ಅಲ್ಲಾಹನಿಗೆ ಶಕ್ತಿ ಇಲ್ಲವೇ? ಇದರಿಂದ ಈಗಾಗಲೇ ಖಿಯಾಮತ್ ಬಂದು ಬಿಟ್ಟಿದೆ ಎಂದು ಸಾಬೀತು ಆಗುತ್ತದೆಯೋ? ಇಂತಹ ಸಾಕ್ಷ್ಯಾಧಾರಗಳನ್ನು ಆಲಿಸಿ ಇಂದಿನ ಕಾಲದ ಮತಪಂಡಿತರ ಬುದ್ಧಿ ಮತ್ತು ವಿವೇಕದ ಬಗ್ಗೆ ಅದು ಎಷ್ಟು ಕೆಟ್ಟು ಹೋಗಿದೆ ಎಂದು ದುಃಖವಾಗುತ್ತದೆ.

ಸಹೋದರರೇ, ಅಲ್ಲಾಹನಿಗೆ ಶಕ್ತಿ ಸಾಮರ್ಥ್ಯಗಳು ಇರುವುದರಿಂದ ಆ ಶಕ್ತಿ ಸಾಮರ್ಥ್ಯಗಳನ್ನು ಅವನು ಪ್ರಕಟಿಸಿದನು ಎಂದು ಸಾಬೀತಾಗುವುದಿಲ್ಲ. ಅಲ್ಲಾಹನು ಈ ವಿಷಯಕ್ಕೆ ಸಂಬಂಧಿಸಿ ತನ್ನ ನಡೆವಳಿಕೆಯನ್ನು ಕೈಬಿಟ್ಟು ಒಂದು ವಿಶಿಷ್ಟ ಅಸಾಧಾರಣ ಶಕ್ತಿ ಸಾಮರ್ಥ್ಯವನ್ನು ಪ್ರಕಟಿಸಿದನೆಂದು ಸಾಕ್ಷ್ಯಾಧಾರ ನೀಡುವುದಾದರೆ ಆ ಅಸಾಧಾರಣ ಶಕ್ತಿಯ ಪ್ರಕಟಣೆ ಸಾಬೀತಾಗುತ್ತದೆ.

ನಾವು ಸಾಬೀತುಗೊಳಿಸುತ್ತಿರುವುದೇನೆಂದರೆ, ಮೃತರಾದವರನ್ನು ಜೀವಂತಗೊಳಿಸಿ ಲೋಕಕ್ಕೆ ಮರಳಿ ತರಲು ಅಲ್ಲಾಹನಿಗೆ ಶಕ್ತಿ ಇದೆ. ಆದರೆ ಹಾಗೆ ಎಂದೂ ಮಾಡುವುದಿಲ್ಲವೆಂದು ಅವನು ನಿರ್ಧರಿಸಿರುವನು. ನೀವು ಇನ್ನೊಂದು ವಿಷಯದ ಬಗ್ಗೆ ಯೋಚಿಸಿರಿ. ಅಲ್ಲಾಹನ ಶಕ್ತಿಸಾಮರ್ಥ್ಯಕ್ಕೆ ಸಂಬಂಧಿಸಿಯೇ ತೀರ್ಮಾನ ಮಾಡಬೇಕಾಗಿದ್ದರೆ, ಮುಸ್ಲಿಮ್ ಸಮುದಾಯದಲ್ಲಿಯೇ ಮಸೀಹರನ್ನು ಹುಟ್ಟುವಂತೆ ಮಾಡಲು ಅಲ್ಲಾಹನಿಗೆ ಶಕ್ತಿ ಇಲ್ಲವೇ? ಯೋಚಿಸಿರಿ, ಅಲ್ಲಾಹನು ಮುಸ್ಲಿಮ್ ಸಮುದಾಯದಿಂದಲೇ ವಾಗ್ದತ್ತ ಮಸೀಹರನ್ನು ತರುವುದರಿಂದಲೇ ಅಲ್ಲಾಹನ ಶಕ್ತಿಸಾಮರ್ಥ್ಯಗಳ ಹೆಚ್ಚಿನ ಪ್ರಕಟಣೆ ಉಂಟಾಗುತ್ತದೆಯೇ ಹೊರತು ಹಿಂದೆ ಆಗಮಿಸಿದ ಈಸಾ ಮಸೀಹರನ್ನು(ಅ) ಪುನಃ ತರುವುದರಿಂದ ಅಲ್ಲ. ಒಂದು ವಸ್ತುವನ್ನು ಭದ್ರವಾಗಿ ಇಟ್ಟುಕೊಳ್ಳುವ ಆವಶ್ಯಕತೆ ಒಬ್ಬನಿಗೆ ಉಂಟಾಗುವುದು. ಆ ವಸ್ತು ನಾಶವಾದರೆ ಪುನಃ ಅದನ್ನು ಪಡೆಯಲು ಅಥವಾ ಅದರ ಹಾಗಿರುವುದನ್ನು ಪಡೆಯಲು ಕಷ್ಟವಾಗುವುದು ಎಂದು ಹೆದರುವಾಗ, ಆದರೆ ಸರ್ವಶಕ್ತನಾದವನು ತನ್ನ ನಡೆವಳಿಕೆಗೆ ವಿರುದ್ಧವಾಗಿ ವಸ್ತುಗಳನ್ನು ಭದ್ರವಾಗಿ ಇಟ್ಟುಕೊಳ್ಳುವುದಿಲ್ಲ. ಏಕೆಂದರೆ ಆವಶ್ಯಕವಾದಾಗಲೆಲ್ಲ ಅಂತಹ ಹಲವಾರು ವಸ್ತುಗಳನ್ನು ಸೃಷ್ಟಿಸಬಲ್ಲೆನೆಂದು ಅವನಿಗೆ ತಿಳಿದಿದೆ. ಆದುದರಿಂದ ಒಬ್ಬ ಹೊಸ ಮಸೀಹರನ್ನು ಮುಸ್ಲಿಮ್ ಸಮುದಾಯಕ್ಕೆ ಕಳುಹಿಸುವ ಮೂಲಕವೇ ಅಲ್ಲಾಹನ ಶಕ್ತಿಸಾಮರ್ಥ್ಯ ಹೆಚ್ಚು ಸ್ಪಷ್ಟವಾಗಿ ಪ್ರಕಟವಾಗುತ್ತಿದೆಯೇ ಹೊರತು ಹಿಂದೆ ಆಗಮಿಸಿದ ಈಸಾ ಮಸೀಹರನ್ನು(ಅ) ಎರಡು ಸಾವಿರ ವರ್ಷಗಳ ಕಾಲ ಸಂರಕ್ಷಿಸಿ ಮರಳಿ ಲೋಕಕ್ಕೆ ಕಳುಹಿಸುವುದರಲ್ಲಿ ಅಲ್ಲ.

ಪುನಃ ನಾನು ಹೇಳಲು ಬಯಸುತ್ತೇನೆ, ಮೃತನಾದ ಒಬ್ಬನನ್ನು ಅಲ್ಲಾಹನು ಲೋಕಕ್ಕೆ ಮರಳಿ ಕಳುಹಿಸಬೇಕಾಗಿದ್ದರೆ ಅವನು ಹಝ್ರತ್ ಪೈಗಂಬರರನ್ನು(ಸ) ಪುನರುಜ್ಜೀವಿಸಿ ಏಕೆ ಕಳುಹಿಸಬಾರದು. ಏನು ಹಝ್ರತ್ ಈಸಾ ಮಸೀಹ್(ಅ) ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹರಿಗಿಂತ(ಸ) ಹೆಚ್ಚಿನ ಸುಧಾರಣೆ ಮಾಡಬಲ್ಲರೇ?

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **ಕಬುರತ್ ಕಲಿಮತನ್ ತಖ್‌ರುಜು ಮಿನ್ ಅಫ್‌ವಾಹಿಹಿಮ್ ಇನ್ ಯಖೂಲೂನ ಇಲ್ಲಾ ಕಧಿಬಾ.** "ಅವರ ಬಾಯಿಯಿಂದ ಹೊರಡುವ ಮಾತುಗಳು ಅತಿ ಕಠೋರವಾಗಿವೆ. ಸುಳ್ಳು ಹೊರತು ಅವರು ಹೇಳುವುದಿಲ್ಲ."(18:6).

## ವಾಗ್ದತ್ತ ಮಸೀಹ್ ಮುಸ್ಲಿಮ್ ಸಮುದಾಯದಲ್ಲಿಯೇ ಆಗಮಿಸುವರು ಎಂದು ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ಸಾಬೀತಾಗುತ್ತದೆ

ಇದರ ಮೊದಲು ನೀಡಿದ ವಿವರಣೆಗಳ ಮೂಲಕ ಹಝ್ರತ್ ಈಸಾ ಮಸೀಹ್[ಅ] ಆಕಾಶಕ್ಕೆ ದೇಹ ಸಮೇತ ಜೀವಂತವಾಗಿ ಎತ್ತಲ್ಪಟ್ಟಿಲ್ಲ ಎಂದೂ ಅವರು ನಿಧನ ಹೊಂದಿರುವರೆಂದೂ ಸಾಬೀತುಗೊಳಿಸಲಾಗಿದೆ. ಮೃತನಾದವನು ಪುನಃ ಜೀವಂತನಾಗಿ ಈ ಲೋಕಕ್ಕೆ ತರಲ್ಪಡುವುದಿಲ್ಲ ಎಂದೂ ಸಾಬೀತಾಗಿದೆ. ಇದರಿಂದ ತಿಳಿಯುವುದೇನೆಂದರೆ, ಆಗಮಿಸಲಿರುವ ವಾಗ್ದತ್ತ ಮಸೀಹ್ ಮುಸ್ಲಿಮ್ ಸಮುದಾಯದಿಂದಲೇ ಬರುವರು. ಆದರೆ ಓದುಗರಿಗೆ ಹೆಚ್ಚು ಮನವರಿಕೆಯಾಗಲು ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ವಾಗ್ದತ್ತ ಮಸೀಹ್ ಹಿಂದೆ ಆಗಮಿಸಿದವರಲ್ಲ; ಅವರು ಬೇರೆಯೇ ಒಬ್ಬರಾಗಿರುವರು, ಅವರು ಮುಸ್ಲಿಮ್ ಸಮುದಾಯದಲ್ಲೇ ಜನಿಸುವರು ಎಂದು ಸೂಚಿಸಿದುದರ ಬಗ್ಗೆ ವಿವರಿಸುವೆನು.

## ಹಝ್ರತ್ ಪೈಗಂಬರರ[ಸ] ಎಲ್ಲ ಖಲೀಫರು ಅವರ ಸಮುದಾಯದಿಂದಲೇ ಬರುವರು

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: **ವಅದಲ್ಲಾಹುಲ್ಲಧೀನ ಆಮನೂ ಮಿನ್‌ಕುಮ್ ವ ಅಮಿಲುಸ್ಸಾಲಿಹಾತಿ ಲಯಸ್‌ತಖಲಿಫನ್ನಹುಮ್ ಫಿಲ್ ಅರ್‌ಝಿ ಕಮಸ್ತಖ್‌ಲಫಲ್ಲಧೀನ ಮಿನ್ ಖಬ್‌ಲಿಹಿಮ್.**

ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನು ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನು ಎಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ." (24:56).

ಈ ವಚನದಲ್ಲಿ ಅಲ್ಲಾಹನು ಹೀಗೆ ವಾಗ್ದಾನ ನೀಡಿದ್ದಾನೆ: ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಲ್ಲಿ ಖಲೀಫರನ್ನು ನೇಮಿಸಿದ ಹಾಗೆಯೇ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸಮುದಾಯದಲ್ಲೂ ಅಲ್ಲಾಹನು ಖಲೀಫರನ್ನು ನೇಮಿಸುವನು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಅವರ ಅನುಯಾಯಿಗಳಾದ ಬನೀ ಇಸ್ರಾಈಲ್ ಜನರಲ್ಲಿ ಅನೇಕ ಖಲೀಫರನ್ನು ಅಲ್ಲಾಹನು ಕಳುಹಿಸಿದನು. ಆ ಖಲೀಫರು ಹಝ್ರತ್ ಮೂಸಾ ಅಲೈಹಿಸ್ಸಲಾಮರ ಗ್ರಂಥವಾದ ತೌರಾತಿನ ಸೇವೆ ಮಾಡುತ್ತಾ ಇದ್ದರು ಮತ್ತು ಬನೀ ಇಸ್ರಾಈಲ್‌ರನ್ನು ಸತ್ಯದ ಮಾರ್ಗದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುತ್ತಿದ್ದರು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಲ್ಲಿ ಆಗಮಿಸುತ್ತಿದ್ದ ಖಲೀಫರ ಶೃಂಖಲೆ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರಲ್ಲಿ ಪರಿಪೂರ್ಣತೆಯ ಉತ್ತುಂಗವನ್ನು ತಲಪಿತು. ಅನಂತರ ಮುಸ್ಲಿಮ್ ಸಮುದಾಯದಲ್ಲೂ ಇದೇ ರೀತಿಯ ಖಿಲಾಫತ್ ಶೃಂಖಲೆ ಜಾರಿಗೊಳ್ಳುವ ಬಗ್ಗೆ ವಾಗ್ದಾನ ನೀಡಲಾಯಿತು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಅಂತಿಮ ಖಲೀಫರಾಗಿ ಹಝ್ರತ್ ಈಸಾ ಮಸೀಹ್[ಅ] ಆಗಮಿಸಿದ ಹಾಗೆಯೇ ಮುಸ್ಲಿಮ್ ಸಮುದಾಯದಲ್ಲೂ ಲೋಕದ ಅಂತಿಮ ಕಾಲಘಟ್ಟದಲ್ಲಿ ಒಬ್ಬ ಮಸೀಹರನ್ನು ಕಳುಹಿಸಲು ಅಲ್ಲಾಹನು ನಿರ್ಧರಿಸಿದನು. ಅವರು ಇಸ್ಲಾಮಿನ ಖಲೀಫರ ವಲಯವನ್ನು ಪೂರ್ಣಗೊಳಿಸುವವರೂ ಪರಿಪೂರ್ಣಗೊಳಿಸುವವರೂ ಆಗುವರು. ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಖಿಲಾಫತ್ ಶೃಂಖಲೆ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಖಿಲಾಫತ್ ಶೃಂಖಲೆಯ ಮಧ್ಯೆ ಸ್ಪಷ್ಟವಾದ ಹೋಲಿಕೆ ಇದೆ ಎಂದು ಈ ವಚನದಲ್ಲಿ ಬಳಸಲಾದ **"ಕಮಾ"** ಪದ ಸೂಚಿಸುತ್ತದೆ. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಖಿಲಾಫತ್ ಶೃಂಖಲೆಯ ಮಸೀಹ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಿಲಾಫತ್ ಶೃಂಖಲೆಯ ಮಸೀಹ್ ಬೇರೆ ಬೇರೆ ಆಗಿರದಿದ್ದರೆ ಈ ಹೋಲಿಕೆಯು ತಪ್ಪಾಗುತ್ತದೆ. ಏಕೆಂದರೆ ಹೋಲಿಕೆಯನ್ನು ಸೂಚಿಸುವಾಗ ಬೇರೆ ಬೇರೆ ವ್ಯಕ್ತಿತ್ವಗಳನ್ನು ಸೂಚಿಸಲಾಗುತ್ತದೆ. ಹೋಲಿಕೆಯಾದ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆಯೋ ಆತನನ್ನು ಯಾರಿಗೆ ಹೋಲಿಸಿ ಹೇಳಲಾಗುತ್ತಿದೆಯೋ ಇವರಿಬ್ಬರು ಬೇರೆ ಬೇರೆ ವ್ಯಕ್ತಿಗಳಾಗಲು ಮಾತ್ರ ಸಾಧ್ಯ. ಆದುದರಿಂದ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದ ಮಸೀಹ್ ಒಬ್ಬರಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ಬರುವ ಮಸೀಹ್ ಬೇರೊಬ್ಬರೇ ಆಗಬೇಕು. ಒಂದು ವಿಷಯವನ್ನು ಚೆನ್ನಾಗಿ ನೆನಪಿಡಬೇಕು. ಎರಡು ಶೃಂಖಲೆಗಳಲ್ಲೂ ಸಾಮಾನ್ಯ ಹೋಲಿಕೆ ಇರಬೇಕು ಮತ್ತು ವಿಶಿಷ್ಟವಾಗಿ ಎರಡು ಶೃಂಖಲೆಗಳ ಪ್ರಾರಂಭ ಮತ್ತು ಕೊನೆಯ ಭಾಗದಲ್ಲಿ ಸ್ಪಷ್ಟವಾದ ಹೋಲಿಕೆ ಇರಬೇಕು. ಏಕೆಂದರೆ ಆರಂಭ ಮತ್ತು ಅಂತ್ಯ ಪ್ರತಿಯೊಂದು ಶೃಂಖಲೆಯ ಪರಿಧಿಯನ್ನು ಸ್ಪಷ್ಟಪಡಿಸುತ್ತದೆ. ನಾವು ಪವಿತ್ರ ಖುರ್‌ಆನಿನ ವಚನದ ಪ್ರಕಾರ ಎರಡು ಶೃಂಖಲೆಗಳ ಆರಂಭದಲ್ಲಿ ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಸ್ಪಷ್ಟ ಹೋಲಿಕೆ ಇರುವುದನ್ನು ಅಂಗೀಕರಿಸುತ್ತೇವೆ. ಹೀಗಿರುವಾಗ ಈ ಎರಡು ಶೃಂಖಲೆಗಳ ಕೊನೆಯ ಭಾಗದಲ್ಲೂ ಹೋಲಿಕೆ ಇರಬೇಕಾದುದು ಆವಶ್ಯಕವಾಗಿದೆ ಎಂದು ಅಂಗೀಕರಿಸಬೇಕು. ಆದುದರಿಂದ ಹೋಲಿಕೆ ಇರುವಾಗ ಹೋಲಿಸಲ್ಪಡುವವರು ಬೇರೆ ಬೇರೆ ಆಗಿರುವರೆಂಬುದು ಸ್ಪಷ್ಟವಾಗುತ್ತದೆ.

ಈ ವಚನದಲ್ಲಿ ಅಲ್ಲಾಹನು "ಮಿನ್‌ಕುಮ್" (ಎಂದರೆ ನಿಮ್ಮ ಪೈಕಿ) ಎಂದು ಹೇಳಿ ಎಲ್ಲ ಜಗಳಗಳ ಬೇರನ್ನು ಕಡಿದು ಹಾಕಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಲೀಫರು ಮುಸ್ಲಿಮ್ ಸಮುದಾಯದವರೇ ಎಂದು ಸ್ಪಷ್ಟವಾಗಿ ಹೇಳಿರುವನು. ಈ ಪದ ಪ್ರಯೋಗಿಸಲ್ಪಟ್ಟ ಭಾಗವನ್ನು ಕಣ್ಣು ಮುಚ್ಚಿ ಮುಂದೆ ಸಾಗಲು ಸಾಧ್ಯವಿಲ್ಲ.

ಪ್ರಿಯ ಓದುಗರೇ, ನೀವು ಚೆನ್ನಾಗಿ ಯೋಚಿಸಿರಿ. ಅಲ್ಲಾಹನು ಮುಸ್ಲಿಮರಿಗೆ ಬಲಯುತವಾದ ವಾಗ್ದಾನ ನೀಡಿರುವನು. ಹಝ್ರತ್ ಮೂಸಾ ಅಲೈಹಿಸ್ಸಲಾಮರು ನಿಧನ ಹೊಂದಿದ ನಂತರ ಅವರ ಗ್ರಂಥವಾದ ತೌರಾತಿನ ಸೇವೆಗೋಸ್ಕರ ಖಲೀಫರನ್ನು ಕಳುಹಿಸಿದ ಹಾಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಪವಿತ್ರ ಖುರ್‌ಆನಿನ ಮತ್ತು ಇಸ್ಲಾಮಿನ ಸೇವೆಗೋಸ್ಕರ ಸಹ ಖಲೀಫರು ಕಳುಹಿಸಲ್ಪಡುವರು. ಆ ಖಲೀಫರು ಮುಸ್ಲಿಮ್ ಸಮುದಾಯದಲ್ಲಿಯೇ ಜನಿಸುವರು. ಹೀಗಿರುವಾಗ ಮುಸ್ಲಿಮ್ ಸಮುದಾಯದಲ್ಲಿ ಖಿಲಾಫತ್ ಶೃಂಖಲೆಯ ಕೊನೆಯ ಮತ್ತು ಅತ್ಯಂತ ವೈಭವಶಾಲಿ ಖಲೀಫ ಬನೀ ಇಸ್ರಾಈಲರಿಂದಲೇ ಬರುವರೆಂದು ಹೇಳುವುದು ದೌರ್ಜನ್ಯಕರವೂ ತಮ್ಮ ಹಟ ಪ್ರವೃತ್ತಿಗಾಗಿ ಹೇಳುವ

ಮಾತೂ ಆಗಿದೆ. ಹೀಗೆ ಹೇಳುವವರು ಅಲ್ಲಾಹನು ಹೇಳಿದ ಮಿನ್‌ಕುಮ್ (ನಿಮ್ಮ ಪೈಕಿ) ಎಂಬ ಪದಗಳನ್ನು ಕಸದ ಬುಟ್ಟಿಗೆ ಎಸೆದ ಹಾಗೆ ಆಗುತ್ತದೆ ಮತ್ತು ಮುಸ್ಲಿಮ್ ಸಮುದಾಯವನ್ನು ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಿಂದ ಭಿಕ್ಷೆಬೇಡುವವರ ಹಾಗೆ ಮಾಡುತ್ತದೆ. ಯಾರ ಹೃದಯದಲ್ಲಿ ಸತ್ಯ ವಿಶ್ವಾಸ ಮತ್ತು ಅಭಿಮಾನ ಇದೆಯೋ ಅವನು ಮುಸ್ಲಿಮ್ ಸಮುದಾಯವನ್ನು ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಿಂದ ಭಿಕ್ಷೆಯಾಚಿಸುವವರ ಹಾಗೆ ಮಾಡಲು ಧೈರ್ಯಗೊಳ್ಳಲಾರನು.

ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ: ಎಲೈ ಮುಸ್ಲಿಮರೇ, ಇಸ್ಲಾಮಿನ ಸೇವೆಗೋಸ್ಕರ ನಿಮ್ಮಿಂದಲೇ ನಿಮಗೆ ನಾನು ಖಲೀಫರನ್ನು ಕಳುಹಿಸುವೆನು.

ಅಹ್ಮದಿಯೇತರ ಮತಪಂಡಿತರ ಹೃದಯಗಳು ಹಝ್ರತ್ ಈಸಾ ಮಸೀಹರ ಬಗ್ಗೆ ಪ್ರೀತಿಯ ಕಾರಣ ಶಿರ್ಕ್‌ಗೆ (ಬಹುದೇವಾರಾಧನೆಗೆ) ತಲಪಿವೆ. ಅಲ್ಲಾಹನ ಸ್ಪಷ್ಟ ವಾಗ್ದಾನಕ್ಕೆ ವಿರುದ್ಧವಾಗಿ ಅನಾವಶ್ಯಕವಾಗಿ ಬನೀ ಇಸ್ರಾಈಲ್ ಜನರ ಪಾದಗಳಿಗೆ ಬೀಳುತ್ತಿದ್ದಾರೆ. ಅಲ್ಲಾಹನು ಅವರನ್ನು ಎಬ್ಬಿಸಿ ಅವರನ್ನು ಗೌರವಿಸಲು ಬಯಸುತ್ತಾನೆ ಮತ್ತು ಅವರಿಗೆ ಬಹುಮಾನ ನೀಡಲು ಬಯಸುತ್ತಾನೆ. ಆದರೆ ಅವರು ತಮ್ಮ ಅಪಮಾನವನ್ನು ಬಯಸುತ್ತಾರೆ. ಅಲ್ಲಾಹನು ಹೇಳುತ್ತಾನೆ: ನೋಡಿರಿ, ನಾನು ನಿಮಗೆ ಬಹುಮಾನ ನೀಡಲು ಬಯಸುತ್ತೇನೆ. ನಿಮ್ಮ ಖಲೀಫರು ನಿಮ್ಮಿಂದಲೇ ಬರುವರು.

ಆದರೆ ಮುಸ್ಲಿಮರು ಚಿಕ್ಕಪುಟ್ಟ ಖಲೀಫರು ಈ ಸಮುದಾಯದಿಂದಲೇ ಬರುವರು ಎಂದು ಅಂಗೀಕರಿಸುತ್ತಾರಾದರೂ ಆದರೆ ಕೊನೆಯ ಮತ್ತು ವೈಭವಶಾಲಿ ಖಲೀಫರ ಬಗ್ಗೆ ಹೇಳುವಾಗ ಅವರು ಬನೀ ಇಸ್ರಾಈಲ್ ಕಡೆಗೆ ನೋಡಲು ತೊಡಗುತ್ತಾರೆ.

ಅಲ್ಲಾಹನು ಈ ಸಮುದಾಯದ ಮೇಲೆ ದಯೆದೋರಲಿ. ಈ ಸಮುದಾಯ ಎಂತಹ ದುರವಸ್ಥೆಯಲ್ಲಿದೆ? ಪವಿತ್ರ ಖುರ್‌ಆನ್ ಮುಸ್ಲಿಮರನ್ನು ಖೈರುಲ್ ಉಮ್ಮತ್ (ಸಮುದಾಯಗಳಲ್ಲಿ ಶ್ರೇಷ್ಠವಾದುದು) ಎಂದು ಹೇಳಿದೆ.

ಮುಸ್ಲಿಮರಲ್ಲಿ ಎಂತಹ ಕೆಟ್ಟ ಜನರು ಜನಿಸಲಿರುವರೆಂದರೆ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದ ಹಾಗೆ, ಅವರು ಯಹೂದಿಗಳ ಹಾಗೆ ಆಗುವರು ಎಂದು ಮುಸ್ಲಿಮರು ನಂಬುತ್ತಾರೆ. ಆದರೆ ಅಭಿವೃದ್ಧಿಯ ಬಗ್ಗೆ ಹೇಳುವಾಗ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ಜನಿಸಬೇಕಾದ ಮಸೀಹರನ್ನು ಬನೀ ಇಸ್ರಾಈಲ್ ಗೋತ್ರದಿಂದ ತರಲು ಇಚ್ಛಿಸುತ್ತಾರೆ. ಎಷ್ಟು ಖೇದಕರವಾಗಿದೆ ಈ ವಿಷಯ. ಏನು ಮುಸ್ಲಿಮರ ಪಾಲಿಗೆ ಕೇವಲ ಕಲಹ ಗೊಂದಲಗಳು ಮಾತ್ರ ಬಂದಿವೆಯೋ, ಸುಧಾರಣೆ ಮಾಡುವವರು ಹೊರಗಿಂದಲೇ ಬರಬೇಕೇ?

♦

---

**16ನೇ ಪುಟದಿಂದ**

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಹೀಗೆ ಸೂಚಿಸುತ್ತಾನೆ: ಪ್ರತಿಯೊಂದು ಕೆಲಸದ ಒಬ್ಬ ಕರ್ತೃ ಇರುತ್ತಾನೆ. ಸೃಷ್ಟಿಸುವವನು ಒಬ್ಬನಿರಬೇಕಾದುದು ಆವಶ್ಯಕವಾಗಿದೆ. ನೀವು ವಿಶ್ವದ ಕಡೆಗೆ ದೃಷ್ಟಿ ಹಾಯಿಸಿದರೆ ನಿಮಗೆ ನಿಶ್ಚಯವಾಗಿಯೂ ಮಾರ್ಗದರ್ಶನ ದೊರೆಯುವುದು. ಎಲ್ಲ ವಸ್ತುಗಳು ಕೊನೆಗೆ ಸೃಷ್ಟಿಕರ್ತನ ಕಡೆಗೆ ತಲಪುತ್ತವೆ. ಅವನೇ ಎಲ್ಲ ವಸ್ತುಗಳ ಕೊನೆಯಲ್ಲಿದ್ದಾನೆ. ಅವನ ಸೂಚನೆ ಪ್ರಕಾರ ಎಲ್ಲವೂ ಆಗುತ್ತಾ ಇವೆ. ಅಲ್ಲಾಹನು ಮನುಷ್ಯನ ಆರಂಭದ ಸ್ಥಿತಿಯ ಕಡೆಗೆ ಗಮನ ಹರಿಸಿ ಹೇಳುತ್ತಾನೆ: ನಿನ್ನ ಸೃಷ್ಟಿ ಒಂದು ವೀರ್ಯಾಣುವಿನಿಂದಾಗಿದೆ. ನೀನು ನಿನ್ನ ಜೀವಿತದ ಹಿಂದಿನ ಕಾಲದ ಕಡೆಗೆ ಹೋಗುವಾಗ ನೀನು ಚಿಕ್ಕದರಿಂದ ಚಿಕ್ಕದಾಗುತ್ತಿರುವೆ. ನೀನು ಸ್ವತಃ ಸೃಷ್ಟಿಕರ್ತನಾಗಲಾರೆ. ಸೃಷ್ಟಿಕರ್ತನಿಲ್ಲದೆ ಸೃಷ್ಟಿಯಾಗಲಾರದು. ಮನುಷ್ಯನು ತನ್ನ ಸ್ಥಿತಿಯ ಬಗ್ಗೆ ಚಿಂತಿಸುತ್ತಾ ಇದ್ದರೆ ಅವನು ಅತ್ಯಂತ ಚಿಕ್ಕ ಅವಸ್ಥೆಯಿಂದ ಅಭಿವೃದ್ಧಿ ಗಳಿಸಿ ಈಗಿನ ಸ್ಥಿತಿಗೆ ತಲಪಿದುದಾಗಿ ತಿಳಿಯುವುದು. ಮನುಷ್ಯನು ಇಂದಿನ ಸ್ಥಿತಿಯಲ್ಲಿ ಸೃಷ್ಟಿಸುವವನಾಗದಿರುವಾಗ ಇದಕ್ಕಿಂತ ಬಲಹೀನ ಸ್ಥಿತಿಯಲ್ಲಿ ಹೇಗೆ ತಾನೆ ಸೃಷ್ಟಿಕರ್ತನಾಗಬಲ್ಲನು. ಆದುದರಿಂದ ಒಬ್ಬ ಸೃಷ್ಟಿಕರ್ತನಿದ್ದಾನೆಂದು ನಂಬಬೇಕಾಗಿದೆ. ಅವನ ಶಕ್ತಿ ಅಪರಿಮಿತವಾಗಿದೆ. ಅವನ ಶಕ್ತಿ ಅತ್ಯುನ್ನತವಾಗಿದೆ. ಮನುಷ್ಯನು ತನ್ನ ಹಂತ ಹಂತವಾದ ವೃದ್ಧಿಯ ಬಗ್ಗೆ ಚಿಂತಿಸುವನಾದರೆ ಅವನು ಕೊನೆಗೆ ಎಂತಹ ಸ್ಥಳವನ್ನು ತಲಪುವನೆಂದರೆ ಲೌಕಿಕ ಜ್ಞಾನ ಹೇಳುವುದು "ಇನ್ನು ಮುಂದೆ ನಾವು ಏನೂ ಹೇಳಲಾರೆವು. ಹಾಗೆ ಏಕಾಯಿತೆಂದು ಹೇಳಲಾರೆವು." ಅದು ಅಲ್ಲಾಹನ ಕೈ ಕೆಲಸ ಮಾಡುವ ಸ್ಥಳವಾಗಿದೆ. ಪ್ರತಿಯೊಬ್ಬ ವಿಜ್ಞಾನಿ ಹೀಗೆ ಹೇಳಬೇಕಾಗುತ್ತದೆ: "ಕೊನೆಗೆ ಒಂದು ಸೃಷ್ಟಿಸುವ ವಸ್ತುವಿರಬೇಕಾಗುತ್ತದೆ. ಅದನ್ನು ಬುದ್ಧಿಯ ವಲಯದೊಳಗೆ ತರಲು ಸಾಧ್ಯವಾಗದು." ಅದೇ ಸೃಷ್ಟಿಕರ್ತ. ಅತ್ಯಂತ ಅಜ್ಞಾನಿಯಾದವನು ಅರ್ಥಮಾಡಬಲ್ಲ ಸಾಕ್ಷ್ಯಾಧಾರ ಇದಾಗಿದೆ.

ಒಂದು ಕಥೆ ಹೀಗಿದೆ: ಒಬ್ಬ ಗ್ರಾಮೀಣ ಅರಬಿಯೊಂದಿಗೆ, "ದೇವನ ಅಸ್ತಿತ್ವದ ಬಗ್ಗೆ ನಿನ್ನ ಬಳಿ ಸಾಕ್ಷ್ಯಾಧಾರ ಏನಿದೆ" ಎಂದು ಕೇಳಿದಾಗ ಅವನು ಹೇಳಿದನು: ಮರುಭೂಮಿಯಲ್ಲಿ ಒಂದು ಒಂಟೆಯ ಸೆಗಣಿ ಬಿದ್ದಿರುವುದು ಕಂಡರೆ ನಾನು ಹೇಳುತ್ತೇನೆ – ಇಲ್ಲಿಂದ ಯಾವುದೋ ಒಂಟೆ ದಾಟಿ ಹೋಗಿದೆ ಎಂದು. ಇಷ್ಟು ವಿಶಾಲ ಸೃಷ್ಟಿಯನ್ನು ನೋಡಿ ಅದಕ್ಕೊಬ್ಬ ಸೃಷ್ಟಿಕರ್ತನಿದ್ದಾನೆಂದು ನನಗೆ ತಿಳಿಯಲಾರದೆ? ಈ ಉತ್ತರ ಸತ್ಯವಾಗಿದೆ ಮತ್ತು ಮನುಷ್ಯನ ಪ್ರಕೃತಿಗೆ ಅನುಸಾರವಾಗಿದೆ. ಮನುಷ್ಯನು ಲೋಕದಲ್ಲಿರುವ ಜೀವಜಾಲಗಳ ಬಗ್ಗೆ ಚಿಂತಿಸುವನಾದರೆ ಅವುಗಳಿಗೆ ಒಬ್ಬ ಸೃಷ್ಟಿಕರ್ತನಿದ್ದಾನೆಂದು ಸಮ್ಮತಿಸಬೇಕಾಗುತ್ತದೆ. **(ಮುಂದುವರಿಯುವುದು)**

# LOVE FOR ALL - HATRED FOR NONE

# ಎಲ್ಲರೊಂದಿಗೆ ಪ್ರೀತಿ – ಯಾರೊಂದಿಗೂ ದ್ವೇಷವಿಲ್ಲ

## ಬೆಂಗಳೂರು – ಪುಸ್ತಕ ಉತ್ಸವ

ಬೆಂಗಳೂರಿನಲ್ಲಿ ಪುಸ್ತಕ ಉತ್ಸವ 2019 ಮಾರಾಟ ಮತ್ತು ಪ್ರದರ್ಶನ ಕಳೆದ ಅಕ್ಟೋಬರ್ 2ರಿಂದ 8ರ ವರೆಗೆ ನಡೆಯಿತು. 250ಕ್ಕೂ ಅಧಿಕ ಪುಸ್ತಕ ಮಳಿಗೆಗಳು ಭಾಗವಹಿಸಿದ್ದು, ಅಹ್ಮದಿಯಾ ಬುಕ್ ಸ್ಟಾಲ್ ಎಲ್ಲರ ಗಮನ ಸೆಳೆಯಿತು. ಸಂದರ್ಶಕರಿಂದಲೂ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಅಹ್ಮದಿಯಾ ಬುಕ್ ಸ್ಟಾಲ್ ಅತೀ ದೊಡ್ಡ ಸುಂದರವಾದ ಮತ್ತು ಮಾಹಿತಿಯುಳ್ಳ ಪುಸ್ತಕ ಮಳಿಗೆಯಾಗಿದ್ದು, ಎಲ್ಲ ವರ್ಗದ ಜನರು ಮಳಿಗೆಗೆ ಭೇಟಿ ನೀಡಿ ಪುಸ್ತಕವನ್ನು ವೀಕ್ಷಿಸಿದರು.

ಬೆಂಗಳೂರು ಪುಸ್ತಕ ಉತ್ಸವದಲ್ಲಿ 250ಕ್ಕಿಂತಲೂ ಅಧಿಕ ಪುಸ್ತಕ ಮಳಿಗೆಗಳು ಭಾಗವಹಿಸಿದ್ದು, ಅದರಲ್ಲಿ ಅಹ್ಮದಿಯಾ ಬುಕ್ ಸ್ಟಾಲ್ ಅತಿ ದೊಡ್ಡ ಸ್ಟಾಲ್ ಆಗಿತ್ತು. 40 ಅನುವಾದಗಳ ಖುರ್ಆನ್ ಪ್ರದರ್ಶನ, ಪವಿತ್ರ ಖುರ್ಆನ್ ಬೋಧನೆಗಳೊಂದಿಗೆ ಬ್ಯಾನರ್, ಪವಿತ್ರ ಪ್ರವಾದಿಯನ್ನು ವೈಭವೀಕರಿಸುವ ಬ್ಯಾನರ್‌ಗಳು, 6 ಭಾಷೆಗಳಲ್ಲಿ ಪುಸ್ತಕಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಉಚಿತ ಪುಸ್ತಕಗಳು, ಉಚಿತ ಫೋಲ್ಡರ್‌ಗಳು, ಧರ್ಮದ ವಿಮರ್ಶೆ ಮತ್ತು "ಯುಗರಶ್ಮಿ" ಕನ್ನಡ ಮ್ಯಾಗಜಿನ್, ಉಚಿತ ಬ್ಯಾಡ್ಜ್‌ಗಳು, ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ ಎಂಬ ಸೆಲ್ಫಿ ಫ್ರೇಮ್‌ಗಳು ಆಕರ್ಷಿಸುತ್ತಿದ್ದವು.

ಇನ್ನೊಂದು ವಿಶೇಷವೆಂದರೆ ಹೆಚ್ಚು ಜ್ಞಾನವುಳ್ಳ ಸ್ವಯಂ ಸೇವಕರ ತಂಡ ಯುವಕರು, ವಯೋವೃದ್ಧರು, ಮಹಿಳೆಯರು ಮತ್ತು ಧರ್ಮ ಪ್ರಚಾರಕರೂ ವಿವಿಧ ವಿಷಯಗಳಲ್ಲಿ ಪರಿಣಿತರಾಗಿದ್ದು ಬಹು ಭಾಷೆಗಳನ್ನು ಬಲ್ಲವರಾಗಿದ್ದರು. ಪುಸ್ತಕ ಮಳಿಗೆಗೆ ಶಿಕ್ಷಣ ಸಚಿವ ಸುರೇಶ್ ಕುಮಾರ್ ಭೇಟಿ ನೀಡಿದ್ದರು. ಅವರಿಗೆ ಜಮಾಅತನ್ನು ಪರಿಚಯಿಸಿದ್ದು ಮಾತ್ರವಲ್ಲ ಅಹ್ಮದಿಯಾ ಖಲೀಫರ ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ ಎಂಬ ಪುಸ್ತಕವನ್ನು ನೀಡಲಾಯಿತು. ವಾಗ್ಮಿ, ಸಾಮಾಜಿಕ ಕಾರ್ಯಕರ್ತ ಚಕ್ರವರ್ತಿ ಸೂಲಿಬೆಲೆಯವರು ಭೇಟಿ ನೀಡಿದ್ದರು. ಅವರಿಗೆ ಸ್ವಾಗತವನ್ನು ನೀಡಲಾಯಿತು. ಚಕ್ರವರ್ತಿ ಸೂಲಿಬೆಲೆಯವರು ಬುಕ್ ಸ್ಟಾಲ್‌ನ ಸದಸ್ಯರೊಂದಿಗೆ ಉತ್ತಮ ಸಂಭಾಷಣೆ ನಡೆಸಿದರು. ಅವರು ಅಹ್ಮದಿಯಾ ಖಲೀಫರಿಗೆ ಒಂದು ವೀಡಿಯೋ ಸಂದೇಶವನ್ನು ನೀಡಿದರು. **ವರದಿ: ಬೆಂಗಳೂರು**

## ನೆರೆ ಸಂತ್ರಸ್ತರಿಗೆ ಹ್ಯುಮಾನಿಟಿ ಫಸ್ಟ್ ನೆರವು

ಮಂಗಳೂರು: ಕಳೆದ ನವೆಂಬರ್ 17ರಂದು ಹ್ಯುಮಾನಿಟಿ ಫಸ್ಟ್ ಮಂಗಳೂರು ಘಟಕದ ವತಿಯಿಂದ ನೆರೆ ಸಂತ್ರಸ್ತರಿಗೆ ನೆರವು ನೀಡುವ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಹ್ಯುಮಾನಿಟಿ ಫಸ್ಟ್ ಮಂಗಳೂರು ಘಟಕದ ಮುಖ್ಯಸ್ಥ ವಿ.ಎ. ರಶೀದ್ ಸಾಹಿಬ್, ಮಂಗಳೂರು ಅಹ್ಮದಿಯಾ ಜಮಾಅತಿನ ಅಧ್ಯಕ್ಷ, ಮುಹಮ್ಮದ್ ಯೂಸುಫ್ ಸಾಹಿಬ್, ಮೌಲ್ವಿ ಶರೀಫ್ ಖಾನ್ ಸಾಹಿಬ್, ಮಂಗಳೂರಿನ ಹ್ಯುಮಾನಿಟಿ ಫಸ್ಟ್‌ನ 5 ಸದಸ್ಯರು, ಒಬ್ಬ ಅತ್ಫಾಲ್ ಸದಸ್ಯ, ಮಂಜೇಶ್ವರ ಖುದ್ದಾಮುಲ್ ಅಹ್ಮದಿಯಾದ 5 ಸದಸ್ಯರು ಈ ತಂಡದಲ್ಲಿದ್ದರು.

ಮಂಗಳೂರಿನಿಂದ ಸುಮಾರು 80 ಕಿ.ಮೀ ದೂರವಿರುವ ಕೊಳಂಬೆ (ಬೆಳ್ತಂಗಡಿ ತಾಲೂಕು) ಎಂಬ ಗ್ರಾಮದಲ್ಲಿರುವ 25 ಕುಟುಂಬಗಳಿಗೆ ಸುಮಾರು 23 ಆಹಾರ ವಸ್ತು ಇತ್ಯಾದಿಗಳಿರುವ ಪೊಟ್ಟಣಗಳನ್ನು ನೀಡಲಾಯಿತು.

ಹ್ಯುಮಾನಿಟಿ ಫಸ್ಟ್ ದಕ್ಷಿಣ ಕರ್ನಾಟಕದ ಮುಖ್ಯಸ್ಥ ಮಡಿಕೇರಿಯ ಜೆ.ಎಂ. ಶರೀಫ್ ಸಾಹಿಬರು ಕಾರ್ಯಕ್ರಮದಲ್ಲಿ ಭಾಗವಹಿಸಿ ನಿರ್ದೇಶನಗಳನ್ನು ನೀಡಿದರು.

## ಈದ್ ಮಿಲಾದ್ : ರೋಗಿಗಳಿಗೆ ಹಣ್ಣು ಹಂಪಲ ವಿತರಣೆ

ಕಲಬುರಗಿ, ನ.11 – ಈದ್ ಮಿಲಾದ್ ಪ್ರವಾದಿ ಮುಹಮ್ಮದ್ ಪೈಗಂಬರ(ಸ) ಜನ್ಮ ದಿನದ ಪ್ರಯುಕ್ತ ಅಹ್ಮದಿಯಾ ಮುಸ್ಲಿಮ್ ಸಮಾಜದ "ಹ್ಯೂಮನಿಟಿ ಫಸ್ಟ್" ವಿಭಾಗದ ಆಶ್ರಯದಲ್ಲಿ ನಗರದ ಜಯದೇವ ಆಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ಹಂಪಲ ಮತ್ತು ಬಿಸ್ಕಿಟ್‌ಗಳನ್ನು ವಿತರಿಸಲಾಯಿತು.

ಅಹ್ಮದಿಯಾ ಮುಸ್ಲಿಮ್ ಸಮಾಜದ ನಗರಾಧ್ಯಕ್ಷ ಅಬ್ದುಲ್ ಖಾದಿರ್ ಶಜ್ಜಿ ನೇತೃತ್ವದಲ್ಲಿ ರವಿವಾರ ಬೆಳಗಿನ ಜಾವ 4 ಗಂಟೆಯಿಂದ ಪ್ರಾರಂಭವಾದ ತಹಜ್ಜುದ್ ವಿಶೇಷ ಪ್ರಾರ್ಥನೆ, ಪವಿತ್ರ ಖುರ್ಆನ್ ಪಠಣ, ಶ್ರಮದಾನ ಮತ್ತು ಮಧ್ಯಾಹ್ನ ಜಯದೇವ ಸರ್ಕಾರಿ ಆಸ್ಪತ್ರೆಯ 100ಕ್ಕೂ ಹೆಚ್ಚು ಒಳರೋಗಿಗಳಿಗೆ ಹಣ್ಣು ಹಂಪಲಗಳನ್ನು ವಿತರಿಸುವ ಮೂಲಕ ಆಚರಿಸಲಾಯಿತು.

ತಾರಫೈಲ ರಹಮತ್ ನಗರ ಬಡಾವಣೆಯಲ್ಲಿರುವ ಅಹ್ಮದಿಯಾ ದಾರುಲ್ ಝಿಕ್ರ್ ಮಿಶನ್ ಹೌಸ್‌ನಲ್ಲಿ ಆಯೋಜಿಸಿದ್ದ ಈದ್ ಮಿಲಾದ್ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಹೈಕೋರ್ಟಿನ ನ್ಯಾಯವಾದಿ ಲಿಯಾಖತ್ ಫರೀದ್ ಉಸ್ತಾದ್ ಅವರು ಮಾತನಾಡಿ, ಪ್ರವಾದಿ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ವಿಶ್ವ ಭಾತೃತ್ವವನ್ನು ಸ್ಥಾಪಿಸಬಹುದಾಗಿದೆ ಎಂದರು.

ಪ್ರವಾದಿಯ ಕರುಣೆ, ಪ್ರೀತಿ, ಪರೋಪಕಾರ ಹಾಗೂ ಮಾನವೀಯ ಮೌಲ್ಯಗಳು ನಮ್ಮೆಲ್ಲರಿಗೂ ದಾರಿ ದೀಪವಾಗಿದ್ದು, ಈ ದೀಪ

ದಿಂದ ವಂಚಿತರಾಗುವವರು ಕತ್ತಲಿನಡೆಗೆ ಸಾಗುವರು ಎಂದರು.

ಉಪನ್ಯಾಸಕ ಅಬ್ದುಲ್‌ರಶೀದ್‌ಸಾಬ್ ಉಸ್ತಾದ್ ಅವರ ಪವಿತ್ರ ಖುರ್‌ಆನ್ ಪಠಣದೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ಪ್ರವಾದಿ ಅವರ ಜೀವನ ಮೌಲ್ಯಗಳ ಕುರಿತು ಜಮಾಅತಿನ ಮಾಜಿ ಅಧ್ಯಕ್ಷ ಮೊಹ್ಮದ್ ವಸೀಮ್ ಅಹ್ಮದ್ ನೂರ್, ಮೊಹ್ಮದ್ ಅಬ್ದುಲ್ಲಾ ಸಾಬ್ ಉಸ್ತಾದ್ ಉಪನ್ಯಾಸ ನೀಡಿದರು.

ಅಹ್ಮದಿಯಾ ಸಮಾಜದ ಮಿಶನರಿ ಮೌಲ್ವಿ ನೂರುಲ್ ಹಕ್ ಅವರು, ಮಕ್ಕಳಲ್ಲಿ ತರಬೇತಿ ಮತ್ತು ಸಂಸ್ಕಾರದ ಕುರಿತು ಪ್ರವಾದಿಗಳ ಉಪದೇಶವನ್ನು ಪ್ರಸ್ತಾಪಿಸಿದರು. ತಾಯಿಯ ಗರ್ಭವಸ್ಥೆಯಲ್ಲಿಯೇ ಮಗುವಿನ ತರಬೇತಿಯಾಗಬೇಕು. ನಡೆನುಡಿ ಮತ್ತು ಸುಸಂಸ್ಕೃತ ಸ್ತ್ರೀಯಿಂದ ಸಜ್ಜನ ಮಕ್ಕಳು ಜನಿಸುತ್ತವೆ ಎಂದರು.

ಹಬ್ಬದ ದಿನವೊಂದರಲ್ಲಿ ಮಗುವೊಂದು ಅಳುತ್ತ ನಿಂತಿರುವುದನ್ನು ಗಮನಿಸಿದ್ದ ಪ್ರವಾದಿಗಳು, ಆ ಮಗುವನ್ನು ವಿಚಾರಿಸಿದಾಗ ಇಂದು ಹಬ್ಬವನ್ನಾಚರಿಸಲಾಗುತ್ತಿದೆ; ಆದರೆ ನಾನು ತಂದೆ ತಾಯಿಯನ್ನು ಕಳೆದುಕೊಂಡ ಅನಾಥನಾಗಿದ್ದೇನೆಂದಾಗ ಆ ಮಗುವನ್ನು ತನ್ನೆದೆಗೆ ಅಪ್ಪಿಕೊಂಡು ಕಣ್ಣೀರು ಸುರಿಸಿದ ಪ್ರವಾದಿಗಳು, ಆ ಮಗುವನ್ನು ತಮ್ಮ ಮನೆಗೆ ಕರೆದೊಯ್ದು ಇಲ್ಲಿರುವ ನನ್ನ ಮೊಮ್ಮಕ್ಕಳಾದ ಹಸನ್ ಮತ್ತು ಹುಸೇನ್ ನಿನ್ನ ಸಹೋದರರೆನ್ನುವ ಮೂಲಕ ಅನಾಥರಿಗೆ ಆಶ್ರಯ ನೀಡಿದ ಆದರ್ಶ ಪುರುಷರಾಗಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಬ್ದುಲ್ ಖಾದಿರ್ ಶಜ್ಜಿ ಮಾತನಾಡಿ, ಪ್ರವಾದಿಯ ಜನ್ಮದಿನ ಆಚರಿಸಿ ಕೈ ಬಿಡುವುದಲ್ಲ; ಪ್ರತಿದಿನವು ಅವರ ಜೀವನಾದರ್ಶವನ್ನು ನಾವೆಲ್ಲರು ಅಳವಡಿಸಿಕೊಳ್ಳುವ ಮೂಲಕ ಮಾತ್ರ ಶಾಂತಿ ಮತ್ತು ನೆಮ್ಮದಿಯನ್ನು ಗಳಿಸಲು ಸಾಧ್ಯವಿದೆ ಎಂದರು.

ಜಮಾಅತಿನ ನಗರ ಉಪಾಧ್ಯಕ್ಷ ಖುರೇಷಿ ಮೊಹ್ಮದ್ ನಸರುಲ್ಲಾ, ಪ್ರಧಾನ ಕಾರ್ಯದರ್ಶಿ ಮೊಹ್ಮದ್ ಅಶ್ಮತುಲ್ಲಾ ಹೌದೊಡಿ, ಯಾಸರ್ ನಜೀರ್ ಖುರೇಷಿ, ಮಾಜಿ ಜಿಲ್ಲಾಧ್ಯಕ್ಷ ಖುರೇಷಿ ಮೊಹ್ಮದ್ ಅಬ್ದುಲ್ಲಾ ಸೇರಿದಂತೆ ಹಲವರು ವೇದಿಕೆ ಮೇಲಿದ್ದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಮಂಗಳಗೊಂಡಿತು ಎಂದು ಅಹ್ಮದಿಯಾ ಜಮಾಅತಿನ ಮಾಧ್ಯಮ ಪ್ರತಿನಿಧಿ ನಜೀರ್ ಸಾಬ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. **(ಸಂಜೆವಾಣಿ 11–11–2019)**

## ದುಆ ಅಹ್ಮದ್ ಸಮಯಪ್ರಜ್ಞೆಗೆ ಭಾರೀ ಪ್ರಶಂಸೆ

## ಶಾಲೆಯಲ್ಲಿ ಗುಂಡಿನ ದಾಳಿ: 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮಸೀದಿಯಲ್ಲಿ ಆಶ್ರಯ ನೀಡಿದ ವಿದ್ಯಾರ್ಥಿನಿ

ಮ್ಯಾಡಿಸ್ಸನ್: ಶಾಲೆಯೊಂದರಲ್ಲಿ ನಡೆದ ಗುಂಡಿನ ದಾಳಿ ಮತ್ತು ಚೂರಿ ದಾಳಿಯ ವೇಳೆ ಮಸೀದಿಯೊಂದರಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದ ವಿದ್ಯಾರ್ಥಿನಿಯೊಬ್ಬಳ ಬಗ್ಗೆ ಭಾರೀ ಪ್ರಶಂಸೆ ವ್ಯಕ್ತವಾಗಿದೆ.

ಇಲ್ಲಿನ ಒಶ್ಕೋಶ್ ವೆಸ್ಟ್ ಹೈಸ್ಕೂಲ್‌ನಲ್ಲಿ ಈ ದಾಳಿ ನಡೆದಿತ್ತು. 16 ವರ್ಷದ ವಿದ್ಯಾರ್ಥಿಯೊಬ್ಬ ಅಧಿಕಾರಿಯೊಬ್ಬರಿಗೆ ಚೂರಿಯಿಂದ ಇರಿದಿದ್ದ. ನಂತರ ಆತನಿಗೆ ಗುಂಡಿಕ್ಕಲಾಯಿತು. ಈ ಸಂದರ್ಭ ಶಾಲೆಯಲ್ಲಿದ್ದ ವಿದ್ಯಾರ್ಥಿಗಳು ಆತಂಕದಿಂದ ಹೊರಗೋಡಿ ಬಂದಿದ್ದು, ಇಲ್ಲೇ ಇದ್ದ ಒಶ್ಕೋಶ್ ಮಸೀದಿಯಲ್ಲಿ ವಿದ್ಯಾರ್ಥಿಯೊಬ್ಬಳು 100ಕ್ಕೂ ಅಧಿಕ ಮಕ್ಕಳಿಗೆ ಆಶ್ರಯ ಒದಗಿಸಿದ್ದಾರೆ. ಘಟನೆ ನಡೆಯುತ್ತಿದ್ದಂತೆ ಸಮಯಪ್ರಜ್ಞೆ ಮೆರೆದ ವಿದ್ಯಾರ್ಥಿನಿ ದುಆ ಅಹ್ಮದ್, ಮಸೀದಿಯ ಸಮೀಪ ಓಡಿ ಬಂದು, ಎಲ್ಲಾ ವಿದ್ಯಾರ್ಥಿಗಳನ್ನು ಕರೆದು ಮಸೀದಿಯ ಬಾಗಿಲನ್ನು ತೆರೆದಿದ್ದಾಳೆ. ಮಸೀದಿಯಲ್ಲಿದ್ದ ಸಿಸಿಟಿವಿ ಕ್ಯಾಮರಾದಲ್ಲಿ ಈ ದೃಶ್ಯಗಳು ಸೆರೆಯಾಗಿವೆ.

ಗುಂಡೇಟಿನ ಶಬ್ದ ಕೇಳಿದಾಗ ತಾನು ಇಂಗ್ಲಿಷ್ ಸಾಹಿತ್ಯ ತರಗತಿಯಲ್ಲಿದ್ದೆ. ಯಾರಾದರೂ 911ಗೆ ಕರೆ ಮಾಡಿ ಮತ್ತು ತರಗತಿಯಿಂದ ಎಲ್ಲರೂ ಹೊರ ನಡೆಯಿರಿ ಎಂದು ಶಿಕ್ಷಕಿ ಹೇಳಿದರು. ಎಲ್ಲರೂ ಮಸೀದಿಯ ಬಳಿ ತೆರಳುವಂತೆ ಧರ್ಮ ಗುರುವೊಬ್ಬರು ತಿಳಿಸಿದರು ಎಂದು ದುಆ ವಿವರಿಸಿದ್ದಾರೆ.

“ನಾನು ಸಾಧ್ಯವಾದಷ್ಟು ವಿದ್ಯಾರ್ಥಿಗಳಿಗೆ ಮಸೀದಿಯಲ್ಲಿ ಆಶ್ರಯ ನೀಡಬೇಕೆಂದು ತೀರ್ಮಾನಿಸಿದೆ. ಮಸೀದಿಯ ಬಾಗಿಲನ್ನು ತೆರೆಯಲು ಸೆಕ್ಯುರಿಟಿ ಕೋಡ್ ಹಾಕಿದೆ” ಎಂದು ಅವರು ಹೇಳುತ್ತಾರೆ.

ದುಆ ಅವರ ತಂದೆಯಾದ ಸಾದ್ ಅಹ್ಮದ್ ಈ ಮಸೀದಿಯ ಹಣಕಾಸು ಕಾರ್ಯದರ್ಶಿಯಾಗಿದ್ದಾರೆ. “ಮಸೀದಿಗೆ ಪ್ರವೇಶಿಸಲು ಎಲ್ಲಾ ಸದಸ್ಯರಿಗೂ ಪ್ರತ್ಯೇಕ ಪಾಸ್‌ವರ್ಡ್‌ಗಳಿವೆ” ಎಂದವರು ಹೇಳುತ್ತಾರೆ. **(ವಾರ್ತಾಭಾರತಿ ONLINE 8–12–2019)**

## ಕೂಡಾಳಿ ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಆಚರಣೆ

ಕೂಡಾಳಿ: ಕೇರಳದ ಕಣ್ಣೂರು ಜಿಲ್ಲೆಯ ಕೂಡಾಳಿಯಲ್ಲಿ ಅಹ್ಮದಿಯಾ ಜಮಾಅತ್ ಘಟಕ ಸ್ಥಾಪಿತವಾಗಿ ನೂರು ವರ್ಷಗಳು ತುಂಬಿದ ಪ್ರಯುಕ್ತ ಕಳೆದ ನವೆಂಬರ್ 30 ಮತ್ತು ಡಿಸೆಂಬರ್ 1ರಂದು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡು ಮಸೀದಿ ವಠಾರದಲ್ಲಿ ಶತವಾರ್ಷಿಕವನ್ನು ಆಚರಿಸಲಾಯಿತು.

ನವೆಂಬರ್ 30ರಂದು ಬೆಳಿಗ್ಗೆ ಜಮಾಅತ್ ಅಮೀರ್ ಜಲಾಲುದ್ದೀನ್ ಸಾಹಿಬರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯನ್ನು ಮೌಲಾನ ಕರೀಮುದ್ದೀನ್ ಶಾಹಿದ್ ಸಾಹಿಬ್ ಉದ್ಘಾಟಿಸಿದರು. ಎಂ.ಪಿ. ಹನೀಫ್ ಅಹ್ಮದ್ ಸಾಹಿಬ್ ಸ್ವಾಗತ ಭಾಷಣ ಮಾಡಿದರು.

ಸಂಜೆ ಜರಗಿದ ಮೈತ್ರಿ ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರೊ। ಬಿ. ಮಹ್ಮೂದ್ ಅಹ್ಮದ್ ಸಾಹಿಬ್ ವಹಿಸಿದರು. ಡಾ। ಪಿ. ಮುಝಫರ್ ಅಹ್ಮದ್ ಸಾಹಿಬ್ ಸ್ವಾಗತಿಸಿದರು. ಪಿ.ಪಿ. ಸಫೀರ್ ಅಹ್ಮದ್ ಸಾಹಿಬ್ ಮೈತ್ರಿಗಾನ ಹಾಡಿದರು. ಕೂಡಾಳಿ ಪಂಚಾಯತ್ ಪ್ರೆಸಿಡೆಂಟ್ ಜನಾಬ್ ಪಿ.ಪಿ ನೌಫಲ್ ಉದ್ಘಾಟಿಸಿದರು. ಮೌಲವಿ ಹುಸಾಂ ಅಹ್ಮದ್ ಸಾಹಿಬ್ (ಅಹ್ಮದಿಯಾ ಮಿಶನರಿ), ಡಾ। ಝಕರಿಯ ಕಲ್ಲೂರ್ (ಚೇರ್‌ಮನ್, ಪೀಪಲ್ಸ್ ಮೂಮೆಂಟ್ ಫೋರ್ ಪೀಸ್), ಸ್ವಾಮಿ ಆತ್ಮದಾಸ್ ಯಮಿ (ಧರ್ಮ ಪಕ್ಷ ಪರಮಾಚರ್ಯನ್, ಆರ್ಜಿತ ಹಿಂದು ಸಮಾಜಂ, ಮಲಪುರಂ) ಭಾಷಣ ಮಾಡಿದರು. ಸಿ.ಎಂ. ಹಸನ್ ಸಾಹಿಬ್ ಕೃತಜ್ಞತೆ ಸಲ್ಲಿಸಿದರು.

ಡಿಸೆಂಬರ್ 1ರಂದು ಮೌಲವಿ ಮುಹಮ್ಮದ್ ಸಾಲಿಹ್ ಸಾಹಿಬರ ಅಧ್ಯಕ್ಷತೆಯಲ್ಲಿ ಜರಗಿದ ವೈಜ್ಞಾನಿಕ ಸಮ್ಮೇಳನದಲ್ಲಿ ಮೌಲವಿ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಡಾ। ಸೋನು ಬಿ. ನಾಯಕ್, ಶ್ರೀ ತಂಬಾನ್ ಬ್ಲಾತ್ತೂರ್ ಭಾಷಣ ಮಾಡಿದರು. ನಿಸಾರ್ ಅಹ್ಮದ್ ಸಾಹಿಬ್ ಕೃತಜ್ಞತೆ ಸಲ್ಲಿಸಿದರು.

## ಪಯಂಗಾಡಿ ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಆಚರಣೆ – ಸಮಾರೋಪ ಸಮ್ಮೇಳನ

ಪಯಂಗಾಡಿ: ಕೇರಳದ ಕಣ್ಣೂರ್ ಜಿಲ್ಲೆಯ ಪಯಂಗಾಡಿಯಲ್ಲಿ ಅಹ್ಮದಿಯಾ ಜಮಾಅತ್ ಘಟಕ ಸ್ಥಾಪಿತವಾಗಿ ನೂರು ವರ್ಷಗಳು ಪೂರ್ತಿಯಾದ ಪ್ರಯುಕ್ತ ಕಳೆದ ಡಿಸೆಂಬರ್ 6 ಮತ್ತು 8ರಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೆಂಟಿನರಿ ಹಾಲ್‌ನಲ್ಲಿ ಶತವಾರ್ಷಿಕ ಸಮಾರೋಪವನ್ನು ಆಚರಿಸಲಾಯಿತು.

ಡಿಸೆಂಬರ್ 6ರಂದು ಮಧ್ಯಾಹ್ನ 2 ಗಂಟೆಗೆ ನವೀಕರಿಸಿದ ಸೆಂಟಿನರಿ ಹಾಲ್ ಉದ್ಘಾಟಿಸಲ್ಪಟ್ಟಿತು. ಅನಂತರ ಅದೇ ಹಾಲ್‌ನಲ್ಲಿ ಅಲ್ ಖುರ್‌ಆನ್ ಎಕ್ಸಿಬಿಶನ್ ಉದ್ಘಾಟಿಸಲ್ಪಟ್ಟಿತು.

ಡಿಸೆಂಬರ್ 8ರಂದು ಅಪರಾಹ್ನ 3 ಗಂಟೆಗೆ ಜಿಲ್ಲಾ ತರ್‌ಬಿಯತ್ ಸಮ್ಮೇಳನ ಜಿಲ್ಲಾ ಅಮೀರ್ ಕೆ. ಅಬ್ದುಲ್ ಅಝೀಝ್ ಸಾಹಿಬರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲವಿ ಮುಬಶ್ಶಿರ್ ಅಹ್ಮದ್ ಸಾಹಿಬ್ ಭಾಷಣ ಮಾಡಿದರು.

ಸಂಜೆ 4 ಗಂಟೆಗೆ ಪಯಂಗಾಡಿ ಅಮೀರ್ ಡಾ। ಗುಲಾಂ ಅಹ್ಮದ್ ಸಾಹಿಬರ ಅಧ್ಯಕ್ಷತೆಯಲ್ಲಿ ಸಮಾಪನ ಸಮ್ಮೇಳನ ಜರಗಿತು. ನಾಇಬ್ ಅಮೀರ್ ಪ್ರೊ। ಬಿ. ಮಹ್ಮೂದ್ ಅಹ್ಮದ್ ಸಾಹಿಬ್ ಸ್ವಾಗತಿಸಿದರು. ಸಿ ಅಬ್ದುಸ್ಸಮದ್ ಸಾಹಿಬ್ ಸೆಂಟಿನರಿ ರಿಪೋರ್ಟ್ ಓದಿದರು. ಸಚಿವರಾದ ಶ್ರೀ ಕಡನಪಳ್ಳಿ ರಾಮಚಂದ್ರನ್ ಸಮ್ಮೇಳನವನ್ನು ಉದ್ಘಾಟಿಸಿದರು. ಮುಖ್ಯಾತಿಥಿಯಾಗಿ ಆಗಮಿಸಿದ ಶಾಸಕ ಶ್ರೀ ಟ.ವಿ. ರಾಜೇಶ್ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ಗ್ರಾಮ ಪಂಚಾಯತ್ ಅಧ್ಯಕ್ಷೆ ಎ. ಝುಹರಾಬೀ, ಕೆ. ಅಬ್ದುಲ್ ಅಝೀಝ್ ಸಾಹಿಬ್, ಯು ಮನ್ಸೂರ್ ಸಾಹಿಬ್, ಪಿ.ಪಿ ನಾಸಿರುದ್ದೀನ್ ಸಾಹಿಬ್, ರಫೀಕ್ ಅಹ್ಮದ್ ಸಾಹಿಬ್ (ಅಮೀರ್ ಮಾತೋಟ್ಟಂ), ಅಹ್ಮದ್ ಇಸ್ಮಾಈಲ್ ಸಾಹಿಬ್ (ಕುವೈತ್) ಮುಂತಾದವರನ್ನು ಸನ್ಮಾನಿಸಲಾಯಿತು.

ಅನಂತರ ಪಯಂಗಾಡಿ ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಆಚರಣೆಯ ಅಂಗವಾಗಿ ನಿರ್ಮಿಸಲಾದ ಡಾಕ್ಯುಮೆಂಟರಿಯನ್ನು ಪ್ರದರ್ಶಿಸಲಾಯಿತು.

**ಪ್ರತಿಭೆ** ಮಡಿಕೇರಿ ಜಮಾಅತಿನ ಕಾಶಿಫ ಅಯ್ಯೂಬ್ (6 ವರ್ಷ ಪ್ರಾಯ) – ಅಯ್ಯೂಬ್ ರಝಾ ಸಾಹಿಬ್ ಮತ್ತು ಮುಬಶಿರ ಅಯ್ಯೂಬ್ ಸಾಹಿಬರ ಪುತ್ರಿ ಪವಿತ್ರ ಖುರ್‌ಆನಿನ "ಅಮ್ಮ" ಜುಝುವನ್ನು ಕಂಠಪಾಠಮಾಡಿ ಪೂರ್ಣಗೊಳಿಸಿದ್ದಾಳೆ. ಮಾಶಾಅಲ್ಲಾಹ್.



## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

ಜನಾಬ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಬೆಂಗಳೂರು. ರೂ. 1000/=

# ಜನಾಬ್ ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬ್



ಕೇರಳದ ಪಾಲ್‌ಘಾಟಿನ ಮುಬಲ್ಲಿಗ್, ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬ್ ಅವರು 54ನೇ ವಯಸ್ಸಿನಲ್ಲಿ ಅಕ್ಟೋಬರ್ ದಿನಾಂಕ 15ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಪಿತ ಮುಕರ್‍ರಮ್ ಮೌಲವಿ ಕೆ. ಅಲವಿ ಸಾಹಿಬರ ಮೂಲಕ ಪ್ರವೇಶಿಸಿತು. ಅವರು ಅಹ್ಮದಿಯೇತರ ಮುಸ್ಲಿಮರ ಪ್ರಸಿದ್ಧ ವಿದ್ವಾಂಸರಾಗಿದ್ದರು. ಅವರು ಅಹ್ಮದಿಯರಾದಾಗ ಕಠಿಣ ವಿರೋಧವನ್ನು ಎದುರಿಸಬೇಕಾಯಿತು. ಅವರ ಮೂಲಕ ಕೇರಳದಲ್ಲಿ ನೂರಾರು ಜನರಿಗೆ ಅಹ್ಮದಿಯ್ಯತ್ ಸ್ವೀಕರಿಸುವ ಭಾಗ್ಯ ಲಭಿಸಿತು. ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬರು ತನ್ನ ತಂದೆಯ ಸಲಹೆ ಮೇರೆಗೆ ಕಾಲೇಜ್ ವಿದ್ಯಾಭ್ಯಾಸ ತ್ಯಜಿಸಿ ಖಾದಿಯಾನಿನ ಜಾಮಿಅ ಅಹ್ಮದಿಯಾ ಪ್ರವೇಶಿಸಿದರು. 1988ರಲ್ಲಿ ಅವರು ಜಾಮಿಅದಿಂದ ಉತ್ತೀರ್ಣರಾದರು. ಅವರು ಬಹಳ ದೊಡ್ಡ ವಿದ್ವಾಂಸರಾಗಿದ್ದರು. ಮುತ್ತಖಿಯೂ ನಮಾಝ್, ಉಪವಾಸಗಳನ್ನು ನಿಷ್ಠೆಯಿಂದ ನಿರ್ವಹಿಸುವವರೂ ಆಗಿದ್ದರು. ತಹಜ್ಜುದ್ ನಿರ್ವಹಿಸುವವರೂ ಪ್ರಾರ್ಥಿಸುವವರೂ ಆಗಿದ್ದರು. ಬಡವರ ಹಿತೈಷಿಯೂ ಸಹನೆದೋರುವವರೂ ಕೃತಜ್ಞಾಬದ್ಧರೂ ಆಗಿದ್ದ ನಿಷ್ಠಾವಂತ ಮನುಷ್ಯನಾಗಿದ್ದರು. ಪವಿತ್ರ ಖುರ್‌ಆನ್, ಹದೀಸ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಖಲೀಫರೆಲ್ಲರ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡುವವರಾಗಿದ್ದರು. ಅರಬಿ, ಉರ್ದು, ಮಲಯಾಳಂ ಮತ್ತು ತಮಿಳು ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. ಅವರ ಸ್ವಂತ ಲೈಬ್ರರಿಯಲ್ಲಿ ಅಸಂಖ್ಯಾತ ಅಪೂರ್ವ ಗ್ರಂಥಗಳಿದ್ದುವು. ಕೇರಳ, ತಮಿಳುನಾಡು, ಲಕ್ಷದ್ವೀಪ ಹಾಗೂ ಕುವೈತ್‌ನಲ್ಲಿ ಜಮಾಅತಿಗೆ ಸೇವೆ ಮಾಡುವ ಭಾಗ್ಯ ಅವರಿಗೆ ಲಭಿಸಿತ್ತು. ಅವರು ಉತ್ತಮ ಭಾಷಣಗಾರರೂ ವಾದ ಪ್ರತಿವಾದ ನಿಪುಣರೂ ಆಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲರವರ ನಿರ್ದೇಶ ಪ್ರಕಾರ 1994ರಲ್ಲಿ ಮುಹ್ತರಮ್ ಮೌಲಾನ ದೋಸ್ತ್ ಮುಹಮ್ಮದ್ ಶಾಹಿದ್ ಮತ್ತು ಹಾಫಿಝ್ ಮುಝಫ್ಫರ್ ಅಹ್ಮದ್ ಸಾಹಿಬರೊಂದಿಗೆ ಸೇರಿ ನಮ್ಮ ಜಮಾಅತಿನ ಒಬ್ಬ ಕಠಿಣ ವಿರೋಧಿ ಮೌಲವಿ ವಿರುದ್ಧ ಸಂವಾದ ನಡೆಸುವ ಭಾಗ್ಯ ಸಹ ಅವರಿಗೆ ಲಭಿಸಿತ್ತು. ಅವರು ಮೂಸಿ ಆಗಿದ್ದರು. ಅವರು ಇಬ್ಬರು ಪತ್ನಿಯರನ್ನೂ ಮೂವರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಅವರ ಇಬ್ಬರು ಅಳಿಯಂದಿರು ಅಲ್ಲಾಹನ ಅನುಗ್ರಹದಿಂದ ವಾಕಿಫೆ ಝಿಂದಗಿಗಳಾಗಿದ್ದಾರೆ. ಅವರ ಒಬ್ಬ ಅಳಿಯ ಬರೆಯುತ್ತಾರೆ: ಜಾಮಿಅದ ಕೊನೆಯ ವರ್ಷ ವಾರ್ಷಿಕ ರಜೆಯ ಕಾಲದಲ್ಲಿ ತಮ್ಮ ಪಿತನ ಸಲಹೆ ಪ್ರಕಾರ ಅವರು ಮನೆಗೆ ಹೋಗದೆ ಎರಡು ತಿಂಗಳ ಕಾಲ ಖಾದಿಯಾನ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಮಾತ್ರ ಅಧ್ಯಯನ ಮಾಡಲು ವಿನಿಯೋಗಿಸಿದರು. ಜಾಮಿಅದ ವಿದ್ಯಾರ್ಥಿಗಳಿಗೆ ಇದು ಒಂದು ದೊಡ್ಡ ಅನುಕರಣೀಯ ಉದಾಹರಣೆಯಾಗಿದೆ. 1998 ಮತ್ತು 2015ರಲ್ಲಿ ಅಂಜುಮನ್ ಇಶಾಅತೆ ಇಸ್ಲಾಮ್ ವಿರುದ್ಧ ನಮ್ಮ ಜಮಾಅತ್ ವತಿಯಿಂದ ಚಾರಿತ್ರಿಕ ವಾದ–ಪ್ರತಿವಾದಗಳು ಜರಗಿದುವು. ಅವುಗಳಲ್ಲಿ ಜಮಾಅತಿನ ಪರವಾಗಿ ಭಾಗವಹಿಸಿದವರು ಅವರಾಗಿದ್ದರು. ಇದಲ್ಲದೆ ಅಹ್ಲೆ ಖುರ್‌ಆನ್ ಮತ್ತು ಅಹ್ಲೆ ಹದೀಸ್ ಪಂಗಡಗಳ ವಿರುದ್ಧ ಸಹ ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಪರವಾಗಿ ಸಂವಾದ ನಡೆಸುವ ಭಾಗ್ಯ ಅವರಿಗೆ ಲಭಿಸಿತ್ತು. ಅವರು ನಮಾಝ್ ಮತ್ತು ಉಪವಾಸದ ಬಗ್ಗೆ ನಿಷ್ಠಾವಂತರಾಗಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ತಹಜ್ಜುದ್ ನಿರ್ವಹಿಸುತ್ತಿದ್ದರು. ಅವರ ಅಳಿಯ ಬರೆಯುತ್ತಾರೆ – ಬಾಲ್ಯದ ಒಂದು ಘಟನೆ ಹೀಗೆ ವಿವರಿಸಲಾಗುತ್ತಿದೆ: ಒಮ್ಮೆ ಅವರಿಗೆ ತಹಜ್ಜುದ್ ನಮಾಝ್ ನಿರ್ವಹಿಸಲು ಸಾಧ್ಯವಾಗಲಿಲ್ಲ. ಆಗ ಅವರ ತಂದೆ ಹೇಳಿದರು – ಕಂದಾ ನಿನಗೆ ಮಖಾಮೆ ಮಹ್‌ಮೂದ್ ಲಭಿಸಬೇಕೆಂದು ನೀನು ಇಚ್ಛಿಸುವುದಿಲ್ಲವೇ? ಹಾಗೆ ಅವರು ಈ ಉಪದೇಶವನ್ನು ನೆನಪಿಟ್ಟುಕೊಂಡು ಜೀವಿತಾದ್ಯಂತ ಅದರ ಪ್ರಕಾರ ವರ್ತಿಸಿದರು. ರೋಗಬಾಧಿತರಾಗಿ ಬಹಳ ಬಲಹೀನರಾಗಿದ್ದ ಸ್ಥಿತಿಯಲ್ಲಿ ಕೂಡ ಅವರು ತಹಜ್ಜುದ್ ನಿರ್ವಹಿಸುತ್ತಿದ್ದರು. ಅವರಿಗೆ ಖಿಲಾಫತ್ ಬಗ್ಗೆ ಹೃತ್ಪೂರ್ವಕ ಪ್ರೀತಿ ಮತ್ತು ನಿಷ್ಠೆ ಇತ್ತು. ಅವರು ಗಾಢವಾದ ಸಂಬಂಧ ಖಿಲಾಫತ್‌ನೊಂದಿಗೆ ಹೊಂದಿದ್ದರು. ಶೈಕ್ಷಣಿಕ, ತರಬೇತಿ ಸಂಬಂಧವಾದ, ತಬ್ಲೀಗ್ ಸಂಬಂಧವಾದ ಸಭೆಗಳಲ್ಲಿ ಅವರು ಖಿಲಾಫತ್ ಬಗ್ಗೆ ವಿಶಿಷ್ಟವಾಗಿ ದೀರ್ಘವಾಗಿ ಪ್ರಸ್ತಾಪಿಸುತ್ತಿದ್ದರು. ಅವರು ಆ ವಿಷಯದ ಬಗ್ಗೆ ಮಾತನಾಡುವಾಗ ಭಾವಪರವಶರಾಗುತ್ತಿದ್ದರು. 2015ರಲ್ಲಿ ಒಬ್ಬ ಮಹಿಳೆ ತನ್ನ ಮಕ್ಕಳೊಂದಿಗೆ ಅಹ್ಮದಿಯರಾದರು. ಅವರ ಪತಿ ಆಗ ವಿದೇಶದಲ್ಲಿದ್ದರು. ಅವರು ಮರಳಿ ಬಂದಾಗ ಅವರಿಗೆ ತಬ್ಲೀಗ್ ಮಾಡಿದಾಗ ಅವರು ಒಂದು ಪ್ರಶ್ನೆ ಕೇಳಿದರು– ಖಿಲಾಫತನ್ನು ನಂಬುವ ಆವಶ್ಯಕತೆ ಏನಿದೆ? ಆಗ ಮೌಲವಿ ಸಾಹಿಬ್ ಖಿಲಾಫತ್ ಸ್ಥಾನದ ಬಗ್ಗೆ, ಖಿಲಾಫತಿನ ಮಹತ್ವ ಮತ್ತು ಅನುಗ್ರಹಗಳ ಬಗ್ಗೆ ಎಷ್ಟು ಭಾವಪರವಶರಾಗಿ ಮಾತನಾಡಿದರೆಂದರೆ ಅವರು ಅಶ್ರುಭರಿತರಾಗಿದ್ದರು. ಆ ಅಹ್ಮದಿಯೇತರ ವ್ಯಕ್ತಿಯ ಮೇಲೆ ಅವರ ಮಾತುಗಳು ಎಷ್ಟು ಪ್ರಭಾವ ಬೀರಿತೆಂದರೆ ಅವರು ತಕ್ಷಣ ಬೈಅತ್ ಮಾಡಿದರು.

ವಾಸ್ತವಿಕವಾಗಿ ಅವರು ಖಿಲಾಫತ್‌ಗೆ ಸುಲ್ತಾನ್ ನಸೀರ್ (ಬಲಿಷ್ಠ ಸಹಾಯಕ) ಆಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸುವವನಾಗಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಭಾಗ್ಯ ಅಲ್ಲಾಹನು ನೀಡಲಿ – ಆಮೀನ್.

(1993 ಫೆಬ್ರವರಿ ಮಾಸದಲ್ಲಿ ಹಳೆಯಂಗಡಿ ನಿವಾಸಿ ಕೆ.ಎಂ. ಆಲಿ ಸಾಹೇಬರು ಅಹ್ಮದಿಯಾ ಜಮಾಅತಿಗೆ ಸೇರಿದ ಕಾರಣ ಸೆಪ್ಟೆಂಬರ್ ಮಾಸದಲ್ಲಿ ಅಹ್ಮದಿಯಾ ಜಮಾಅತಿಗೆ ವಿರುದ್ಧವಾಗಿ ಕದಿಕೆಯಲ್ಲಿ 3 ದಿನಗಳ 'ಧಾರ್ಮಿಕ ಪ್ರವಚನ' ಕಾರ್ಯಕ್ರಮವನ್ನಿಡಲಾಗಿತ್ತು. ಅದಕ್ಕೆ ಉತ್ತರವಾಗಿ ನವೆಂಬರ್ 27 ಮತ್ತು 28ರಂದು ಅಹ್ಮದಿಯಾ ಜಮಾಅತಿನ ವತಿಯಿಂದ ಕದಿಕೆ ಗ್ರಾಮದ ತಂಗಳ ಮನೆಯ ವಠಾರದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಅಲ್ಲಿಯ ಧರ್ಮಾಂಧ ಮುಸ್ಲಿಮರ ಒತ್ತಡದಿಂದ ಸಭೆ ಜರಗುವ ಕೆಲವೇ ತಾಸುಗಳಿಗೆ ಮುಂಚೆ, ಧ್ವನಿವರ್ಧಕದ ಅನುಮತಿ ರದ್ದುಪಡಿಸಲಾಗಿದೆ ಎಂದು ತಿಳಿದು ಬಂತು. ಆಗ ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬರು ಧ್ವನಿ ವರ್ಧಕ ರಹಿತವಾಗಿ, ಉಚ್ಚಸ್ವರದಲ್ಲಿ ಭಾಷಣ ಮಾಡಿ ಸಭೆಯನ್ನು ಯಶಸ್ವಿಗೊಳಿಸಿದ್ದರು. – ಸಂಪಾದಕ)

## ಜನಾಬ್ ಎಂ.ಕೆ. ಇಂಬಿಚ್ಚಿಕೋಯಟ್ಟಿ ಸಾಹಿಬ್



ಕೋಝಿಕ್ಕೋಡ್: ಜನಾಬ್ ಎಂ.ಕೆ. ಇಂಬಿಚ್ಚಿಕೋಯಟ್ಟಿ ಸಾಹಿಬ್ 5–9–2019ರಂದು ನಿಧನರಾದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಕೋಝಿಕ್ಕೋಡ್ ಜಮಾಅತಿನ ಉಮೂರೆ ಆಮ ಸೆಕ್ರಿಟರಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದ ಅವರು ಕಾರಪರಂಬ್ ಹಲ್ಕದ ಪ್ರೆಸಿಡೆಂಟ್ ಮತ್ತು ಸಂಸ್ಥಾನ ಸಮಿತಿಯಿದ್ದ ಕಾಲದಲ್ಲಿ ಅದರ ಸದಸ್ಯರೂ ಆಗಿದ್ದರು. ಪ್ರಾದೇಶಿಕ, ಜಿಲ್ಲಾ, ಸಂಸ್ಥಾನ ಕಮಿಟಿಗಳಲ್ಲಿ 50 ವರ್ಷಕಾಲ ಅವರು ಸೇವೆ ಸಲ್ಲಿಸಿದರು. ಅವರು 1964ರಲ್ಲಿ ತನ್ನ 19ನೇ ವರ್ಷ ಪ್ರಾಯದಲ್ಲಿ ಅಹ್ಮದಿಯತ್ ಸ್ವೀಕರಿಸಿದರು. ಕುಟುಂಬದವರಿಂದಲೂ ಊರಿನವರಿಂದಲೂ ಕಠಿಣ ವಿರೋಧವನ್ನು ಅವರು ಎದುರಿಸಿದರು.

2001ರಿಂದ 2010ರ ವರೆಗೆ ಅವರು ಅಹ್ಮದಿಯಾ ಜಮಾಅತಿನ ಮುಖವಾಣಿಯಾದ **"ಸತ್ಯದೂತನ್"** ಮಾಸಪತ್ರಿಕೆಯ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿದ್ದಾರೆ. ಕೋಝಿಕ್ಕೋಡಿನ ದಾರುಸ್ಸಲಾಂ, ಬೈತುಲ್ ಖುದ್ದೂಸ್, ಕೋವೂರ್ ಮಿಶನ್ ಹೌಸ್ ಮೊದಲಾದ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಅವರು ಕ್ರಿಯಾಶೀಲರಾಗಿದ್ದರು. ತಾನು ವಹಿಸಿಕೊಂಡ ಕಾರ್ಯಗಳನ್ನು ನಿಷ್ಠೆಯಿಂದ ಅವರು ನಿರ್ವಹಿಸುತ್ತಿದ್ದರು. ಬಡವರಿಗೆ ನೆರವು, ವಿವಾಹ ಕಾರ್ಯಗಳಲ್ಲಿ ಸಹಕಾರ ಅವರ ಸ್ವಭಾವವಾಗಿತ್ತು.

ಅವರು **"ಯುಗರಶ್ಮಿ"**ಯ ಹಿತೈಷಿಯಾಗಿದ್ದು ಆದಿಕಾಲದಲ್ಲಿ "Bichko Suitcase Works" ಎಂಬ ಅವರ ಸಂಸ್ಥೆಯ ಜಾಹಿರಾತು ಕೊಟ್ಟು ಪ್ರೋತ್ಸಾಹಿಸಿದ್ದಾರೆ.

ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಲ್ಲಾಹು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

## ಜನಾಬ್ ವಿ. ಅಬ್ದುರಹೀಮ್ ಸಾಹಿಬ್



ಮಡಿಕೇರಿ ಜಮಾಅತಿನ ಜನಾಬ್ ವಿ. ಅಬ್ದುರಹೀಮ್ ಸಾಹಿಬ್ 2019 ಡಿಸೆಂಬರ್ ದಿನಾಂಕ 2ರಂದು ತನ್ನ 78ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**.

ಕೇರಳದ ಕಣ್ಣೂರ್ ಜಿಲ್ಲೆಯ ಕೂಡಾಳಿಯ ನಿವಾಸಿ ಆಗಿದ್ದ ಅವರು ಮುಂಬಯಿಯಲ್ಲಿ ಬ್ಯಾಗುಗಳನ್ನು ನಿರ್ಮಿಸುವ ಉದ್ದಿಮೆಯನ್ನು ದೀರ್ಘಕಾಲ ನಡೆಸಿದ್ದರು. ಅನಂತರ ಮಡಿಕೇರಿಯಲ್ಲಿ ಕೈಗಾರಿಕೆಯ ವಲಯದಲ್ಲೂ ಮಹದೇವ ಪೇಟೆಯಲ್ಲಿಯೂ ಇದೇ ಉದ್ದಿಮೆಯಲ್ಲಿ ಕಾರ್ಯನಿರತರಾಗಿದ್ದರು. ಮಡಿಕೇರಿ ಜಮಾಅತಿನ ಪ್ರಥಮ ಗುಂಪಿನ ಅಹ್ಮದಿಯರಲ್ಲಿ ಒಬ್ಬರಾದ ಮುಕರ್ರಮ್ ಪಿ. ಕುಞ್ಞಾಲಿ (ಅಹ್ಮದ್ ಅಲಿ) ಸಾಹಿಬರ ಪುತ್ರಿಯನ್ನು ವಿವಾಹಿತರಾಗಿದ್ದ ಅವರು ಪತ್ನಿಯನ್ನೂ ಇಬ್ಬರು ಪುತ್ರರನ್ನೂ ಇಬ್ಬರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ರಹ್‌ಮತನ್ನೂ ಅನುಗ್ರಹಿಸಲಿ. ಅವರ ಕುಟುಂಬದವರಿಗೂ ಅವರ ಇತರ ಬಂಧುಗಳಿಗೂ ಸಾಂತ್ವನವನ್ನು ಅಲ್ಲಾಹನು ನೀಡಲಿ – ಆಮೀನ್. **– ಎಮ್. ಉಬೈದುಲ್ಲಾ**

## ಅಮತುಲ್ ಹಫೀಝ್ ಸಾಹಿಬ

ಕೋಝಿಕೋಡ್: ಮೌಲಾನ ಮುಹಮ್ಮದ್ ಉಮರ್ ಸಾಹಿಬರ ಪತ್ನಿ ಅಮತುಲ್ ಹಫೀಝ್ ಸಾಹಿಬ (ಪ್ರಾಯ 72 ವರ್ಷ) 20–10–2019ರಂದು ನಿಧನರಾದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**.

ಸುಮಾರು 58 ವರ್ಷಗಳ ಕಾಲ ಅವರು ಹೈದರಾಬಾದ್, ಬೊಂಬಾಯಿ, ಚೆನ್ನೈ, ಕೋಝಿಕೋಡ್, ಕಬಾಬೀರ್, ಖಾದಿಯಾನ್ ಮೊದಲಾದ ಕಡೆಗಳಲ್ಲಿ ತನ್ನ ಪತಿಯ ದೀನೀ ಸೇವೆಯಲ್ಲಿ ಸಹಭಾಗಿಯಾದರು. 1992ರಲ್ಲಿ ಕೇರಳ ಲಜ್ನಾ ಇಮಾಇಲ್ಲಾ ಸದರ್ ಆಗಿ ನಿಯುಕ್ತರಾದ ಅವರು 15 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅವರು ಮಲಯಾಳಂ, ಉರ್ದು, ತಮಿಳು ಭಾಷೆಗಳನ್ನು ಬಲ್ಲವರಾಗಿದ್ದರು. ಅವರು ತನ್ನ ಪತಿಯೊಂದಿಗೆ ಶ್ರೀಲಂಕಾ, ಯು.ಕೆ, ಜರ್ಮನಿ, ಬೆಲ್ಜಿಯಂ, ಮಾಂಚೆಸ್ಟರ್ ಮೊದಲಾದ ಜಮಾಅತುಗಳನ್ನು ಸಂದರ್ಶಿಸಿದ್ದರು. 2015ರಲ್ಲಿ ಅವರು ತನ್ನ ಪತಿಯೊಂದಿಗೆ ಉಮ್ರ ಪುಣ್ಯ ಕರ್ಮಾನುಷ್ಠಾನ ಮಾಡಿದರು. ಅವರು ಅತಿಥಿ ಸತ್ಕಾರ ಪ್ರಿಯಳೂ ಸ್ನೇಹಮಯಿಯೂ ದಾನಶೀಲೆಯೂ ಆಗಿದ್ದರು. ಅವರು ಪತಿಯನ್ನೂ ನಾಲ್ವರು ಹೆಣ್ಮಕ್ಕಳನ್ನೂ ಅಗಲಿರುವರು. ಅಲ್ಲಾಹನು ಅವರಿಗೆ ಮಗ್ಫಿರತನ್ನೂ ರಹ್ಮತನ್ನೂ ಕರುಣಿಸಲಿ – ಆಮೀನ್.

## ಶ್ರೀಮತಿ ಆಯೆಷಾಬಿ ಸಾಹಿಬ

ಬಜ್ಪೆ ಕರಂಬಾರಿನ ಮರ್ಹೂಮ್ ಜಿ. ಕೋಯಹಸನ್ ಸಾಹೇಬರ ಸಹಧರ್ಮಿಣಿಯಾಗಿದ್ದ ಶ್ರೀಮತಿ ಆಯೆಷಾಬಿಯವರು (ಸುಮಾರು) 95ನೇ ವರ್ಷ ವಯಸ್ಸಿನಲ್ಲಿ ಕರಂಬಾರಿನ ತಮ್ಮ ಸ್ವಗ್ರಹದಲ್ಲಿ ತಾ. 26–11–2019ರಂದು ದೈವಾಧೀನರಾಗಿದ್ದಾರೆ – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಮೃತರು ಸುಮಾರು ಮೂರೂವರೆ ವರ್ಷಗಳಿಂದಲೂ ಮಲಗಿದ್ದಲ್ಲಿಯೇ ತಮ್ಮ ಅಂತ್ಯದಿನಗಳನ್ನು ಕಳೆದಿದ್ದರು. ಅವರು ಕೊನೆಗಾಲದಲ್ಲಿ ಜ್ಞಾಪಕಶಕ್ತಿಯನ್ನು ಮಾತ್ರ ಕಳೆದುಕೊಂಡಿದ್ದರೂ ಯಾವುದೇ ರೋಗರುಜಿನಗಳಿಗೆ (ಅಲ್ಲಾಹುವಿನ ಅನುಗ್ರಹದಿಂದ) ಅಧೀನರಾಗಿರಲಿಲ್ಲ! ಜಮಾಅತಿನ ಕುರಿತಾಗಿ ಅತೀವ ವಿಶ್ವಾಸ ಹೊಂದಿದ್ದು, ದೈವಭೀರುವಾಗಿದ್ದರು.

ಅವರು ಸತ್ವಭಾವಿಯೂ ಸಹನಾಮಯಿಯೂ ಸಾತ್ವಿಕರೂ ಪರೋಪಕಾರಿಯೂ ಆಗಿದ್ದು, ಸರ್ವರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ಅವರು ಮೂರು ಗಂಡು, ಮೂರು ಹೆಣ್ಣು ಮಕ್ಕಳನ್ನೂ ಅನೇಕ ಮೊಮ್ಮಕ್ಕಳು ಮರಿಮಕ್ಕಳನ್ನೂ ಅಪಾರ ಅಭಿಮಾನಿ ಬಂಧುಬಳಗವನ್ನೂ ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್ಫಿರತನ್ನು ಕರುಣಿಸಿ ಅನುಗ್ರಹಿಸಲಿ – ಆಮೀನ್. **– ಕೆ. ಅಬ್ದುಲ್ ಕರೀಮ್**

ಓದಿದ್ದು

ಚರ್ಚೆಗೆ ಆಹ್ವಾನ ನೀಡಿದ ಅಖಿಲ ಭಾರತ ಬಿಕ್ಕು ಸಂಘದ ಭಂತೆ ಆನಂದ

# ರಾಮ ಹುಟ್ಟಿದ್ದು ಭಾರತದಲ್ಲಿ ಅಲ್ಲ, ಥೈಲ್ಯಾಂಡ್‌ನಲ್ಲಿ: ಬಹಿರಂಗ ಚರ್ಚೆಗೆ ಆಹ್ವಾನ

♦ದೇಶದ ರಸ್ತೆ-ರಸ್ತೆಗಳಲ್ಲಿ ಕಟ್ಟಿದ ದೇವಸ್ಥಾನಗಳಿಗೆ ದಾಖಲೆಗಳಿಲ್ಲ: ಆರೋಪ.

♦ಮೌಢ್ಯ, ಭಯದಲ್ಲೇ ಜನರನ್ನು ಬದುಕಿಸಿದ ವೈದಿಕರು: ಭಂತೆ ಆನಂದ ಆಕ್ರೋಶ

♦ಹನುಮಂತ ಸೂರ್ಯನನ್ನು ನುಂಗಿದ ಎಂಬ ಕಥೆಯನ್ನು ಹೇಳುವವರಿಗೆ ಏನೆನ್ನಬೇಕು. ಆತ ದೇವರು ಎಂದು ನಂಬಿಸಿ, ಆ ಮೂಲಕ ಭಯ ಹುಟ್ಟಿಸಿದ್ದಾರೆ.

**ಭಂತೆ ಆನಂದ ಮಹಾಸ್ಥವೀರ, ಉಪಾಧ್ಯಕ್ಷ, ಅಖಿಲ ಭಾರತ ಭಿಕ್ಕು ಸಂಘ**

**ಕಲಬುರ್ಗಿ:** 'ಶ್ರೀರಾಮ ಭಾರತದಲ್ಲಿ ಹುಟ್ಟಿದ್ದಾನೆ ಎಂಬ ಕಥೆ ಕಟ್ಟಿ, ತಮ್ಮ ಲಾಭಕ್ಕಾಗಿ ಜನರಲ್ಲಿ ಭಯ ತುಂಬಲಾಗುತ್ತಿದೆ. ವಾಸ್ತವದಲ್ಲಿ ರಾಮ ಜನಿಸಿದ್ದು ಭಾರತದಲ್ಲಿ ಅಲ್ಲ, ಥೈಲ್ಯಾಂಡ್‌ನಲ್ಲಿ. ಈಗಲೂ ಆ ದೇಶದಲ್ಲಿ ರಾಮನ ಆರಾಧನೆ ನಡೆಯುತ್ತಿದೆ. ಈ ಬಗ್ಗೆ ಯಾರೇ ಚರ್ಚೆಗೆ ಕರೆದರೂ ನಾನು ಸಿದ್ಧ' ಎಂದು ಅಖಿಲ ಭಾರತ ಭಿಕ್ಕು ಸಂಘದ ಉಪಾಧ್ಯಕ್ಷ ಭಂತೆ ಆನಂದ ಮಹಾಸ್ಥವೀರ ಸವಾಲು ಹಾಕಿದರು.

ಮೆತ್ತಾ ಫೌಂಡೇಶನ್ ಧಮ್ಮಚಕ್ರ ಪ್ರವರ್ತನಾ ದಿನ, ವರ್ಷವಾಸದ ಮುಕ್ತಾಯ ಮತ್ತು ಕಠಿಣ ಛೀವರ ದಾನ ನೀಡುವ ಪ್ರಯುಕ್ತ ಇಲ್ಲಿನ ಸಿದ್ಧಾರ್ಥ ನಗರದ ದೀಕ್ಷಾಭೂಮಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಧಮ್ಮ ಉತ್ಸವ'ದಲ್ಲಿ ಅವರು ಧಮ್ಮ ದೀಕ್ಷೆ ನೀಡಿ ಮಾತನಾಡಿದರು.

'ಭಾರತದಲ್ಲಿ ದೇವರೆಂದು ಕರೆಯುವ ರಾಮನೇ ಹುಟ್ಟಿಲ್ಲ. ಆತ ಹುಟ್ಟಿದ್ದಾನೆಂದು ಕೇವಲ ಕಲ್ಪನೆಯನ್ನು ಭಾರತೀಯರ ಮೇಲೆ ಹೇರಲಾಗಿದೆ. ಈ ನಿಟ್ಟಿನಲ್ಲಿ ಬ್ರಾಹ್ಮಣರಾದಿಯಾಗಿ ಪ್ರಧಾನಿ, ಜನತೆ, ವಿದ್ವಾಂಸರು, ಮಂತ್ರಿಗಳು, ಇತಿಹಾಸಕಾರರು, ಹೋರಾಟಗಾರರು ಯಾರು ಬೇಕಾದರೂ ಬಂದು ನನ್ನೊಂದಿಗೆ ಚರ್ಚೆ ಮಾಡಿದರೂ ನಾನು ಸಿದ್ಧ ಇದ್ದೇನೆ. ವೈಜ್ಞಾನಿಕವಾಗಿ ಎಲ್ಲವನ್ನು ನಿರೂಪಿಸುತ್ತೇನೆ' ಎಂದು ಆಹ್ವಾನ ನೀಡಿದರು.

'ದೇಶದ ರಸ್ತೆ – ರಸ್ತೆಗಳಲ್ಲಿ ದೇವರ ಮಂದಿರಗಳನ್ನು ಕಟ್ಟಿಸಿದ್ದಾರೆ. ಅದಾವುದಕ್ಕೂ ದಾಖಲೆಯೇ ಇಲ್ಲ. ಆದರೆ, ದೆಹಲಿಯಲ್ಲಿ ರಾಮದಾಸ ಮಂದಿರವನ್ನು ಬೀಳಿಸಲಾಗುತ್ತದೆ. ಈ ಮಂದಿರ ನಿರ್ಮಾಣಕ್ಕೆ ಸುಪ್ರಿಂಕೋರ್ಟ್ ಅನುಮತಿ ಪಡೆದಿಲ್ಲ ಎನ್ನುವ ಹೇಳಿಕೆ ನೀಡುತ್ತದೆ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

'ಮನುಷ್ಯರಲ್ಲಿ ಭಯ ಹುಟ್ಟಿಸುವ, ನಂಬಿಕೆ, ಮೂಢನಂಬಿಕೆಗಳನ್ನು ಹೇರುವ, ಆಹಾರ, ಜೀವನ ಶೈಲಿ, ದೇವರು, ಪಕ್ಷ, ಆಚರಣೆಗಳಲ್ಲೂ ಇಂತಹದ್ದೇ ಇರಬೇಕು ಎಂದು ಒತ್ತಾಯಿಸುವ, ಜಾತಿ ಪದ್ಧತಿ ಮುಂದುವರಿಸುವ ಸ್ಥಿತಿಯಲ್ಲಿ ಇರುವುದು ಬೇಡ ಎಂದು ಅಂಬೇಡ್ಕರ್ ಅವರು ಬೌದ್ಧ ಧರ್ಮದ ದೀಕ್ಷೆ ಪಡೆದರು' ಎಂದು ತಿಳಿಸಿದರು.

'ನಮ್ಮ ಮಾಧ್ಯಮಗಳಲ್ಲಿ ದಿನವಿಡೀ ಹಲವಾರು ವಿಷಯಗಳ ಮೇಲೆ ಚರ್ಚೆ ನಡೆಯುತ್ತದೆ. ಆದರೆ, ಧರ್ಮದ ಚರ್ಚೆ ನಡೆದಾಗ ಬೌದ್ಧ ಬಿಕ್ಕುಗಳನ್ನು ಏಕೆ ಕರೆಸುವುದಿಲ್ಲ? ಸುಳ್ಳುಗಳನ್ನು ಪ್ರತಿಪಾದನೆ ಮಾಡುವ ಮುಖಂಡರನ್ನು ಕರೆದು ಟಿ.ವಿ.ಗಳಲ್ಲಿ ಚರ್ಚೆ ಬಿತ್ತರಿಸುತ್ತಾರೆ. ಇದೆಲ್ಲ ವ್ಯವಸ್ಥಿತ ಹುನ್ನಾರ' ಎಂದೂ ಅವರು ದೂರಿದರು.

'ಅಂಬೇಡ್ಕರ್ ಅವರೊಂದಿಗೆ ಒಂದು ಲಕ್ಷ ಜನ ಬೌದ್ಧ ಧರ್ಮ ಸ್ವೀಕರಿಸಿದರು. ಆದರೂ ಅವರು ಕಟ್ಟಿದ ಆರ್‌ಪಿಐ ಪಕ್ಷ, ಸಮತಾ ಸೈನಿಕ ದಳ, ಭಾರತೀಯ ಬೌದ್ಧ ಮಹಾಸಭಾ ಹೀಗೆ ಎಲ್ಲ ಸಂಘಟನೆಗಳೂ ಇಬ್ಭಾಗವಾದವು. ಈಗ ಬೌದ್ಧ ಮತ್ತು ಧಮ್ಮವನ್ನು ಒಡೆಯಲಾಗುತ್ತಿದೆ. ಅದಕ್ಕೆ ನಮ್ಮವರೇ ಕಾರಣ ಆಗುತ್ತಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ ಡಿ.ಜಿ. ಸಾಗರ ಮಾತನಾಡಿದರು. ಪಂಚಾಯತರಾಜ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಡಾ. ಸುರೇಶ ಶರ್ಮಾ ಅಧ್ಯಕ್ಷತೆ ವಹಿಸಿದ್ದರು. ಬಿಕ್ಕುಣಿ ಸುಮನಾ ಪುಣೆ, ಬಿಕ್ಕುಣಿ ಧಮ್ಮದೀಪ ಅಕೋಲಾ, ಕೀರ್ತಿ, ರಾಹುಲ್ ಲಕ್ಷ್ಮಿಕಾಂತ ಹುಬ್ಬಳ್ಳಿ ವೇದಿಕೆ ಮೇಲಿದ್ದರು.

ಸುರೇಶ ಮೇಂಗನ್ ಸ್ವಾಗತಿಸಿದರು. ಅಂಬಿಕಾ ಹುಬ್ಬಳ್ಳಿ ಕಾರ್ಯಕ್ರಮ ನಿರೂಪಿಸಿದರು. **(ಪ್ರಜಾವಾಣಿ 15–10–2019)**

---

# ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ: ವಿಶ್ವಸಂಸ್ಥೆಯ ಆಯೋಗದ ವರದಿಯಲ್ಲಿ ಪಾಕ್‌ಗೆ ಖಂಡನೆ

ವಾಶಿಂಗ್ಟನ್, ಡಿ. 15: ಪಾಕಿಸ್ತಾನದ ಪಾಕಿಸ್ತಾನ್ ತೆಹ್ರೀಕೆ ಇನ್ಸಾಫ್ ಸರಕಾರದ ತಾರತಮ್ಯಕಾರಿ ಕಾನೂನು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ದಾಳಿಗಳನ್ನು ನಡೆಸಲು 'ತೀವ್ರವಾದಿ ಮನೋಭಾವ' ಹೊಂದಿರುವ ಜನರಿಗೆ ಶಕ್ತಿ ತುಂಬಿದೆ ಎಂದು ವಿಶ್ವಸಂಸ್ಥೆಯ ಮಹಿಳೆಯರ ಸ್ಥಾನಮಾನ ಕುರಿತ ಆಯೋಗ (ಸಿಎಸ್‌ಡಬ್ಲು) ಹೇಳಿದೆ.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ಆಯೋಗವಾಗಿರುವ ಸಿಎಸ್‌ಡಬ್ಲ್ಯು ಡಿಸೆಂಬರ್‌ನಲ್ಲಿ ಬಿಡುಗಡೆ ಮಾಡಿದ 'ಪಾಕಿಸ್ತಾನದ ಧಾರ್ಮಿಕ ಸ್ವಾತಂತ್ರ್ಯ ದಾಳಿಗೊಳಗಾಗುತ್ತಿದೆ' ಎಂಬ ಶೀರ್ಷಿಕೆಯ 47 ಪುಟದ ವರದಿಯಲ್ಲಿ, ದೇವನಿಂದನೆ ಕಾನೂನುಗಳು ಮತ್ತು ಅಹ್ಮದೀಯ ವಿರೋಧಿ ಕಾನೂನನ್ನು ದ್ವೇಷ ಸಾಧನೆ ಮತ್ತು ರಾಜಕೀಕರಣಕ್ಕೆ ಹೆಚ್ಚೆಚ್ಚು ಬಳಸಲಾಗುತ್ತಿದೆ ಎಂದು ಅದು ತಿಳಿಸಿದೆ. ಧಾರ್ಮಿಕ ಅಲ್ಪಸಂಖ್ಯಾತರನ್ನು ದಮನಿಸಲು ಮಾತ್ರವಲ್ಲ, ರಾಜಕೀಯ ಲಾಭವನ್ನು ಪಡೆದುಕೊಳ್ಳಲೂ ಈ ಕಾನೂನುಗಳನ್ನು ಬಳಸಲಾಗುತ್ತಿದೆ ಎಂದು ಸಿಎಸ್‌ಡಬ್ಲ್ಯು ಹೇಳಿದೆ.

ಪಾಕಿಸ್ತಾನದಲ್ಲಿರುವ ಕ್ರೈಸ್ತ ಮತ್ತು ಹಿಂದೂ ಸಮುದಾಯಗಳು, ಅದರಲ್ಲೂ ಮುಖ್ಯವಾಗಿ ಮಹಿಳೆಯರು ಮತ್ತು ಬಾಲಕಿಯರು

ಮುಖ್ಯವಾಗಿ ಅಪಾಯದಲ್ಲಿದ್ದಾರೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

"ಪ್ರತಿ ವರ್ಷ ನೂರಾರು ಮಹಿಳೆಯರು ಮತ್ತು ಬಾಲಕಿಯರನ್ನು ಅಪಹರಿಸಿ, ಮತಾಂತರಗೊಳ್ಳಲು ಹಾಗೂ ಮುಸ್ಲಿಮ್ ಪುರುಷರನ್ನು ಮದುವೆಯಾಗಲು ಬಲವಂತಪಡಿಸಲಾಗುತ್ತಿದೆ. ಅಪಹರಣಕಾರರು ಬಾಲಕಿಯರು ಮತ್ತು ಅವರ ಕುಟುಂಬಗಳಿಗೆ ಗಂಭೀರ ಬೆದರಿಕೆಗಳನ್ನು ಹಾಕುವುದರಿಂದ ಸಂತ್ರಸ್ತೆಯರು ತಮ್ಮ ಕುಟುಂಬಗಳಿಗೆ ಮರಳುವ ಯಾವುದೇ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ. ಇದಕ್ಕೆ ಪೂರಕವಾಗಿ ಬಾಲಕಿಯರ ಅಪಹರಣಕಾರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಯಾವುದೇ ಇಚ್ಛಾಶಕ್ತಿಯನ್ನು ಪೊಲೀಸರು ಹೊಂದಿಲ್ಲ ಹಾಗೂ ದುರ್ಬಲ ನ್ಯಾಯಾಂಗ ಪ್ರಕ್ರಿಯೆಯಿಂದ ಹೆಚ್ಚಿನದನ್ನು ನಿರೀಕ್ಷಿಸುವಂತಿಲ್ಲ. ಅದೂ ಅಲ್ಲದೆ, ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಗಳು ಧಾರ್ಮಿಕ ಅಲ್ಪಸಂಖ್ಯಾತ ಸಂತ್ರಸ್ತರ ವಿರುದ್ಧ ತಾರತಮ್ಯ ಧೋರಣೆಯನ್ನು ಹೊಂದಿವೆ" ಎಂದು ವರದಿ ಹೇಳುತ್ತದೆ.

ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾತರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಬಿಂಬಿಸುವ ಹಲವಾರು ಪ್ರಮುಖ ಉದಾಹರಣೆಗಳನ್ನು ಆಯೋಗ ಉದಾಹರಿಸಿದೆ.

ಇಸ್ಲಾಮನ್ನು ಅವಹೇಳನ ಮಾಡುವವರನ್ನು ಶಿಕ್ಷಿಸುವ ಪಾಕಿಸ್ತಾನದ ದೇವನಿಂದನೆ ಕಾನೂನುಗಳನ್ನು ಹೆಚ್ಚಿನ ಸಂದರ್ಭಗಳಲ್ಲಿ ದುರುಪಯೋಗಪಡಿಸಲಾಗುತ್ತಿದೆ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲು ಬಳಸಲಾಗುತ್ತಿದೆ ಎಂದು ಆಯೋಗ ಹೇಳಿದೆ. **(ವಾರ್ತಾಭಾರತಿ "Via Daily Hunt" 15–12–2019)**

## ಅತ್ಯಾಚಾರ ಆರೋಪ: ಸ್ವಾಮಿ ಚಿನ್ಮಯಾನಂದ ಸೆರೆ

**♦ಆರೋಪಿಗೆ 14 ದಿನಗಳ ನ್ಯಾಯಾಂಗ ಬಂಧನ**

**♦ಎಲ್ಲ ಆರೋಪಗಳನ್ನೂ ಒಪ್ಪಿಕೊಂಡು, ನನಗೆ ನಾಚಿಕೆಯಾಗುತ್ತಿದೆ ಎಂದ ಚಿನ್ಮಯಾನಂದ**

ಶಹಜಹಾನ್‌ಪುರ, ಸೆ. 20: ಅತ್ಯಾಚಾರ ಆರೋಪ ಎದುರಿಸುತ್ತಿರುವ ಬಿಜೆಪಿ ನಾಯಕ, ಕೇಂದ್ರದ ಮಾಜಿ ಸಚಿವ ಸ್ವಾಮಿ ಚಿನ್ಮಯಾನಂದರನ್ನು ಶುಕ್ರವಾರ ಬಂಧಿಸಲಾಗಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಉತ್ತರ ಪ್ರದೇಶ ಪೊಲೀಸರ ವಿಶೇಷ ತನಿಖಾ ತಂಡ ಅವರನ್ನು ಅವರ ಸ್ವಗೃಹ 'ದಿವ್ಯಧಾಮ'ದಿಂದ ಬೆಳಗ್ಗೆ 8.30ಕ್ಕೆ ಭಾರೀ ಭದ್ರತೆಯ ನಡುವೆ ಬಂಧಿಸಿತು. ಇದೇ ವೇಳೆ, ತಮ್ಮ ಮೇಲಿನ ಎಲ್ಲ ಆರೋಪಗಳನ್ನೂ ಚಿನ್ಮಯಾನಂದ ಒಪ್ಪಿಕೊಂಡಿದ್ದು, ಈ ಬಗ್ಗೆ ನನಗೆ ನಾಚಿಕೆಯಾಗುತ್ತಿದೆ ಎಂದು ತನಿಖಾಧಿಕಾರಿಗಳ ಮುಂದೆ ಹೇಳಿರುವುದಾಗಿ ಎಸ್‌ಐಟಿ ಮುಖ್ಯಸ್ಥರು ತಿಳಿಸಿದ್ದಾರೆ.

ಇದೇ ವೇಳೆ, ಬಂಧನ ಕುರಿತು ಪ್ರತಿಕ್ರಿಯಿಸಿರುವ ಸಂತ್ರಸ್ತ ವಿದ್ಯಾರ್ಥಿನಿ, ಚಿನ್ಮಯಾನಂದ ವಿರುದ್ಧ ಸೆಕ್ಷನ್ 376ರ ಬದಲಿಗೆ ಸೆಕ್ಷನ್ 376ಸಿ ಅನ್ವಯ ಎಸ್‌ಐಟಿ ಕೇಸು ದಾಖಲಿಸಿದೆ. ಇದು ಆರೋಪಿಯ ವಿರುದ್ಧದ ಪ್ರಕರಣ ದುರ್ಬಲಗೊಳಿಸುವ ಯತ್ನವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಚಿನ್ಮಯಾನಂದ ಮಾಲಕತ್ವದ ಕಾಲೇಜಿನಲ್ಲಿ ಕಾನೂನು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯೊಬ್ಬರು ಸ್ವಾಮಿ ಚಿನ್ಮಯಾನಂದ ನನ್ನ ಮೇಲೆ ವರ್ಷದಿಂದ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾರೆ ಎಂದು ದೂರು ನೀಡಿದ್ದರು.

**(ಉದಯವಾಣಿ 21–9–2019)**

## ಪಾದ್ರಿಯಿಂದ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ

ಕೊಚ್ಚಿ ಸೆ. 20: ಎರ್ನಾಕುಲಂ ಜಿಲ್ಲೆಯ ಚರ್ಚ್‌ನ 70 ವರ್ಷದ ಪಾದ್ರಿಯೊಬ್ಬರು ಅಪ್ರಾಪ್ತ ವಯಸ್ಸಿನ ಬಾಲಕಿಯರ ವಿರುದ್ಧ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಪ್ರಕರಣ ದಾಖಲಾಗಿದೆ. ಇದರ ಬೆನ್ನಲ್ಲೇ ಪಾದ್ರಿ ತಲೆಮರೆಸಿಕೊಂಡಿದ್ದಾರೆ. ಕಳೆದ ತಿಂಗಳು 9 ವರ್ಷ ವಯಸ್ಸಿನ ಬಾಲಕಿಯರು ಆಶೀರ್ವಾದ ಪಡೆಯಲೆಂದು ಚರ್ಚ್‌ಗೆ ತೆರಳಿದ್ದ ವೇಳೆ ಪಾದ್ರಿ ಅನುಚಿತವಾಗಿ ವರ್ತಿಸಿದ್ದರು ಎಂದು ಆರೋಪಿಸಲಾಗಿದೆ.

**(ಉದಯವಾಣಿ 21–9–2019)**

## 'ಕಲ್ಕಿ ಭಗವಾನ್' ಬಳಿ 409 ಕೋಟಿ ರೂ. ಪತ್ತೆ

ಚೆನ್ನೈ: ಧಾರ್ಮಿಕ ಗುರು 'ಕಲ್ಕಿ ಭಗವಾನ್'ಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆಸಿದ ಬಳಿಕ ದಾಖಲೆ ಇಲ್ಲದ 409 ಕೋಟಿ ರೂ. ಪತ್ತೆಯಾಗಿದೆ. ಆದಾಯ ತೆರಿಗೆ ಇಲಾಖೆ ಶುಕ್ರವಾರ ಈ ಮಾಹಿತಿ ನೀಡಿದೆ. 2014–15ನೇ ವಿತ್ತೀಯ ವರ್ಷದಿಂದ ಈ ಬೆಳವಣಿಗೆ ನಡೆದುಕೊಂಡು ಬರುತ್ತಿದೆ. ಬೆಂಗಳೂರು, ಚೆನ್ನೈ, ಆಂಧ್ರದ ಪರದಯ್ಯಪಾಲಂಗಳಲ್ಲಿ 'ಕಲ್ಕಿ ಭಗವಾನ್'ಗೆ ಸೇರಿದ ಸ್ಥಳಗಳ ಮೇಲೆ ಬುಧವಾರ ಐಟಿ ದಾಳಿ ನಡೆದಿತ್ತು. ಪ್ರತಿಯೊಂದು ಸ್ಥಳದಲ್ಲಿಯೂ ಆದಾಯದ ಬಗ್ಗೆ ಸೂಕ್ತ ಲೆಕ್ಕಾಚಾರಗಳನ್ನು ಇಟ್ಟುಕೊಂಡಿಲ್ಲದೇ ಇರುವುದು ಪತ್ತೆಯಾಗಿದೆ. ಸರಕಾರಿ ದಾಖಲೆಗಳಲ್ಲಿ ಉಲ್ಲೇಖಿಸಿದಕ್ಕಿಂತ ಹೆಚ್ಚಿಗೆ ಮೊತ್ತದಲ್ಲಿ ಆಸ್ತಿ ಮಾರಿ ಕೋಟ್ಯಂತರ ರೂ. ಸಂಗ್ರಹಿಸಿರುವ ಶಂಕೆ ಇದೆ. **(ಉದಯವಾಣಿ 19–10–2019)**

## ಜಕೀರ್‌ನನ್ನು ಆರ್ಥಿಕ ಅಪರಾಧಿ ಎಂದು ಘೋಷಿಸಿ

ಮುಂಬಯಿ: ವಿವಾದಿತ ಇಸ್ಲಾಮಿಕ್ ಧಾರ್ಮಿಕ ವಿದ್ವಾಂಸ ಜಕೀರ್ ನಾಯ್ಕ್‌ನನ್ನು ಘೋಷಿತ ಆರ್ಥಿಕ ಅಪರಾಧಿ ಎಂದು ಘೋಷಣೆ ಮಾಡಬೇಕು ಎಂದು ಜಾರಿ ನಿರ್ದೇಶಾಲಯ ಇಲ್ಲಿನ ಸ್ಥಳೀಯ ಕೋರ್ಟ್‌ಗೆ ಸೋಮವಾರ ಮನವಿ ಮಾಡಿದೆ. ಇ.ಡಿ. ಅರ್ಜಿಯನ್ನು ಕೋರ್ಟ್ ಸ್ವೀಕರಿಸಿದ್ದು ಸೆ. 30ರಂದು ವಿಚಾರಣೆ ನಡೆಸುವುದಾಗಿ ಪ್ರಕಟಿಸಿದೆ. ಆತ ಮಲೇಷ್ಯಾದಲ್ಲಿ ಇದ್ದಾನೆ ಎಂದು ಹೇಳಲಾಗಿದ್ದು ಅತನ ವಿರುದ್ಧ 193 ಕೋಟಿ ರೂ. ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪ ಹೊರಿಸಲಾಗಿದೆ. **(ಉದಯವಾಣಿ 24–9–2019)**

## ಸಾಧ್ವಿ ಮೇಲೆ ಅತ್ಯಾಚಾರ

ಶೇಖ್‌ಪುರ: ಸಾಧ್ವಿಯೊಬ್ಬರ ಮೇಲೆ ಇಬ್ಬರು ಕಾಮುಕರು ಸಾಮೂಹಿಕ ಅತ್ಯಾಚಾರ ಎಸಗಿರುವಂಥ ಘಟನೆ ಬಿಹಾರದ ಶೇಖ್‌ಪುರ ಜಿಲ್ಲೆಯಲ್ಲಿ ನಡೆದಿದೆ. ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು ಸಾಧ್ವಿಯು ಉತ್ತರಪ್ರದೇಶದ ಬಸ್ತಿ ಜಿಲ್ಲೆಯ ತಮ್ಮ ಊರಿಗೆ ತೆರಳುತ್ತಿದ್ದಾಗ ಈ ಕೃತ್ಯ ಎಸಗಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸಾಧ್ವಿಯು ಕಾಕೋಲಟ್‌ನ ಆಶ್ರಮವೊಂದರಲ್ಲಿ ವಾಸಿಸುತ್ತಿದ್ದು, ಭಾನುವಾರ ಅವರ ಊರಿನವರಾದ ಇಬ್ಬರು ಪುರುಷರು ಆಶ್ರಮಕ್ಕೆ ಬಂದು, ಸಾಧ್ವಿಯ ತಾಯಿಯು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವುದಾಗಿ ಮಾಹಿತಿ ನೀಡಿದರು. ಕೂಡಲೇ ಸಾಧ್ವಿ ಊರಿಗೆ ಹೊರಟರು. ದಾರಿ ಮಧ್ಯೆ ಈ ಇಬ್ಬರ ಜೊತೆಗೆ ಮತ್ತಿಬ್ಬರು ಸೇರಿಕೊಂಡು ಸಾಮೂಹಿಕ ಅತ್ಯಾಚಾರ ಎಸಗಿದ್ದಾಗಿ ಸಾಧ್ವಿ ದೂರಿನಲ್ಲಿ ತಿಳಿಸಿದ್ದಾರೆ. **(ಉದಯವಾಣಿ 29–10–2019)**

## ವ್ಯಾಟಿಕನ್‌ಗೆ ಸನ್ಯಾಸಿನಿ ಪತ್ರ

ಕೊಚ್ಚಿ: ಅತ್ಯಾಚಾರ ಆರೋಪ ಹೊತ್ತಿರುವ ಬಿಷಪರನ್ನು ಬಂಧಿಸಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಕ್ಕೆ ತಮ್ಮನ್ನು ವಜಾ ಮಾಡಿದ ಫ್ರಾನ್ಸಿಸ್ಕನ್ ಕ್ಲಾರಿಸ್ಟ್ ಕಾಂಗ್ರೆಗೇಷನ್‌ನ ನಿರ್ಧಾರ ಪ್ರಶ್ನಿಸಿ ಕೇರಳದ ನನ್ (ಕ್ರೈಸ್ತ ಸನ್ಯಾಸಿನಿ)ವೊಬ್ಬರು ವ್ಯಾಟಿಕನ್‌ಗೆ ಪತ್ರ ಬರೆದಿದ್ದಾರೆ. ನ್ಯಾಯಾಧಿಕರಣದ ಮುಂದೆ ಖುದ್ದಾಗಿ ಹಾಜರಾಗಲು ತಮಗೆ ಅವಕಾಶ ಕಲ್ಪಿಸಬೇಕು ಎಂದು ಪತ್ರದಲ್ಲಿ ಸಿಸ್ಟರ್ ಲೂಸಿ ಕಲಪ್ಪುರ ಕೇಳಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ತಮ್ಮ ಪ್ರಕರಣವನ್ನು ಪೋಪ್ ಫ್ರಾನ್ಸಿಸ್ ಅವರ ಗಮನಕ್ಕೆ ತರಲು ಕೂಡ ಅವಕಾಶ ನೀಡಬೇಕು ಎಂದೂ ಮನವಿ ಮಾಡಿದ್ದಾರೆ. **(ಉದಯವಾಣಿ 29–10–2019)**

## ಐಸಿಸ್ ಬೆನ್ನೆಲುಬು ಬಾಗ್ದಾದಿ ಹತ

### ಸುರಂಗದೊಳಗೆ ಜೀವ ಬಿಟ್ಟ!

**'ಕಾಯ್ಲಾಮುಲ್ಲರ್' ಹೆಸರಿನ ಕಾರ್ಯಾಚರಣೆಯ ವೇಳೆ ಅದೇ ಬಂಗಲೆಯೊಳಗಿನ ಸುರಂಗ ಮಾರ್ಗದೊಳಗಿನಿಂದ ತನ್ನೊಂದಿಗೆ ತನ್ನ ಮೂವರು ಮಕ್ಕಳನ್ನು ಹಿಡಿದುಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದ ಬಾಗ್ದಾದಿಯನ್ನು ಯೋಧರು ಬೆನ್ನಟ್ಟಿದ್ದರು. ಓಡಿ ಹೋಗುವ ವೇಳೆ ಸುರಂಗದ ಮತ್ತೊಂದು ತುದಿ ಮುಚ್ಚಿದ್ದರಿಂದಾಗಿ ಕಂಗಾಲಾದ ಆತ ಬೇರೆ ದಾರಿ ಕಾಣದೆ ತನ್ನ ಸೊಂಟದಲ್ಲಿ ಕಟ್ಟಿಕೊಂಡಿದ್ದ ಬಾಂಬನ್ನು ಸ್ಫೋಟಿಸಿಕೊಂಡು ಮೂವರು ಮಕ್ಕಳೊಂದಿಗೆ ಸಾವನ್ನಪ್ಪಿದ್ದಾನೆ.**

**ವಾಷಿಂಗ್ಟನ್, ಅ.28: ಕುಖ್ಯಾತ ಐಸಿಸ್ ಉಗ್ರ ಸಂಘಟನೆಯ ಸಂಸ್ಥಾಪಕ ಅಬು ಬಕ್ರ್ ಅಲ್ – ಬಾಗ್ದಾದಿ (48)ಯನ್ನು ರವಿವಾರ ಅಮೆರಿಕ ಸೇನೆಯು ಸಿರಿಯಾದಲ್ಲಿದ್ದ ಆತನ ರಹಸ್ಯ ಅಡಗುದಾಣದೊಳಕ್ಕೆ ನುಗ್ಗಿ ಬಲಿ ಪಡೆದಿದೆ.**

2011ರಲ್ಲಿ ಉಸಾಮಾ ಬಿನ್ ಲಾದನ್ ಅಡಗಿದ್ದ ಪಾಕಿಸ್ಥಾನದ ಅಡಗುದಾಣದ ಮೇಲೆ ಅಮೆರಿಕದ ಸೀಲ್ ಪಡೆ ದಾಳಿ ನಡೆಸಿದ ಮಾದರಿಯಲ್ಲೇ ರವಿವಾರ ಸಿರಿಯಾದ ಅಲೆಪೊ ಪ್ರಾಂತ್ಯದ ಬರಿಶಾ ಗ್ರಾಮದ ಹೊರವಲಯದಲ್ಲಿದ್ದ ಬಂಗಲೆಯ ಮೇಲೆ ಅಮೆರಿಕ ಸೇನೆಯ ಡೆಲ್ಟಾ ಫೋರ್ಸ್ ವಿಭಾಗದ ಸೈನಿಕರು ದಾಳಿ ನಡೆಸಿದರು. ಅಲ್ಲಿ ತನ್ನ ಪತ್ನಿಯರು, ಮಕ್ಕಳು, ಸಂಬಂಧಿಕರು ಮತ್ತು ಅನುಯಾಯಿಗಳ ಜತೆಗೆ ಬಾಗ್ದಾದಿ ವಾಸವಾಗಿದ್ದ.

**ನಾಯಿಯಂತೆ ಸತ್ತ: ಟ್ರಂಪ್**

ಬಾಗ್ದಾದಿ ಹತ್ಯೆ ವಿಚಾರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರವಿವಾರ ಶ್ವೇತ ಭವನದಿಂದ ಮಾಡಲಾದ ವೀಡಿಯೋ ನೇರ ಪ್ರಸಾರದ ಮೂಲಕ ಅಧಿಕೃತವಾಗಿ ಪ್ರಕಟಿಸಿದರು. 'ಜಗತ್ತಿನ ನಂ.1 ಭಯೋತ್ಪಾದಕ, ಒಂದು ನಾಯಿಯಂತೆ, ಹೇಡಿಯಂತೆ ಸತ್ತಿದ್ದಾನೆ' ಎಂದು ತಿಳಿಸಿದರು.

**ಸೇನೆಯ ಶ್ವಾನಕ್ಕೆ ಗಾಯ**

ಕಾರ್ಯಾಚರಣೆ ವೇಳೆ, ಸೇನೆಯ ಶ್ವಾನ ಗಾಯಗೊಂಡಿದೆಯಷ್ಟೇ ಎಂದು ಟ್ರಂಪ್ ತಿಳಿಸಿದ್ದಾರೆ. ಆದರೆ ಅಮೆರಿಕದ ರಕ್ಷಣಾ ಸಚಿವ ಮಾರ್ಕ್ ಎಸ್ಪರ್ ಇಬ್ಬರು ಯೋಧರಿಗೂ ಗಾಯಗಳಾಗಿವೆ ಎಂದಿದ್ದಾರೆ. **(ಉದಯವಾಣಿ 29–10–2019)**

## ದ್ವೇಷಕ್ಕೆ ಜಕೀರ್ ದೇಣಿಗೆ

ಮೆಲ್ಬರ್ನ್: ವಿವಾದಾತ್ಮಕ ಇಸ್ಲಾಮಿಕ್ ಧಾರ್ಮಿಕ ವಿದ್ವಾಂಸ ಜಕೀರ್ ನಾಯ್ಕ್‌ರ ಸಂಸ್ಥೆ ಕೋಟ್ಯಂತರ ರೂ. ಸಂಗ್ರಹ ಮಾಡಿದೆ ಎಂದು ಕೇಂದ್ರ ಗೃಹ ಖಾತೆ ಸಹಾಯಕ ಸಚಿವ ಜಿ. ಕಿಶನ್ ರೆಡ್ಡಿ ಆರೋಪಿಸಿದ್ದಾರೆ. ಅದನ್ನು ತ್ವೇಷಮಯ ವಾತಾವರಣ ಸೃಷ್ಟಿಸುವುದಕ್ಕೆ ಬಳಕೆ ಮಾಡಿದ್ದಾರೆ ಎಂದು ದೂರಿದ್ದಾರೆ. ಮೆಲ್ಬರ್ನ್‌ನಲ್ಲಿ ನಡೆಯುತ್ತಿರುವ 'ನೋ ಮನಿ ಫಾರ್ ಟೆರರ್' ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರಚೋದನಾಕಾರಿ ವಾತಾವರಣ ಸೃಷ್ಟಿಸಲೆಂದು ಎನ್‌ಪಿಒಗಳನ್ನು ಅವರು ಬಳಕೆ ಮಾಡಿದ್ದಾರೆ ಎಂದಿದ್ದಾರೆ.

**(ಉದಯವಾಣಿ 9–11–2019)**

## 4ನೇ ಕ್ಲಾಸ್ ಪರೀಕ್ಷೆ ಬರೆದ 105ರ ಅಜ್ಜಿ!

ಕೊಲ್ಲಂ, ನ. 20: ಶತಾಯುಷಿ ಪೂರೈಸಿದ ಬಳಿಕ ತನ್ನ ಶಿಕ್ಷಣದ ಆಸೆಯನ್ನು ಕೇರಳದ ಅಜ್ಜಿಯೊಬ್ಬರು ಈಡೇರಿಸಿಕೊಂಡಿದ್ದಾರೆ. ಕೊಲ್ಲಂ ಜಿಲ್ಲೆಯ ಪಾರಕುಲಂ ಗ್ರಾಮದ 105 ವರ್ಷದ ಇಳಿ ವಯಸ್ಸಿನ ಭಗೀರಥಿ ಅಮ್ಮ ಎಂಬ ಅಜ್ಜಿ ಕೇರಳ ರಾಜ್ಯ ಸಾಕ್ಷರತಾ ಮಂಡಳಿ ನಡೆಸುವ 4ನೇ ತರಗತಿ ತತ್ಸಮಾನದ ಪರೀಕ್ಷೆ ಬರೆದು ಇತಿಹಾಸ ಸೃಷ್ಟಿಸಿದ್ದಾರೆ. ಇವರಿಗೆ 6 ಮಂದಿ ಮಕ್ಕಳು ಹಾಗೂ 16 ಮಂದಿ ಮೊಮ್ಮಕ್ಕಳಿದ್ದಾರೆ. 9ನೇ ವಯಸ್ಸಿನಲ್ಲಿ ತಮ್ಮ ಕಿರಿಯ ಸೋದರರನ್ನು ನೋಡಿಕೊಳ್ಳುವ ಸಲುವಾಗಿ 3ನೇ ತರಗತಿಗೆ ಶಿಕ್ಷಣವನ್ನು ಮೊಟಕುಗೊಳಿಸಿದ್ದರು. ಇದೀಗ ಕೇರಳದ ಸ್ವಾಯತ್ತ ಸಂಸ್ಥೆಯಾದ ಸಾಕ್ಷರತಾ ಮಂಡಳಿ ನೆರವಿನೊಂದಿಗೆ 4ನೇ ತರಗತಿ ಪರೀಕ್ಷೆ ಬರೆದಿದ್ದಾರೆ. ಶಿಕ್ಷಣ ಕಲಿಯಲು ಈ ಅಜ್ಜಿ ಪ್ರೇರಣೆಯಾಗಿದ್ದಾರೆ ಎಂದು ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**(ಉದಯವಾಣಿ 21–11–2019)**

## ಸೂರ್ಯನಿಗಿಂತ 70 ಪಟ್ಟು ದೈತ್ಯ ಕಪ್ಪುರಂಧ್ರ ಪತ್ತೆ

ಬೀಜಿಂಗ್, ನ. 28: ಸೂರ್ಯನಿಗಿಂತ ಬರೋಬ್ಬರಿ 70 ಪಟ್ಟು ದೈತ್ಯವಾದ ಯಾರೂ ಊಹಿಸಿರದಂಥ ಕಪ್ಪು ರಂಧ್ರವೊಂದು ಕ್ಷೀರಪಥದ ತಾರಾಗಣದಲ್ಲಿ ಪತ್ತೆಯಾಗಿದೆ. ನಕ್ಷತ್ರಗಳ ವಿಕಸನದ ಕುರಿತು ಸದ್ಯಕ್ಕಿರುವ ಮಾದರಿಗಳಿಗೇ ಇದು ಸವಾಲೆಸೆಯುವಂತಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಕ್ಷೀರಪಥದಲ್ಲಿ ಸುಮಾರು 100 ದಶಲಕ್ಷ ಕಪ್ಪು ರಂಧ್ರಗಳಿವೆ (ಬೃಹತ್ ನಕ್ಷತ್ರಗಳ ಪತನದಿಂದ ಸೃಷ್ಟಿಯಾಗುವಂಥದ್ದು). ಈವರೆಗೆ ಕಂಡುಕೊಂಡಂತೆ ನಮ್ಮ ತಾರಾಪುಂಜದಲ್ಲಿರುವ ಒಂದು ಕಪ್ಪು ರಂಧ್ರದ ದ್ರವ್ಯರಾಶಿಯು ಸೂರ್ಯನಿಗಿಂತ ಗರಿಷ್ಠ 20 ಪಟ್ಟು ಬೃಹತ್ ಆಗಿದೆಯೇ ಹೊರತು, ಅದಕ್ಕಿಂತ ದೈತ್ಯವಾದದ್ದು ಎಂದೂ ಪತ್ತೆಯಾಗಿರಲಿಲ್ಲ. ಆದರೆ, ಈಗ ಚೈನೀಸ್ ಅಕಾಡೆಮಿ ಆಫ್ ಸೈನ್ಸಸ್‌ನ ರಾಷ್ಟ್ರೀಯ ಖಗೋಳ ವೀಕ್ಷಣಾಲಯದ ವಿಜ್ಞಾನಿಗಳ ನೇತೃತ್ವದ ಅಂತಾರಾಷ್ಟ್ರೀಯ ತಂಡವು ಎಲ್ಲ ಊಹೆಗಳನ್ನೂ ಸುಳ್ಳಾಗಿಸಿ ಈ ದೈತ್ಯ ಕಪ್ಪು ರಂಧ್ರವನ್ನು ಪತ್ತೆ ಮಾಡಿದೆ. ಇದಕ್ಕೆ ಎಲ್‌ಬಿ–1 ಎಂದು ಹೆಸರಿಡಲಾಗಿದ್ದು. ಇದು ಭೂಮಿಯಿಂದ 15 ಸಾವಿರ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ. ಅಲ್ಲದೆ ಸೂರ್ಯನಿಗಿಂತ 70 ಪಟ್ಟು ದೈತ್ಯಾಕಾರದ್ದಾಗಿದೆ. ಇಂಥದ್ದೊಂದು ಅಭೂತಪೂರ್ವ ಕಪ್ಪು ರಂಧ್ರ ಜನ್ಮತಾಳಿದ್ದಾದರೂ ಹೇಗೆ ಎಂಬ ಬಗ್ಗೆ ಅಧ್ಯಯನ ನಡೆಯಬೇಕಾಗಿದೆ ಎಂದಿದ್ದಾರೆ ಪ್ರೊಫೆಸರ್ ಲಿಯು ಜಿಫೆಂಗ್. **(ಉದಯವಾಣಿ 29–11–2019)**

## 50 ಪೈಸೆ ಸಾಲ ಬಾಕಿ: ಗ್ರಾಹಕಗೆ ಎಸ್‌ಬಿಐ ನೋಟೀಸ್ ಜಾರಿ!

ಜೈಪುರ, ಡಿ. 15: ಅತ್ತ ವಿಜಯ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿಯಂಥ ನೂರಾರು ಉದ್ಯಮಿಗಳು ಸಾವಿರಾರು ಕೋಟಿ ರೂ. ಸಾಲ ಬಾಕಿ ಉಳಿಸಿಕೊಂಡು ವಿದೇಶಕ್ಕೆ ಪರಾರಿಯಾಗಿದ್ದರೆ, ಇತ್ತ 50 ಪೈಸೆ ಬಾಕಿ ಉಳಿಸಿಕೊಂಡಿದ್ದಾನೆ ಎಂಬ ಕಾರಣಕ್ಕೆ ಗ್ರಾಹಕನೊಬ್ಬನಿಗೆ ಎಸ್‌ಬಿಐ ನೋಟಿಸ್ ಜಾರಿ ಮಾಡಿದೆ!

ಅಚ್ಚರಿಯಾದರೂ ಇದು ಸತ್ಯ. '50 ಪೈಸೆ ಸಾಲ ಪಾವತಿಸಲು ಬಾಕಿ ಇದ್ದು, ಕೂಡಲೇ ಅದನ್ನು ಪಾವತಿಸಿ. ಇಲ್ಲದಿದ್ದರೆ ಕಾನೂನಾತ್ಮಕ ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಬರೆದಿರುವ ನೋಟೀಸ್ ಅನ್ನು ರಾತ್ರೋರಾತ್ರಿ ಬ್ಯಾಂಕ್ ಅಧಿಕಾರಿಗಳು ಬಂದು ರಾಜಸ್ಥಾನದ ಜಿತೇಂದ್ರ ಸಿಂಗ್ ಅವರ ಮನೆ ಬಾಗಿಲಿಗೆ ಅಂಟಿಸಿ ಹೋಗಿದ್ದಾರೆ. ಇನ್ನೂ ವಿಶೇಷವೆಂದರೆ, 50 ಪೈಸೆಯನ್ನು ಪಾವತಿಸಲು ಬ್ಯಾಂಕ್‌ಗೆ ಹೋದರೆ, ಅದನ್ನು ಸ್ವೀಕರಿಸಲೂ ಬ್ಯಾಂಕ್ ಹಿಂದೇಟು ಹಾಕಿದೆ ಎನ್ನುವುದು ಸಿಂಗ್ ಆರೋಪ. 'ನನ್ನ ಬೆನ್ನುಮೂಳೆಗೆ ಗಾಯವಾಗಿರುವ ಕಾರಣ, ನನ್ನ ಅಪ್ಪ ಬ್ಯಾಂಕ್‌ಗೆ ಹೋಗಿ ಬಾಕಿ ಮೊತ್ತ ಪಾವತಿಸಿ, ಎನ್‌ಒಸಿ(ನಿರಾಕ್ಷೇಪಣಾ ಪತ್ರ) ಪಡೆಯಲು ಮುಂದಾಗಿದ್ದರು. ಆದರೆ, ಬಾಕಿ ಮೊತ್ತವನ್ನು ಪಾವತಿಸಲು ಬ್ಯಾಂಕ್‌ನವರೇ ಸಿದ್ಧರಿಲ್ಲ, ಕೊಟ್ಟ ಹಣ ಸ್ವೀಕರಿಸದೇ, ನೋಟೀಸ್ ಜಾರಿ ಮಾಡಿರುವ ಬ್ಯಾಂಕ್ ವಿರುದ್ಧ ಕಾನೂನು ಹೋರಾಟ ಮಾಡುತ್ತೇನೆ' ಎಂದಿದ್ದಾರೆ ಸಿಂಗ್. **(ಉದಯವಾಣಿ 16–12–2019)**

## ವಖ್‌ಫೆ ಜದೀದ್ ಬಗ್ಗೆ ಸುತ್ತೋಲೆ

**"ಅಲ್ಲಾಹನ ಅನುಗ್ರಹದಿಂದ ಧನತ್ಯಾಗವೆಂಬುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನ ವಿಶೇಷವಾದ ಗುಣವಾಗಿದೆ. ಏಕೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಪವಿತ್ರ ಖುರ್‌ಆನ್ ಹಾಗೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆಜ್ಞೆಗಳ ಮತ್ತು ನಿರ್ದೇಶನಗಳ ಬೆಳಕಿನಲ್ಲಿ ಈ ಸಾಂಪತ್ತಿಕ ತ್ಯಾಗದ ಬಗ್ಗೆ ವಿಶೇಷವಾದ ಅರಿವನ್ನು ನೀಡಿರುವರು"** ಎಂದು ನಮ್ಮ ಪ್ರಿಯ ನೇತಾರರಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೇಳಿದ್ದರು.

ಖಲೀಫತುಲ್ ಮಸೀಹರ ಮೇಲಿನ ಸುವರ್ಣ ನುಡಿಗಳ ಬೆಳಕಿನಲ್ಲಿ ನಾವು ಅಲ್ಲಾಹನ ಸಂಪ್ರೀತಿಗಾಗಿ ಮತ್ತು ಖಲೀಫತುಲ್ ಮಸೀಹರ ಪ್ರಾರ್ಥನೆಯ ವಾರಸುದಾರರಾಗಲಿಕ್ಕಾಗಿ ಧನತ್ಯಾಗದಲ್ಲಿ ಮುಂಚೂಣಿಯಲ್ಲಿರಬೇಕಾದುದು ನಮ್ಮ ಕರ್ತವ್ಯವಾಗಿದೆ. ಈಗ ಭಾರತದ ಕೆಲವು ರಾಜ್ಯಗಳ ಅನಿರೀಕ್ಷಿತ ಪರಿಸ್ಥಿತಿಗಳು ವಖ್‌ಫೇ ಜದೀದ್ ಚಂದಾದ ವಸೂಲಿಯನ್ನೂ ಬಾಧಿಸಿದೆ. ಆದ್ದರಿಂದ ಈ ಬಗ್ಗೆ ಜಮಾಅತಿನ ಸಹೋದರ ಸಹೋದರಿಯರು ವಿಶೇಷವಾಗಿ ಸಹಕರಿಸಬೇಕು ಮತ್ತು ದುಆ ಮಾಡಬೇಕೆಂದು ವಿನಂತಿಸುತ್ತೇವೆ.

ವರ್ಷಾಂತ್ಯದಲ್ಲಿ ನಝಾಮತ್ ವಖ್‌ಫೆ ಜದೀದ್ ಕಡೆಯಿಂದ ಸಯ್ಯದುನಾ ಖಲೀಫತುಲ್ ಮಸೀಹರಿಗೆ ಸಮರ್ಪಿಸಲ್ಪಡುವ ವಾರ್ಷಿಕ ರಿಪೋರ್ಟಿನಲ್ಲಿ ವಸೂಲಿಯ ವಿವರ ಮತ್ತು ವಖ್‌ಫೆ ಜದೀದ್ ಚಂದಾದ ಪಾವತಿಯಲ್ಲಿ ಮೊದಲ ಹತ್ತು ಸ್ಥಾನವನ್ನು ಪಡೆಯುವ ಜಮಾಅತುಗಳ/ಜಿಲ್ಲೆಗಳ/ರಾಜ್ಯಗಳ ಹೆಸರುಪಟ್ಟಿಯನ್ನು ಕಳುಹಿಸಬೇಕೆಂದು ನಿರ್ದೇಶಿಸಲಾಗಿದೆ.

ಆದ್ದರಿಂದ ವಾಗ್ದಾನಗಳ ಪ್ರಕಾರ ನಮ್ಮ ಜಮಾಅತ್/ಜಿಲ್ಲೆಯ ವಖ್‌ಫೆ ಜದೀದ್ ಚಂದಾ ನೂರು ಪ್ರತಿಶತ ವಸೂಲಿ ಮಾಡಿ ಮರ್ಕಝಿಗೆ ಕಳುಹಿಸಲಾಗಿದೆಯೇ ಎಂಬುದನ್ನು ಸರಿಯಾಗಿ ಅವಲೋಕಿಸಿರಿ. ವಸೂಲಿ ಪೂರ್ತಿ ಆಗಿಲ್ಲವಾದರೆ ಆದಷ್ಟು ಬೇಗನೆ ನೂರು ಪ್ರತಿಶತ ವಸೂಲಿ ಮಾಡಿ ಕೇಂದ್ರಕ್ಕೆ ಕಳುಹಿಸಿರಿ. ಇದರಿಂದ ನಾವು ಖಲೀಫತುಲ್ ಮಸೀಹರ ವಿಶೇಷವಾದ ಪ್ರಾರ್ಥನೆಗಳಿಂದ ಬಹುಪಾಲು ಪಡೆಯುವ ಸೌಭಾಗ್ಯ ಪಡೆಯುವಂತಾಗುವುದು. ಹಝ್ರತ್ ಖಲೀಫತುಲ್ ಮಸೀಹರಿಂದ ನಿಶ್ಚಯಿಸಲ್ಪಟ್ಟ ಟಾರ್ಗಟನ್ನು ತ್ವರಿತವಾಗಿ ತಲುಪಲು ಅಲ್ಲಾಹನು ನಮಗೆ ಶಕ್ತಿ ನೀಡಲಿ – ಆಮೀನ್.

ವಸ್ಸಲಾಮ್

**ನಾಝಿಮ್ ಮಾಲ್ ವಖ್‌ಫೆ ಜದೀದ್ ಭಾರತ**

## ಮಾಜಿ ರಾಜ್ಯಪಾಲ ಟಿ.ಎನ್. ಚತುರ್ವೇದಿ ನಿಧನಕ್ಕೆ ಸಂತಾಪ



ಮಂಗಳೂರು: ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲ ತ್ರಿಲೋಕಿನಾಥ ಚತುರ್ವೇದಿ (90) ಅವರ ನಿಧನಕ್ಕೆ (6–1–2020) "ಯುಗರಶ್ಮಿ" ಸಂಪಾದಕರು ಸಂತಾಪ ವ್ಯಕ್ತಪಡಿಸಿದ್ದಾರೆ.

ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ, "ಯುಗರಶ್ಮಿ" ಸಂಪಾದಕರಾದ ಮುಹಮ್ಮದ್ ಯೂಸುಫ್‌ರವರು ಭಾಷಾಂತರಿಸಿದ ಖುರ್‌ಆನಿನ ಅರಬಿ ಮೂಲ ಸಹಿತ ಕನ್ನಡ ಅನುವಾದ ಕೃತಿಯನ್ನು ರಾಜ್ಯಪಾಲರು 2005 ಮೇ 16ರಂದು ರಾಜಭವನದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆಗೊಳಿಸಿದುದನ್ನು ಅವರು ಸ್ಮರಿಸಿದ್ದಾರೆ.

# ಅಹ್ಮದಿಯರಿಗೆ ಖಲೀಫರ ಸಂದೇಶ


........ಭಾರತದ ಒಳಗೆ ಸಹ ಸಮಾಚಾರ ದೊರೆತ ಪ್ರಕಾರ ಸಾಕಷ್ಟು ಕೆಟ್ಟ ಸ್ಥಿತಿ ಇದೆ. ಒಟ್ಟಾರೆಯಾಗಿ ಲೋಕದ ಸ್ಥಿತಿ ಹೇಗಿದೆ ಎಂದರೆ ಅದು ತನ್ನ ವಿನಾಶಕ್ಕೆ ಕರೆ ನೀಡುತ್ತಿದೆ. ಮಧ್ಯಪೂರ್ವದ ಸ್ಥಿತಿ ಸಹ ಕೆಟ್ಟುಹೋಗುತ್ತಿದೆ. ಇರಾನ್, ಅಮೇರಿಕ, ಇಸ್ರಾಯೇಲ್ ದೇಶಗಳಲ್ಲಿ ಯುದ್ಧದ ಅಪಾಯ ವರ್ಧಿಸುತ್ತಿದೆ. ಮುಸ್ಲಿಮ್ ದೇಶಗಳಲ್ಲಿ ಪರಸ್ಪರ ಐಕ್ಯವಿಲ್ಲ. ಆದುದರಿಂದ ಲೋಕವು ವಿನಾಶದಿಂದ ರಕ್ಷಿಸಲ್ಪಡಲು ಮತ್ತು ಸೃಷ್ಟಿಕರ್ತನ ಕಡೆಗೆ ಬರಲು ನಾವು ಬಹಳ ಪ್ರಾರ್ಥನೆ ಮಾಡಬೇಕು. ಅಲ್ಲಾಹನು ಅನುಗ್ರಹದೋರಲಿ. ಅವರಿಗೆ ಬುದ್ಧಿ ಮತ್ತು ತಿಳುವಳಿಕೆ ನೀಡಲಿ.


ಹೊಸ ವರ್ಷಾರಂಭವಾಗಿದೆ. ನಾವು ಒಬ್ಬರಿನ್ನೊಬ್ಬರಿಗೆ ಶುಭಾಶಯ ಕೋರುತ್ತಿದ್ದೇವೆ. ಆದರೆ ಅಂಧಕಾರ ಗಾಢವಾಗುತ್ತಾ ಇದೆ. ಆದುದರಿಂದ ಈ ವರ್ಷ ಅನುಗ್ರಹಭರಿತವಾಗಲು ನಾವು ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಬೇಕು: ಅಲ್ಲಾಹನು ಈ ವರ್ಷವನ್ನು ಅನುಗ್ರಹೀತವನ್ನಾಗಿ ಮಾಡಲಿ – ಲೋಕದ ಸರಕಾರಗಳು ತಮ್ಮ ಮೇಧಾವಿತ್ವವನ್ನು ಸಾಬೀತುಗೊಳಿಸಲು ಲೋಕವನ್ನು ವಿನಾಶದ ಕಡೆಗೆ ಒಯ್ಯುವವರಾಗದಿರಲಿ. ಬದಲು, ಅವರು ಲೋಕದಲ್ಲಿ ಶಾಂತಿಯನ್ನೂ ನ್ಯಾಯವನ್ನೂ ಸ್ಥಾಪಿಸುವವರಾಗಲಿ. ತಮ್ಮ ವೈಯಕ್ತಿಕ ಅಹಂಭಾವದಿಂದ ವರ್ತಿಸಿ ತಮ್ಮ ದೇಶದ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಮಾನವರನ್ನು ವಿನಾಶದ ಕಡೆಗೆ ಒಯ್ಯುವವರಾಗದಿರಲಿ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಮುಸ್ಲಿಮ್ ದೇಶಗಳು ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನಾದ ಮಸೀಹ್ ಮೌಊದ್ ಮತ್ತು ಮಹ್‌ದೀ ಮಅ್‌ಹೂದರೊಂದಿಗೆ ಜೋಡಿಸಿಕೊಂಡು ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಪತಾಕೆಯನ್ನು ಹಾರಿಸುವುದರಲ್ಲಿ ಸಹಾಯಕರಾಗಲಿ ಮತ್ತು ತೌಹೀದನ್ನು ಲೋಕದಲ್ಲಿ ಸ್ಥಾಪಿಸುವವರಾಗಲಿ. ಅವರು ಹಝ್‌ರತ್ ಮಸೀಹ್ ಮೌಊದ್‌ರನ್ನು ತೀವ್ರವಾಗಿ ವಿರೋಧಿಸುವವರು ಆಗದಿರಲಿ. ನಾವು ಮೊದಲಿಗಿಂತ ಮಿಗಿಲಾಗಿ ಈ ಕಾಲದ ಇಮಾಮರನ್ನು ನಂಬಿದುದರ ಹಕ್ಕನ್ನು ಈಡೇರಿಸುವವರಾಗುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ. ನಾವು ಈ ಹೊಣೆಗಾರಿಕೆ ನಿರ್ವಹಿಸುತ್ತಾ ಲೋಕದಲ್ಲಿ ತೌಹೀದಿನ ಪತಾಕೆ ಹಾರಿಸುವವರಾಗೋಣ. ಲೋಕವನ್ನು ಪೈಗಂಬರರ(ಸ) ಪತಾಕೆಯ ಕೆಳಗೆ ತರುವವರಾಗೋಣ. ಅದಕ್ಕೋಸ್ಕರ ನಮ್ಮ ಎಲ್ಲ ಸಾಮರ್ಥ್ಯಗಳನ್ನೂ ಉಪಯೋಗಿಸುವವರಾಗೋಣ.


ನಾವು ಈ ರೀತಿ ಯೋಚಿಸುವುದಿಲ್ಲವಾದರೆ, ಈ ರೀತಿ ಯೋಚಿಸಿ ಪ್ರಾರ್ಥಿಸುವುದಿಲ್ಲವಾದರೆ, ನಾವು ನಮ್ಮ ಪ್ರಾರ್ಥನೆಗಳೊಂದಿಗೆ ಹೊಸ ವರ್ಷಕ್ಕೆ ಪ್ರವೇಶಿಸುವುದಿಲ್ಲವಾದರೆ ನಾವು ಹಾರೈಸುವ ಹೊಸ ವರ್ಷದ ಶುಭಾಶಯಗಳು ತೋರಿಕೆಯ ಶುಭಾಶಯಗಳಾಗುವುವು. ಅವುಗಳಿಂದ ಯಾವ ಪ್ರಯೋಜನವೂ ದೊರಕದು.

ಆದುದರಿಂದ ಹೊಸ ವರ್ಷದ ಶುಭಾಶಯ ನಮ್ಮ ಮೇಲೆ ಎಂತಹ ಹೊಣೆಗಾರಿಕೆಗಳನ್ನು ಹೊರಿಸುತ್ತವೆಯೋ ಅದರ ಬಗ್ಗೆ ಪ್ರತಿಯೊಬ್ಬ ಅಹ್ಮದಿ, ದೊಡ್ಡವರು, ಚಿಕ್ಕವರು, ಪುರುಷರು, ಮಹಿಳೆಯರು ಪ್ರಜ್ಞೆಯನ್ನು ಹೊಂದಬೇಕು ಮತ್ತು ಹೊಣೆಗಾರಿಕೆ ನಿರ್ವಹಿಸಲು ತಮ್ಮ ಎಲ್ಲ ಪ್ರಯತ್ನಗಳನ್ನೂ ಸಾಮರ್ಥ್ಯಗಳನ್ನೂ ಬಳಸಬೇಕು. ನಮ್ಮ ಪ್ರಾರ್ಥನೆಗಳಲ್ಲೂ ಅಲ್ಲಾಹನೊಂದಿಗೆ ನಮ್ಮ ಸಂಬಂಧದಲ್ಲೂ ಒಂದು ವಿಶಿಷ್ಟ ಸ್ಥಿತಿಯನ್ನು ಸೃಷ್ಟಿಸಲು ನಾವು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ಮಾತ್ರ ನಾವು ಈ ವರ್ಷದ ವಾಸ್ತವಿಕ ಅನುಗ್ರಹಗಳನ್ನು ಗಳಿಸುವವರಾಗುವೆವು. ಅಲ್ಲಾಹನು ನಮಗೆ ಹಾಗೆ ಮಾಡುವ ಸೌಭಾಗ್ಯ ದಯಪಾಲಿಸುವವನಾಗಲಿ – ಆಮೀನ್.

**(3–1–2020** ರಂದು ಲಂಡನಿನ ಬೈತುಲ್ ಫುತೂಹ್ ಮಸೀದಿಯಲ್ಲಿ ಹಝ್‌ರತ್ ಖಲೀಫತುಲ್ ಮಸೀಹ್ ಮಾಡಿದ ಜುಮುಅ ಖುತ್‌ಬದಿಂದ)















**NEW PUBLICATIONS**
**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**







ಬೆಂಗಳೂರಿನ ಪುಸ್ತಕ ಉತ್ಸವ 2019ರಲ್ಲಿ ಅಹ್ಮದಿಯಾ ಬುಕ್‌ಸ್ಟಾಲ್ – ಅಕ್ಟೋಬರ್ 2ರಿಂದ 8ರ ವರೆಗೆ







ಮಂಗಳೂರಿನ ಹ್ಯುಮಾನಿಟಿ ಫಸ್ಟ್ ಘಟಕದ ವತಿಯಿಂದ ಕೊಳಂಬೆ (ಬೆಳ್ತಂಗಡಿ ತಾಲೂಕು) ನೆರೆ ಸಂತ್ರಸ್ತರಿಗೆ ನೆರವು: ನವೆಂಬರ್ 17ರಂದು

ಮಂಗಳೂರಿನ ಟಿ.ಎಂ.ಎ. ಪೈ ಇಂಟರ್‌ನ್ಯಾಶನಲ್ ಕನ್‌ವೆನ್‌ಶನ್ ಸೆಂಟರ್‌ನಲ್ಲಿ 20–10–2019ರಂದು V4 ನ್ಯೂಸ್ ಚ್ಯಾನೆಲ್ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಕನ್ನಡ ಮುಖವಾಣಿ "ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್‌ರನ್ನು ಅವರ 45 ವರ್ಷಗಳ ಸೇವೆಯನ್ನು ಗುರುತಿಸಿ ಸಂಸ್ಥೆಯ ಎಂ.ಡಿ. ಲಕ್ಷ್ಮಣ ಕುಂದರ್ ಸನ್ಮಾನಿಸಿದರು.



Registered with the Registrar of Newspapers for India No. R.N. 27354/75
**Yugarashmi** Kannada Quarterly, **January - 2020.** Price : **Rs. 15/-**


# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone, ipode, and Android



**Quran**
Read the Holy Quran in easy Yassarnal Quran Font



**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages



**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore